ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 5 ಗುರುವಾರ 2022

ಸಂಪುಟ: 43 | ಸಂಚಿಕೆ: 19 | ಪುಟಗಳು: 10

ಮೈಸೂರು ಮಿತ್ರ 43 ಅತ್ಯುತ್ತಮ ಪತ್ರಿಕೋದ್ಯಮ

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಸಂಪುಟ ಭವಿಷ್ಯ ಹೈಕಮಾಂಡ್ ನಿರ್ಧಾರ

- ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂತ್ರ
- ವಿದೇಶ ಪ್ರವಾಸದಿಂದ ವಾಪಸ್ಸಾದ ನಂತರ ಪ್ರಧಾನಿ ತಂತ್ರ

ಬೆಂಗಳೂರು, ಮೇ 4–ಕೇಂದ್ರ ಗೃಹ ಸಚಿವ ಅಮಿತ್ ಶಾ ಬೆಂಗಳೂರಿಗೆ ಬಂದು, ಹೋಗಿ ಆಗಿದೆ. ಈಗ ಎಲ್ಲರ ಚಿತ್ತ ದೆಹಲಿಯತ್ತ ನೆಟ್ಟಿದ್ದು, ನಾಯಕತ್ವ ಬದಲಾವಣೆ ಮಾಡುತ್ತಾರೆಯೇ, ಸಂಪುಟ ಪುನರ್ರಚನೆಯೇ, ಸಂಪುಟ ವಿಸ್ತರಣೆಯೇ ಎಂಬ ಚರ್ಚೆ ಈಗ ಆರಂಭವಾಗಿದೆ.

ಇಂದು ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಸಿಎಂ ಬಸವರಾಜ ಬೊಮ್ಮಾಯಿ, ರಾಜ್ಯ ಸಚಿವ ಸಂಪುಟ ವಿಸ್ತರಣೆ ಅಥವಾ ಪುನರ್ರಚನೆ ವಿಚಾರವನ್ನು ಅಮಿತ್ ಶಾ ದೆಹಲಿಗೆ ಹೋದ ಬಳಿಕ ಮಾತನಾಡುತ್ತೇವೆ ಎಂದಿದ್ದಾರೆ. ಅಮಿತ್ ಶಾ ನಿರ್ಧಾರ ಹೊರಬಂದ ನಂತರ ಎಲ್ಲವೂ ತೀರ್ಮಾನವಾಗಲಿದೆ. ಮುಂದಿನ ವಾರ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಸಿಇಒಗಳ ಪ್ರತ್ಯೇಕ ಸಭೆಯಿದೆ. ವಿವಿಧ ಇಲಾಖೆಗಳ ಅಭಿವೃದ್ಧಿ, ಅನುಷ್ಠಾನದ ಬಗ್ಗೆ ಚರ್ಚಿಸುತ್ತೇವೆ ಎಂದು ಹೇಳಿದರು.

ಮುಂದಿನ ವರ್ಷ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿಯೊಳಗೆ ಏನೇ ಬದಲಾವಣೆ ಮಾಡುವುದಿದ್ದರೂ ಹೈಕಮಾಂಡ್ ಅಳೆದು ತೂಗಿ ಮಾಡಲಿದೆ. ಅಸಮಾಧಾನ ಸ್ಫೋಟವಾಗದಂತೆ ನೋಡಿಕೊಳ್ಳಬೇಕೆಂದು ಹೈಕಮಾಂಡ್ ಸೂಚನೆ ನೀಡಿದೆ. ಪ್ರಧಾನಿ ಮೋದಿಯವರು ಯುರೋಪ್ ದೇಶಗಳ ಪ್ರವಾಸ ಮುಗಿಸಿ ದೆಹಲಿಗೆ ಗುರುವಾರ ವಾಪಸ್ಸಾಗಲಿದ್ದಾರೆ. ಅದರ ನಂತರವೇ ರಾಜ್ಯ ಸಚಿವ ಸಂಪುಟದ ಬಗ್ಗೆ ನಿರ್ಧಾರವಾಗಲಿದೆ.

ಅಭಿವೃದ್ಧಿಯೇ ನನ್ನ ಮಂತ್ರ: ತಮ್ಮ ಸರ್ಕಾರದ ವಿರುದ್ಧದ ಆರೋಪಗಳು ಮತ್ತು ನಾಯಕತ್ವ ಬದಲಾವಣೆಯ ಊಹಾಪೋಹಗಳ ನಡುವೆಯೇ ಬಜೆಟ್‌ನಲ್ಲಿ ಘೋಷಿಸಲಾದ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಪೂರ್ಣಪ್ರಮಾಣದಲ್ಲಿ ಪ್ರಯತ್ನಗಳನ್ನು ಮಾಡುತ್ತಿದ್ದೇನೆ ಎಂದು ಮುಖ್ಯಮಂತ್ರಿ ಬೊಮ್ಮಾಯಿ ತಿಳಿಸಿದರು.


ಬಜೆಟ್‌ನಲ್ಲಿ ಘೋಷಿಸಲಾದ ಶೇಕಡಾ 80ಕ್ಕೂ ಹೆಚ್ಚು ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸರ್ಕಾರ ಆದೇಶಗಳನ್ನು (ಜಿಒ) ಹೊರಡಿಸಿದ್ದು, ಉಳಿದ ಯೋಜನೆಗಳ ಕುರಿತು ಶೀಘ್ರದಲ್ಲೇ ಘೋಷಣೆ ಮಾಡಲಾಗುತ್ತದೆ. ವ್ಯವಹಾರ ಮತ್ತು ಅಭಿವೃದ್ಧಿ ಕಾರ್ಯಗಳು ಶ್ರದ್ಧೆಯಿಂದ ಪ್ರಾರಂಭವಾಗಬೇಕು ಎಂದು ಅಧಿಕಾರಿಗಳಿಗೆ ಸ್ಪಷ್ಟ ಸಂದೇಶ ರವಾನಿಸಲಾಗಿದೆ. ಕಾಮಗಾರಿಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಿ ಜನರ ಮನೆ ಬಾಗಿಲಿಗೆ ಸೇವೆಗಳನ್ನು ತಲುಪಿಸುವತ್ತ ಗಮನ ಹರಿಸಲಾಗುತ್ತಿದೆ. ಸರ್ಕಾರ ಆದೇಶ ಹೊರಡಿಸಿದ ಬಳಿಕ, ಸಂಬಂಧಿಸಿದ ಇಲಾಖೆಗಳು ಅನುಷ್ಠಾನಕ್ಕೆ ಮುಂದಾಗಬೇಕು. ಈ ನಿಟ್ಟಿನಲ್ಲಿ ಯೋಜನೆಗಳು ವಿಳಂಬವಾದರೆ ಸರಕಾರ ಇಲಾಖೆಗಳನ್ನು ಪ್ರಶ್ನಿಸಬಹುದಾಗಿದೆ. ಯೋಜನೆಗಳಿಗೆ ಆದ್ಯತೆ ನೀಡುವ ಸರ್ಕಾರದ ಉದ್ದೇಶದ ಬಗ್ಗೆ ತಿಳಿಸಲು ಮುಂದಿನ ವಾರ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಗುತ್ತದೆ ಎಂದರು.

ಅಭಿವೃದ್ಧಿಯನ್ನು ವಿವಾದಗಳತ್ತ ತಿರುಗಿಸುವುದು ಪ್ರತಿಪಕ್ಷಗಳ ಆಟವಾಗಿದೆ. ಜನರಿಗೆ ಅಭಿವೃದ್ಧಿ ಮುಖ್ಯವಾಗಿದ್ದು, ಈ ನಿಟ್ಟಿನಲ್ಲಿ ಕಾರ್ಯಸೂಚಿಯನ್ನು ಮುಂದುವರಿಸಲು ನಿರ್ಧರಿಸಿದ್ದೇನೆ. ನನ್ನ ರಾಜಕೀಯ ಜೀವನದಲ್ಲಿ ಇಂತಹ ತಂತ್ರಗಳನ್ನು ನಾನು ಸಾಕಷ್ಟು ನೋಡಿದ್ದೇನೆಂದು ಸಿಎಂ ಬೊಮ್ಮಾಯಿ ಹೇಳಿದರು.

ಸರ್ಕಾರದ ವಿರುದ್ಧದ ಆರೋಪಗಳು ಆಧಾರರಹಿತ ಮತ್ತು ರಾಜಕೀಯ ಪ್ರೇರಿತವಾಗಿದೆ. ಪ್ರತಿಪಕ್ಷಗಳು ಬಹಳಷ್ಟು ಅನುತ್ಪಾದಕ ವಿಚಾರಗಳನ್ನು ಎತ್ತಲು ಪ್ರಯತ್ನಿಸುತ್ತಿವೆ. ಜನರ ಸಮಸ್ಯೆಗಳು ಅಥವಾ ಅಭಿವೃದ್ಧಿಯ ಬಗ್ಗೆ ತಲೆಕೆಡಿಸಿಕೊಳ್ಳುವಲ್ಲಿ ಪ್ರತಿಪಕ್ಷಗಳು ವಿಫಲವಾಗಿವೆ. ಆದರೆ, ನನ್ನ ▶ 8ನೇ ಪುಟಕ್ಕೆ

ಇಂದು ನಡೆಯಬೇಕಿದ್ದ ಸಂಪುಟ ಸಭೆ ಹಠಾತ್ ಮುಂದೂಡಿಕೆ

ಬೆಂಗಳೂರು, ಮೇ 4(ಕೆಎಂಶಿ)– ನಾಳೆ ನಡೆಯಬೇಕಿದ್ದ ಸಂಪುಟ ಸಭೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಠಾತ್ ಮುಂದೂಡಿದ್ದಾರೆ. ವರಿಷ್ಠರ ಸಲಹೆಯಂತೆ ಒಂದು ವಾರ ಕಾಲ ಮುಂದೂಡಿರುವುದು ಹಲವು ಊಹಾಪೋಹಗಳಿಗೆ ಆಸ್ಪದ ನೀಡಿದೆ. ಉದ್ದೇಶಿತ ಸಂಪುಟ ಸಭೆಯಲ್ಲಿ ಕೆಲವು ಮಹತ್ವದ ತೀರ್ಮಾನ ಕೈಗೊಳ್ಳಲು ಮುಖ್ಯಮಂತ್ರಿ ನಿರ್ಧರಿಸಿದ್ದರು. ಆದರೆ, ಇದಕ್ಕೆ ವರಿಷ್ಠರು ತಾತ್ಕಾಲಿಕ ಬ್ರೇಕ್ ಹಾಕಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ, ರಾಜ್ಯ ಪ್ರವಾಸ ಕೈಗೊಂಡು ಹಿಂದಿರುಗುತ್ತಿದ್ದಂತೆ ಈ ಸಭೆ ರದ್ದಾಗಿದೆ. ಗೃಹ ಸಚಿವರ ರಾಜ್ಯ ಭೇಟಿ ಸಂದರ್ಭದಲ್ಲಿ ರಾಜಕೀಯವಾಗಿ ಕೆಲವು ತೀರ್ಮಾನ ತೆಗೆದುಕೊಳ್ಳುತ್ತಾರೆ ಎಂಬ ಮಾತುಗಳು ಬಿಜೆಪಿ ವಲಯದಲ್ಲಿ ಕೇಳಿಬಂದಿದ್ದವು. ಆದರೆ, ಅಮಿತ್ ಶಾ ಕರೆದಿದ್ದ ಪಕ್ಷದ ಮುಖಂಡರ ಸಭೆ ಮತ್ತು ಕೋರ್ ಕಮಿಟಿ ಸಭೆ ರದ್ದು ಮಾಡಿದ್ದಲ್ಲದೆ, ಯಾವುದೇ ರಾಜಕೀಯ ತೀರ್ಮಾನ ಕೈಗೊಳ್ಳದೇ ಹಿಂದಿರುಗಿದರು. ಆದರೆ, ಸರ್ಕಾರದ ಬೆಳವಣಿಗೆಗಳು ಕೇಂದ್ರ ಗೃಹ ಸಚಿವರಿಗೆ ಬೇಸರ ತಂದು ಯಾವುದೇ ರಾಜಕೀಯ ಸಭೆ ನಡೆಸದೇ ಹಿಂದಿರುಗಿದರು. ವಾಪಸ್ಸು ಹೋಗುವ ಮುನ್ನ ಕೆಲವು ನಾಯಕರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಚರ್ಚಿಸಿ ಕರ್ನಾಟಕದ ಬಗ್ಗೆ ತೀರ್ಮಾನ ಕೈಗೊಳ್ಳುವುದಾಗಿ ಹೇಳಿದ್ದಾರೆ. ಪಂಚತಾರಾ ಹೋಟೆಲ್‌ನಲ್ಲಿ ತಂಗಿದ್ದ ಸಂದರ್ಭದಲ್ಲಿ ▶ 8ನೇ ಪುಟಕ್ಕೆ



ವರಿಷ್ಠರ ಸಲಹೆಯಂತೆ ವಾರ ಕಾಲ ಮುಂದೂಡಿದ ಸಿಎಂ; ಹಲವು ಊಹಾ–ಪೋಹಕ್ಕೆ ನಾಂದಿ

ಕ್ಯಾಪ್ಸಿಕಮ್ ರವಿ ಹತ್ಯೆ ಪ್ರಕರಣ

ಆರೋಪಿಗಳ ಪತ್ತೆಗೆ ತಂಡ ರಚನೆ

ಸುಳಿವು ಪತ್ತೆ; ಶೀಘ್ರವೇ ಬಂಧನ

ಮೈಸೂರು,ಮೇ4(ಆರ್‌ಕೆ)–ಮೈಸೂರಿನ ಬಂಡಿಪಾಳ್ಯ ಎಪಿಎಂಸಿ ಪ್ರಾಂಗಣದಲ್ಲಿ ಮಾರಕಾಸ್ತ್ರಗಳಿಂದ ಕ್ಯಾಪ್ಸಿಕಮ್ ರವಿಯನ್ನು ಬರ್ಬರವಾಗಿ ಹತ್ಯೆಗೈದು ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆಗೆ ತಂಡ ರಚಿಸಲಾಗಿದೆ.



ಎಂ.ಜೆ.ರವಿ

ಮೈಸೂರು ದಕ್ಷಿಣ ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಶಶಿಕುಮಾರ್ ನೇತೃತ್ವದ ಇಬ್ಬರು ಸಬ್‌ಇನ್ಸ್‌ಪೆಕ್ಟರ್‌ಗಳನ್ನೊಳಗೊಂಡ ತನಿಖಾ ತಂಡದ ಪೊಲೀಸರು, ಶೋಧ ಕಾರ್ಯ ನಡೆಸುತ್ತಿದ್ದು, ಲಭ್ಯವಾಗಿರುವ ಸುಳಿವಿನ ಜಾಡು ಹಿಡಿದು ಆರೋಪಿಗಳ ಪತ್ತೆಗೆ ಶೋಧ ಮುಂದುವರಿಸಿದ್ದಾರೆ.

ಕೊಲೆಯಾದ ಸ್ಥಳದಲ್ಲಿ ಸಿಕ್ಕಿದ ಮಾಹಿತಿ, ಅಕ್ಕಪಕ್ಕದ ಅಂಗಡಿಗಳ ಸಿಸಿಟಿವಿ ಫುಟೇಜ್, ಅಲ್ಲಿನ ಕೆಲಸಗಾರರ ಹೇಳಿಕೆ ಹಾಗೂ ದೂರಿನಲ್ಲಿ ನೀಡಿರುವ ಮಾಹಿತಿಯನ್ವಯ ತನಿಖೆ ನಡೆಸುತ್ತಿರುವ ತಂಡಕ್ಕೆ ಇದೀಗ ಸುಳಿವು ದೊರೆತಿದ್ದು, ಇಂದು ರಾತ್ರಿ ಅಥವಾ ನಾಳೆ (ಮೇ 5) ಸಂಜೆಯೊಳಗಾಗಿ ಆರೋಪಿಗಳನ್ನು ಬಂಧಿಸಲಾಗುವುದು ಎಂದು ▶ 8ನೇ ಪುಟಕ್ಕೆ

ಕೊಡಗು, ಹಾಸನ, ಚಿಕ್ಕಮಗಳೂರಲ್ಲಿ ಒತ್ತುವರಿ ಮಾಡಿ ಕಾಫಿ ಬೆಳೆದವರಿಗೆ ಸದರಿ ಭೂಮಿ 30 ವರ್ಷಕ್ಕೆ ಗುತ್ತಿಗೆ

- ಕಂದಾಯ ಸಚಿವ ಆರ್.ಅಶೋಕ್ ಘೋಷಣೆ
- ಅರಣ್ಯ ಇಲಾಖೆ ವಶದಲ್ಲಿರುವ 6 ಲಕ್ಷ ಹೆಕ್ಟೇರ್ ಭೂಮಿ ಕಂದಾಯ ಇಲಾಖೆ ವಶಕ್ಕೆ

ಬೆಂಗಳೂರು, ಮೇ 4(ಕೆಎಂಶಿ)– ಅರಣ್ಯ ಇಲಾಖೆ ವಶದಲ್ಲಿರುವ ಆರು ಲಕ್ಷ ಹೆಕ್ಟೇರ್ ಭೂಮಿಯನ್ನು ಕಂದಾಯ ಇಲಾಖೆಗೆ ಹಿಂತಿರುಗಿಸಲಾಗಿದ್ದು, ಉಳುಮೆದಾರರಿಗೆ ಹಕ್ಕುಪತ್ರ ನೀಡಲಾಗುವುದು ಎಂದು ಕಂದಾಯ ಸಚಿವ ಆರ್.ಅಶೋಕ್ ಇಂದಿಲ್ಲಿ ತಿಳಿಸಿದ್ದಾರೆ.



ಅಷ್ಟೇ ಅಲ್ಲ, ಕೊಡಗು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕಂದಾಯ ಭೂಮಿ ಒತ್ತುವರಿ ಮಾಡಿ ಕಾಫಿ ತೋಟ ಮಾಡಿಕೊಂಡಿರುವ 92 ಸಾವಿರ ಎಕರೆ ಭೂಮಿಗೂ ತಾತ್ಕಾಲಿಕ ಮೋಕ್ಷ ದೊರೆತಿದೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೊಡಗಿನಲ್ಲಿ 12 ಸಾವಿರ, ಹಾಸನದಲ್ಲಿ 35 ಹಾಗೂ ಚಿಕ್ಕಮಗಳೂರಿನಲ್ಲಿ 45 ಸಾವಿರ ಎಕರೆ ಸರ್ಕಾರಿ ಭೂಮಿ ಒತ್ತುವರಿ ಮಾಡಿಕೊಂಡು 40 ಸಾವಿರ ಮಂದಿ ತೋಟ ಮಾಡಿಕೊಂಡಿದ್ದಾರೆ. ಈ ಭೂಮಿಯನ್ನು ಸರ್ಕಾರದ ಸ್ಥಳವೆಂದು ಘೋಷಣೆ ಮಾಡಿ ಸಾಗುವಳಿ ಮಾಡಿಕೊಂಡಿರುವವರಿಗೆ 30 ವರ್ಷಗಳ ಕಾಲ ಭೂಮಿಯನ್ನು ಲೀಸ್ ಕೊಡಲಾಗಿದೆ. ಆದರೆ, ಸಣ್ಣ, ಮಧ್ಯಮ ▶ 8ನೇ ಪುಟಕ್ಕೆ

ಅಶ್ವತ್ಥನಾರಾಯಣ್ ಕಡು ಭ್ರಷ್ಟ

ರಾಮನಗರ, ಮೇ 4– ರಾಜ್ಯ ರಾಜಕಾರಣದಲ್ಲಿ ಅತ್ಯಂತ ಕಡು ಭ್ರಷ್ಟ ರಾಜಕಾರಣಿ ಸಚಿವ ಅಶ್ವತ್ಥ ನಾರಾಯಣ್ ಎಂದು ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಹರಿಹಾಯ್ದಿದ್ದಾರೆ.

ಕನಕಪುರದ ದೊಡ್ಡಾಲಹಳ್ಳಿಯಲ್ಲಿ ಮಾತನಾಡಿದ ಅವರು, ನಾನು ಬ್ರಾಹ್ಮಣನ ರೀತಿ ಶುದ್ಧ ರಾಜಕಾರಣಿ ಎಂದು ಹೇಳಿಕೊಂಡು ತಿರುಗುತ್ತಾರೆ. ಆದರೆ, ಸಂಸ್ಕೃತಿ ಇರುವವರು ಯಾರು ಹೀಗೆ ಮಾಡುವುದಿಲ್ಲ ಎಂದು ಟೀಕಿಸಿದರು.



ಇದೇ ವೇಳೆ ಪಿಎಸ್‌ಐ ಹಗರಣದಲ್ಲಿ ನಾವು ಯಾರನ್ನು ಟಾರ್ಗೆಟ್ ಮಾಡಿಲ್ಲ, ನನ್ನ ವಿರುದ್ಧ ಎಲ್ಲವನ್ನು ಬಿಚ್ಚುತ್ತೇನೆ ಎಂದಿದ್ದಾರೆ. ಬಿಚ್ಚಿಡಲಿ ಯಾರು ಬೇಡ ಅಂತಾರೆ. ನನಗೆ ಏನು ಬೇಕಾದರೂ ಮಾಡಲಿ, ಅವರನ್ನು ಎದುರಿಸಲು ಸಿದ್ಧರಾಗಿದ್ದೇವೆ. ಶಿಕ್ಷೆ ಕೊಟ್ಟರು ಅನುಭವಿಸಲು ಸಿದ್ಧರಿದ್ದೇವೆ. ಸತ್ಯವನ್ನು ನಾವು ಜನರ ಮುಂದೆ ಇಟ್ಟಿದ್ದೇವೆ ಅಷ್ಟೇ ಎಂದು ಹೇಳಿದರು.

ಭ್ರಷ್ಟಾಚಾರದ ಕುರಿತು ಬಿಜೆಪಿಯ ಕೆಲವರು ನಮ್ಮ ಜೊತೆ ಮಾತನಾಡಿದ್ದಾರೆ. ಅದನ್ನೆಲ್ಲ ಹೇಳಲು ಆಗಲ್ಲ. ಸಾಮಾನ್ಯವಾಗಿ ಹತ್ತಿರ ಇರುವವರೇ ಮಾಹಿತಿ ▶ 8ನೇ ಪುಟಕ್ಕೆ

ಜೈಲಿಗೆ ಹೋಗಿ ಬಂದವರಿಗೆ ನನ್ನ ವಿರುದ್ಧ ಆರೋಪ ಮಾಡಲು ನೈತಿಕತೆ ಇಲ್ಲ

ಬೆಂಗಳೂರು: ಜವಾಬ್ದಾರಿಯುತ ಸ್ಥಾನದಲ್ಲಿದ್ದುಕೊಂಡು ನನ್ನ ವಿರುದ್ಧ ನಿರಾಧಾರದ ಹೇಳಿಕೆಗಳನ್ನು ನೀಡುತ್ತಿದ್ದಾರೆ. ನನ್ನಂಥ ಪ್ರಾಮಾಣಿಕ ವ್ಯಕ್ತಿಯ ವಿರುದ್ಧ ಸುಳ್ಳು ಆಪಾದನೆಗಳನ್ನು ಮಾಡುತ್ತಿರುವುದು ಖಂಡನೀಯ ಎಂದು ಉನ್ನತ ಶಿಕ್ಷಣ ಸಚಿವರೂ ಆದ ರಾಮನಗರ ಉಸ್ತುವಾರಿ ಸಚಿವ ಡಾ. ಅಶ್ವತ್ಥನಾರಾಯಣ ಪ್ರತಿಕ್ರಿಯಿಸಿದ್ದಾರೆ.



ಅವರು ಕಾಂಗ್ರೆಸ್ ನಾಯಕರ ವಿರುದ್ಧ ಅದರಲ್ಲೂ ವಿಶೇಷವಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿರುದ್ಧ ಹರಿಹಾಯ್ದರು. ಪಿಎಸ್‌ಐ ನೇಮಕಾತಿ ಹಗರಣದಲ್ಲಿ ಸಚಿವರ ಸಂಬಂಧಿ ಭಾಗಿಯಾಗಿದ್ದಾರೆ, ಸಚಿವರ ಪಾತ್ರವೂ ಇದೆ ಎಂದು ಶಿವಕುಮಾರ್ ಆರೋಪಿಸುತ್ತಿರುವುದು ಅವರನ್ನು ಕೆರಳಿಸಿದೆ. ವಿಧಾನಸೌಧದ ಆವರಣದಲ್ಲಿ ▶ 8ನೇ ಪುಟಕ್ಕೆ

ಸಹಾಯಕ ಪ್ರಾಧ್ಯಾಪಕರ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣ

ಮೈಸೂರು ವಿವಿ ಭೂಗೋಳಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ.ಹೆಚ್.ನಾಗರಾಜ್ ಅಮಾನತು

ಮೈಸೂರು, ಮೇ 4(ಆರ್‌ಕೆ)– ಪದವಿ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷಾ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಭಾಗಿಯಾಗಿ, ಬಂಧಿತರಾಗಿರುವ ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ಭೂಗೋಳಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ. ಹೆಚ್.ನಾಗರಾಜ್ ಅವರನ್ನು ಅಮಾನತುಗೊಳಿಸಲಾಗಿದೆ.




ಕುಲಸಚಿವ ಪ್ರೊ. ಆರ್.ಶಿವಪ್ಪ ಬುಧವಾರ ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ. ಏಪ್ರಿಲ್ 27ರಂದು ಬೆಂಗಳೂರಿನ ಮಲ್ಲೇಶ್ವರಂ ಠಾಣೆ ಪೊಲೀಸರು ಪ್ರೊ. ನಾಗರಾಜ್‌ರನ್ನು ಬಂಧಿಸಿದ್ದರು. ಈ ಹಿನ್ನೆಲೆಯಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವರ ಹುದ್ದೆಯ ನೇಮಕಾತಿಯನ್ನೂ ಸರ್ಕಾರ ರದ್ದುಪಡಿಸಿತ್ತು.

ಅದರ ಬೆನ್ನಲ್ಲೇ ಮಾತೃ ಇಲಾಖೆಯಾದ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳ ನಿರ್ದೇಶನದ ಮೇರೆಗೆ ಕುಲಸಚಿವರು ಸಿಂಡಿಕೇಟ್ ಸಭೆಯ ತೀರ್ಮಾನ ಹಾಗೂ ವಿಚಾರಣೆಯನ್ನು ಕಾಯ್ದಿರಿಸಿ ಪ್ರೊ. ನಾಗರಾಜ್‌ರನ್ನು ಏಪ್ರಿಲ್ 27ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಅಮಾನತುಗೊಳಿಸಿ ಇಂದು ಆದೇಶ ಹೊರಡಿಸಿದ್ದಾರೆ. ಸಹಾಯಕ ಪ್ರಾಧ್ಯಾಪಕರ ನೇಮಕಾತಿಗಾಗಿ ಪರೀಕ್ಷೆ ನಡೆಸುವ ಜವಾಬ್ದಾರಿ ಹೊತ್ತಿದ್ದ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು, ಭೂಗೋಳಶಾಸ್ತ್ರ ವಿಷಯದ ಪ್ರಶ್ನೆ ಪತ್ರಿಕೆ ತಯಾರಿಸಲು ಪ್ರೊ. ನಾಗರಾಜ್‌ಗೆ ತಿಳಿಸಿತ್ತು. ಆದರೆ ಪರೀಕ್ಷೆ ದಿನವೇ ಪ್ರಶ್ನೆ ಪತ್ರಿಕೆ ಅವರ ಶಿಷ್ಯೆ ಡಾ. ಸೌಮ್ಯರಿಂದ ಸೋರಿಕೆಯಾಗಿತ್ತು. ನಂತರ ಪೊಲೀಸರು ಆಕೆಯನ್ನು ಬಂಧಿಸಿದ್ದರಿಂದ ಮೈಸೂರು ವಿಶ್ವವಿದ್ಯಾನಿಲಯವು ಅವರ ಪೋಸ್ಟ್ ಡಾಕ್ಟರಲ್ ಫೆಲೋಶಿಪ್ ಅನ್ನು ಅಮಾನತುಗೊಳಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಪೊಲೀಸ್ ಇಲಾಖೆಯಿಂದಲೇ ಪಿಎಸ್‌ಐ ಅಕ್ರಮ ಬಯಲು

- ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅಚ್ಚರಿ ಹೇಳಿಕೆ
- ಬಿಜೆಪಿಯವರು ತಮ್ಮ ಮನೆಗೆ ತಾವೇ ಬೆಂಕಿ ಹಚ್ಚಿಕೊಳ್ಳುತ್ತಿದ್ದಾರೆ
- ಸಚಿವ ಅಶ್ವತ್ಥನಾರಾಯಣ ವಿಕೆಟ್ ಉರುಳಿಸಲು ಬಿಜೆಪಿಯಲ್ಲೇ ಷಡ್ಯಂತರ

ಬೆಂಗಳೂರು, ಮೇ 4(ಕೆಎಂಶಿ)– ಇಡೀ ದೇಶದ ಗಮನ ಸೆಳೆದಿರುವ ಪಿಎಸ್‌ಐ ಪರೀಕ್ಷೆ ಅಕ್ರಮ ಪೊಲೀಸ್ ಇಲಾಖೆಯಿಂದಲೇ ಬಯಲಿಗೆ ಬಂದಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ವಿಚಾರವಾಗಿ ನನಗಿರುವ ಮಾಹಿತಿಯೇ ಬೇರೆ. ಪೊಲೀಸ್ ಇಲಾಖೆಯಿಂದಲೇ ಮಾಹಿತಿ ಸೋರಿಕೆಯಾಗಿದೆ. ಬೆಂಗಳೂರಿನ ಚಾಮರಾಜಪೇಟೆಯಲ್ಲಿ ನಡೆದ ಕೊಲೆ ನಂತರ ನಡೆದ ಬೆಳವಣಿಗೆಗಳಿಗೂ ಈ ▶ 8ನೇ ಪುಟಕ್ಕೆ

> “ಪೊಲೀಸ್ ಇಲಾಖೆಯ ಪ್ರಾಮಾಣಿಕ ಅಧಿಕಾರಿ ಕಮಲ್ ಪಂಥ್ ಅವರಿಗೆ ಅವಮಾನ ಮಾಡಿದ್ದರು ಬಿಜೆಪಿ ನಾಯಕರು. ಅದಕ್ಕಾಗಿ ಇಲಾಖೆಯಲ್ಲಿರುವ ಅವರ ಅಭಿಮಾನಿಗಳು ಕೆಲವರು ಸರಕಾರಕ್ಕೆ ಬುದ್ಧಿ ಕಲಿಸಲೆಂದೇ ಅವರೇ ಹಗರಣವನ್ನು ಹೊರ ತೆಗೆದಿದ್ದಾರೆ. ಇದು ಸರಕಾರದಿಂದ ಹೊರ ಬಂದಿಲ್ಲ, ಪೊಲೀಸ್ ಇಲಾಖೆಯಿಂದಲೇ ಇದು ಹೊರಬಂದಿದೆ. ಈ ಸರಕಾರದ ನಡವಳಿಕೆಯನ್ನು ಪೊಲೀಸ್ ಇಲಾಖೆಯವರೇ ಹೊರಗೆಳೆದಿದ್ದಾರೆ.
>
> -ಹೆಚ್.ಡಿ.ಕುಮಾರಸ್ವಾಮಿ

ಪಿಎಸ್‌ಐ ಅಕ್ರಮ: ನೇಮಕಾತಿ ವಿಭಾಗದ ಡಿವೈಎಸ್ಪಿ ಶಾಂತರಾಜು ವರ್ಗಾವಣೆ

ಬೆಂಗಳೂರು, ಮೇ 4– 545 ಪಿಎಸ್‌ಐ ನೇಮಕಾತಿ ಪರೀಕ್ಷೆಯ ಅಕ್ರಮದಲ್ಲಿ ದೊಡ್ಡ ದೊಡ್ಡ ರಾಜಕಾರಣಿಗಳು, ಸಚಿವರು, ಪೊಲೀಸ್ ಅಧಿಕಾರಿಗಳ ಹೆಸರುಗಳು ಈಗ ಕೇಳಿ ಬರುತ್ತಿದೆ. ಹಿರಿಯ ಪೊಲೀಸ್ ಅಧಿಕಾರಿಗಳು ಅಕ್ರಮದಲ್ಲಿ ಶಾಮೀಲಾಗಿದ್ದರು ಎಂಬ ಶಂಕೆ ಹಿನ್ನೆಲೆಯಲ್ಲಿ ಡಿವೈಎಸ್ಪಿ ಶಾಂತರಾಜು ಅವರನ್ನು ಸಿಐಡಿ ಅಧಿಕಾರಿಗಳು ಕರೆದು ವಿಚಾರಣೆ ನಡೆಸಿದ್ದಾರೆ. ಹಗರಣ ಹೊರಬರುತ್ತಿದ್ದಂತೆ ಇವರನ್ನು ಐಎಸ್‌ಡಿಗೆ(ಆಂತರಿಕ ಭದ್ರತಾ ವಿಭಾಗಕ್ಕೆ) ವರ್ಗಾವಣೆಗೊಂಡಿದ್ದಾರೆ. ಡಿವೈಎಸ್ಪಿ ಶಾಂತರಾಜು ವಿರುದ್ಧ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಈ ಹಿಂದೆ ಪಿಎಸ್‌ಐ ನೇಮಕಾತಿ ಪರೀಕ್ಷೆ ಅಕ್ರಮದಲ್ಲಿ ಕಾಂಗ್ರೆಸ್ ನಾಯಕರ ಆರೋಪ ನಂತರ ನೇಮಕಾತಿ ಎಡಿಜಿಪಿ ಅಮೃತ್ ಪಾಲ್ ಅವರ ವರ್ಗಾವಣೆಯಾಗಿತ್ತು. ಪಿಎಸ್‌ಐ ನೇಮಕಾತಿ ಭ್ರಷ್ಟಾಚಾರ ಬ್ರಹ್ಮಾಂಡ ಹೊರಬಿದ್ದು ಒಂದೂವರೆ ತಿಂಗಳಾಗುತ್ತಾ ಬಂದಿದ್ದು, ಎಡಿಜಿಪಿ ಅಮೃತ್ ಪಾಲ್ ಅವರನ್ನು ಆಂತರಿಕ ಭದ್ರತಾ ದಳದ ಎಡಿಜಿಪಿಯಾಗಿ ವರ್ಗಾವಣೆ ಮಾಡಲಾಗಿದೆ.

ಮಾಜಿ ಸಿಎಂ ಪುತ್ರನ ವಿರುದ್ಧ ದೂರು

ಬೆಂಗಳೂರು: ಪಿಎಸ್‌ಐ ಪರೀಕ್ಷೆಯಲ್ಲಿ ಅಕ್ರಮ ಎಸಗಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗ ಮಾಜಿ ಮುಖ್ಯಮಂತ್ರಿ ಮಗನ ಮೇಲೆ ದೂರು ದಾಖಲಾಗಿದೆ.

ಭ್ರಷ್ಟಾಚಾರದ ವಿರುದ್ಧ ನಾವು ಸಂಘಟನೆಯ ಪರವಾಗಿ ವಕೀಲರು ಸಿಐಡಿಗೆ ದೂರು ನೀಡಿದ್ದಾರೆ. ಹೆಸರನ್ನು ಸೂಚಿಸದೇ, ಮಾಜಿ ಮುಖ್ಯಮಂತ್ರಿ ಮಗ ಎಂದು ಆರೋಪ ಮಾಡಲಾಗಿದೆ. ಪಿಎಸ್‌ಐ ಪರೀಕ್ಷೆ ಅಕ್ರಮದಲ್ಲಿ ಮಾಜಿ ಮುಖ್ಯಮಂತ್ರಿಯ ಪುತ್ರನ ಕೈವಾಡವಿದೆ ಎಂದು ಅಭ್ಯರ್ಥಿಗಳು ಆರೋಪಿಸುತ್ತಿದ್ದಾರೆ. ಮಗ ಕೂಡ ಈ ಹಗರಣದಲ್ಲಿ ತೊಡಗಿರುವ ಬಗ್ಗೆ ರಾಜ್ಯಾದ್ಯಂತ ಪರೀಕ್ಷೆ ಬರೆದ ವಿದ್ಯಾರ್ಥಿಗಳು ಆರೋಪಿಸಿದ್ದು ಅವರನ್ನು ವಿಚಾರಣೆಗೆ ಕರೆತರಬೇಕೆಂದು ಒತ್ತಾಯಿಸುತ್ತಿದ್ದೇವೆ ಎಂದು ವಕೀಲರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಅಕ್ರಮದಲ್ಲಿ ಅಭ್ಯರ್ಥಿಗಳು, ಮಧ್ಯವರ್ತಿಗಳನ್ನು ಮಾತ್ರ ಸಿಐಡಿ ವಿಚಾರಣೆ ನಡೆಸುತ್ತಿದೆ. ಆದರೆ ಹಣ ಪಡೆದಿರುವ ದೊಡ್ಡ ವ್ಯಕ್ತಿಗಳು, ಐಪಿಎಸ್ ಅಧಿಕಾರಿಗಳನ್ನು ವಿಚಾರಣೆ ನಡೆಸಿಲ್ಲ. ರಾಜ್ಯದ ಪ್ರಭಾವಿ ಸಚಿವ ಅಶ್ವತ್ಥನಾರಾಯಣ, ಪೊಲೀಸ್ ಅಧಿಕಾರಿ ಅಮೃತಪಾಲ್ ಮತ್ತು ಇತರ ಅಧಿಕಾರಿಗಳನ್ನು ವಿಚಾರಣೆಗೆ ಕರೆಸಿಲ್ಲ. ಅವರನ್ನು ವಿಚಾರಣೆಗೆ ಒಳಪಡಿಸಬೇಕು ಎಂದು ಮನವಿ ಮಾಡಿದ್ದಾರೆ.

ಕೆಪಿಎಸ್ಸಿಯಲ್ಲಿ ಭ್ರಷ್ಟಾಚಾರಿಗಳಿಗೆ ಉದ್ಯೋಗ

ಮೈಸೂರಲ್ಲಿ ಆಮ್ ಆದ್ಮಿ ಕಾರ್ಯಕರ್ತರ ಪ್ರತಿಭಟನೆ



ಮೈಸೂರು, ಮೇ 4(ಎಂಟಿವೈ)– ಹಲವು ವರ್ಷಗಳಿಂದಲೂ ಕೆಪಿಎಸ್ಸಿ ಪರೀಕ್ಷೆಯಲ್ಲಿ ಅಕ್ರಮ ನಡೆಸಿ ಸರ್ಕಾರಿ ಉದ್ಯೋಗಗಳನ್ನು ಭ್ರಷ್ಟಾಚಾರಿಗಳಿಗೆ ನೀಡಲಾಗಿದೆ ಎಂದು ಆರೋಪಿಸಿ ಆಮ್ ಆದ್ಮಿ ಪಾರ್ಟಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಬಳಿ ಬುಧವಾರ ಪ್ರತಿಭಟನೆ ನಡೆಸಿದ ಎಎಪಿ ಕಾರ್ಯಕರ್ತರು ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತ ಪಡಿಸಿದರಲ್ಲದೆ, ಭ್ರಷ್ಟಾಚಾರಕ್ಕಾಗಿ ಪ್ರಾಮಾಣಿಕ ಹಾಗೂ ಸಮರ್ಥ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ತಪ್ಪಿಸಿದ ಭ್ರಷ್ಟ ವ್ಯವಸ್ಥೆ ತೊಲಗಿಸುವಂತೆ ಆಗ್ರಹಿಸಿದರು.

ಕೆಪಿಎಸ್‌ಸಿ ಪರೀಕ್ಷೆ ಹಿಂದಿನಿಂದಲೂ ಭ್ರಷ್ಟ ವ್ಯವಸ್ಥೆಗೆ ಕೈಗನ್ನಡಿ ಹಿಡಿದಂತಾಗಿದೆ. ಹಣ ಪಡೆದು ಸರ್ಕಾರಿ ಹುದ್ದೆಗಳನ್ನು ಮಾರಾಟ ಮಾಡಲಾಗಿದೆ. ಇದರಿಂದ ಅರ್ಹ ಅಭ್ಯರ್ಥಿಗಳಿಗೆ ಅನ್ಯಾಯ ಮಾಡಿದಂತಾಗಿದೆ. ಕೆಪಿಎಸ್‌ಸಿ ಪರೀಕ್ಷೆಯಲ್ಲಿ ನಡೆದಿರುವ ಅಕ್ರಮದ ವಿರುದ್ಧ ತನಿಖೆ ನಡೆಸಬೇಕು. ತಪ್ಪಿತಸ್ಥರಿಗೆ ತಕ್ಕ ಶಿಕ್ಷೆ ನೀಡಬೇಕು. ಆ ಮೂಲಕ ಭ್ರಷ್ಟಾಚಾರಕ್ಕೆ ಕುಮ್ಮಕ್ಕು ನೀಡಿ ಹುದ್ದೆ ಪಡೆದಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಇದೇ ವೇಳೆ ಆಮ್ ಆದ್ಮಿ ಪಕ್ಷದ ಜಿಲ್ಲಾಧ್ಯಕ್ಷೆ ಮಾಲವಿಕ ಗುಬ್ಬಿವಾಣಿ ಮಾತನಾಡಿ, ಭ್ರಷ್ಟಾಚಾರದ ತಾಣ ಎಂಬ ಕುಖ್ಯಾತಿಗೆ ಒಳಗಾಗಿರುವ ಕರ್ನಾಟಕ ಲೋಕಸೇವಾ ಆಯೋಗವನ್ನು ಸರಿದಾರಿಗೆ ತರುವ ಕುರಿತು ಎಲ್ಲ ಸರ್ಕಾರಗಳು ಮಾತನಾಡಿವೆ. ಆದರೆ ಇದಕ್ಕೆ ಕಾಯಕಲ್ಪ ಮಾತ್ರ ಇನ್ನೂ ಆಗಿಲ್ಲ. ಪರಮ ಭ್ರಷ್ಟಾಚಾರಿಗಳನ್ನು ಕೆಪಿಎಸ್ಸಿ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದೇ ದೊಡ್ಡ ದುರಂತ. ಇದನ್ನು ಖಂಡಿಸಿ ರಾಜಭವನದ ಮುಂದೆ ಪ್ರತಿಭಟನೆ ಮಾಡಿದ ನಮ್ಮ ಕಾರ್ಯಕರ್ತರು ಈಗಲೂ ಮೊಕದ್ದಮೆ ಎದುರಿಸುತ್ತಿದ್ದಾರೆ ಎಂದು ಆರೋಪಿಸಿ, ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಎಎಪಿ ಮುಖಂಡರಾದ ಉಷಾ ಸಂಪತ್‌ಕುಮಾರ್, ಧರ್ಮಶ್ರೀ, ರೇಣುಕಾಪ್ರಸಾದ್, ಇರ್ಫಾನ್ ಬೇಗ್, ರವಿಚಂದ್ರ, ದೀಪಕ್, ಮಹಾದೇವಿ, ಡಾ. ಜೀವನ್, ನಟರಾಜ್, ರಾಜಮ್ಮ, ದುರ್ಗಪ್ಪ, ಶಿವಕುಮಾರ್, ರಂಗಯ್ಯ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.



ಮೈಸೂರು ರಾಮಕೃಷ್ಣನಗರ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ದಕ್ಷಿಣ ಪದವೀಧರ ಕ್ಷೇತ್ರದ ಅಭ್ಯರ್ಥಿ ಮಧು ಜಿ. ಮಾದೇಗೌಡ ಅವರ ಪರ ಜಿಪಂ ಮಾಜಿ ಅಧ್ಯಕ್ಷ ಕೆ.ಮರಿಗೌಡ ಮತಯಾಚಿಸಿದರು. ಈ ವೇಳೆ ಮಾಜಿ ಸದಸ್ಯ ರಾಜೀವ್ ಅಣ್ಣೂರು, ಅಣ್ಣೂರು ಶಿವರಾಮು, ಬೊಮ್ಮನಹಳ್ಳಿ ವೆಂಕಟೇಶ್, ಡಿ.ವೀರೇಂದ್ರ, ರಾಜೇಶ್, ನಂದೀಶ್, ಮಧು, ಚೇತನ್, ಶಂಕರ್ ಇನ್ನಿತರರು ಹಾಜರಿದ್ದರು.

ಮೆಗಾ ಆರಂಭಿಕ ಷೇರು ಘೋಷಣೆ ವಿರೋಧಿಸಿ ಎಲ್‌ಐಸಿ ನೌಕರರ ಪ್ರತಿಭಟನೆ

ಮೈಸೂರು, ಮೇ 4(ಎಂಟಿವೈ)–ಭಾರತೀಯ ಜೀವ ವಿಮಾ ನಿಗಮವು ಮೆಗಾ ಆರಂಭಿಕ ಷೇರು ಬಿಡುಗಡೆ (ಐಪಿಒ) ಘೋಷಣೆ ಮಾಡಿರುವುದನ್ನು ಖಂಡಿಸಿ ವಿಮಾ ನಿಗಮ ನೌಕರರ ಸಂಘ ಮೈಸೂರು ವಿಭಾಗದ ನೌಕರರು ಪ್ರತಿಭಟನೆ ಮಾಡಿ ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರಿನ ಬನ್ನಿಮಂಟಪದ ಎಲ್‌ಐಸಿ ವಿಭಾಗೀಯ ಕಚೇರಿ ಮುಂದೆ ಪ್ರತಿಭಟನೆ ನಡೆಸಿದ ಸಿಬ್ಬಂದಿಗಳು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಕಿಡಿಕಾರಿದರು.

ಸರ್ಕಾರ ಸಂಸ್ಥೆಯಲ್ಲಿನ ತನ್ನ ಶೇ.3.5ರಷ್ಟು ಷೇರುಗಳನ್ನು ಬಿಡುಗಡೆಗೊಳಿಸಿ 20,557 ಕೋಟಿ ರೂ.ಗಳನ್ನು ಸಂಗ್ರಹಿಸುವ ಗುರಿ ಹೊಂದಿದೆ. ಇದು ಎಲ್‌ಐಸಿಯನ್ನು ಖಾಸಗೀಕರಣಗೊಳಿಸುವುದರ ಮೊದಲ ಹೆಜ್ಜೆಯಾಗಿದೆ. ಐಪಿಒ ಘೋಷಣೆಯು ಎಲ್‌ಐಸಿಯ ಉದ್ದೇಶಗಳ ಮೂಲ ಅಡಿಪಾಯವನ್ನು ಹಾಳು ಮಾಡುತ್ತದೆ. ಎಲ್‌ಐಸಿಯು 65 ವರ್ಷಗಳಿಂದ ಆರ್ಥಿಕತೆ ಮತ್ತು ರಾಷ್ಟ್ರೀಯತೆಯ ಅಭಿವೃದ್ಧಿಯ ಅವಿಭಾಜ್ಯ ಅಂಗವಾಗಿದೆ. ಎಲ್‌ಐಸಿಯು ತನ್ನ ನಿರ್ವಹಣೆಯಲ್ಲಿ 39 ಲಕ್ಷ ಕೋಟಿ ರೂ. ಮೌಲ್ಯದ ಆಸ್ತಿ ಹೊಂದಿದೆ. ಈ ಪೈಕಿ 36 ಲಕ್ಷ ಕೋಟಿ ರೂ.ಗಳನ್ನು ಆರ್ಥಿಕತೆಯಲ್ಲಿ ಹೂಡಿದೆ. ಈ ಹೂಡಿಕೆಗಳಲ್ಲಿ ಹೆಚ್ಚಿನವು ಸರ್ಕಾರಿ ಕಲ್ಯಾಣ, ಮೂಲ ಸೌಕರ್ಯ ಮತ್ತು ಸಮಾಜಮುಖಿ ಯೋಜನೆಗಳಲ್ಲಿವೆ. ಹಾಗಾಗಿ, ಎಲ್‌ಐಸಿಯನ್ನು ಖಾಸಗೀಕರಣ ಮಾಡಬಾರದು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಎಲ್‌ಐಸಿ ನೌಕರರ ಸಂಘದ ಅಧ್ಯಕ್ಷ ಎಸ್.ಕೆ.ರಾಮು, ಪ್ರಧಾನ ಕಾರ್ಯದರ್ಶಿ ಎಸ್.ಎಸ್. ನಾಗೇಶ್, ಮುಖಂಡರಾದ ಜೆ.ಸುರೇಶ್, ಬಾಲಾಜಿ, ವೆಂಕಟರಾಮು ಪಾಲ್ಗೊಂಡಿದ್ದರು.

ಕಾರ್ಖಾನೆಗಳ ಸಂಭವನೀಯ ರಾಸಾಯನಿಕ ವಿಪತ್ತುಗಳ ತಡೆಗೆ ವಿಶೇಷ ಕಾಳಜಿ ವಹಿಸಿ



ಮೈಸೂರು, ಮೇ 4–ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಖಾನೆಗಳ ಸಂಭವನೀಯ ರಾಸಾಯನಿಕ ವಿಪತ್ತುಗಳ ತಡೆಗೆ ವಿಶೇಷ ಕಾಳಜಿ ಹಾಗೂ ಜಾಗೃತಿ ಕಾರ್ಯಕ್ರಮ ನಡೆಸುವಂತೆ ಕಾರ್ಖಾನೆಗಳ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಬಗಾದಿ ಗೌತಮ್ ಸೂಚನೆ ನೀಡಿದರು.

ಡಿಸಿ ಕಚೇರಿಯಲ್ಲಿ ನಡೆದ ಜಿಲ್ಲಾ ಬಿಕ್ಕಟ್ಟು ಪರಿಹಾರ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಯಾವುದೇ ರೀತಿಯ ವಿಪತ್ತುಗಳು ಸಂಭವಿಸಬಾರದು. ಅಪಾಯಕಾರಿಯಾದ ರಾಸಾಯನಿಕ ಪದಾರ್ಥಗಳ ಬಳಕೆಯಿಂದ ಯಾವುದೇ ತರದ ಅವಘಡಗಳು ಜರುಗದಂತೆ ಎಲ್ಲ ಮುನ್ನೆಚ್ಚರಿಕೆ ಕೈಗೊಳ್ಳಬೇಕು. ವೈಜ್ಞಾನಿಕವಾಗಿ ಸಂಭವನೀಯ ಅವಘಡಗಳನ್ನು ತಡೆಯುವಲ್ಲಿ ಕೈಗೊಳ್ಳಬೇಕಾದ ತುರ್ತು ಕ್ರಮಗಳ ಕುರಿತಂತೆ ಸೂಕ್ತ ತರಬೇತಿ, ಉಪಕರಣಗಳು ಸೇರಿದಂತೆ ವಿಪತ್ತು ಯೋಜನೆ ರೂಪಿಸಿಕೊಂಡು ಸದಾ ಸನ್ನದ್ಧರಾಗುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅತೀ ಹೆಚ್ಚು ಪರಿಣಾಮ ಬೀರುವ ರಾಸಾಯನಿಕ ಬಳಕೆಯ ಕಾರ್ಖಾನೆಗಳನ್ನು ಗುರುತಿಸಿಕೊಳ್ಳಬೇಕು. ಕಾಲಕಾಲಕ್ಕೆ ಅವುಗಳ ತಪಾಸಣೆ ನಡೆಸಬೇಕು. ಅಪಘಾತ ತಡೆಯುವ ನಿಟ್ಟಿನಲ್ಲಿ ಕೈಗೊಂಡಿರುವ ಸುರಕ್ಷತಾ ಕ್ರಮಗಳ ಕುರಿತಂತೆ ಪರಿಶೀಲನೆ ನಡೆಸಬೇಕು ಎಂದರು. ಸಭೆಯಲ್ಲಿ ಜಿಪಂ ಸಿಇಓ ಡಾ. ಪೂರ್ಣಿಮಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚೇತನ್, ಅಪರ ಜಿಲ್ಲಾಧಿಕಾರಿ ಡಾ.ಬಿ.ಎಸ್ ಮಂಜುನಾಥ್ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.



ನಮ್ಮೂರು ನಮ್ಮೋರು ಸಮಾಜ ಸೇವಾ ಟ್ರಸ್ಟ್ ವತಿಯಿಂದ ಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು ಅವರ ಕಚೇರಿಯಲ್ಲಿ ಬಸವ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ನಮ್ಮೂರು ನಮ್ಮೋರು ಟ್ರಸ್ಟ್ ಉಪಾಧ್ಯಕ್ಷ ಕುಮಾರ್‌ಗೌಡ, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ರವಿ ರಾಜಕೀಯ, ಎಸ್.ಆರ್.ರವಿ, ರೋಹಿತ್, ವಾಟರ್ ಬೋರ್ಡ್ ಇನ್ಸ್‌ಪೆಕ್ಟರ್ ಲಿಂಗರಾಜು, ಮಹಾದೇವ್ ಉಪಸ್ಥಿತರಿದ್ದರು.

ಸಂತ ಸಾಹಿತ್ಯ ಅಧ್ಯಯನ ಶಿಬಿರಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 4–ಕರ್ನಾಟಕ ಸಾಹಿತ್ಯ ಅಕಾಡೆಮಿ ವತಿಯಿಂದ ಜುಲೈನಲ್ಲಿ ರಾಜ್ಯ ಮಟ್ಟದ 5 ದಿನಗಳ ಕಾಲ ಸಂತ ಸಾಹಿತ್ಯ ಅಧ್ಯಯನ ಶಿಬಿರ ನಡೆಸಲು ಉದ್ದೇಶಿಸಿದ್ದು, ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಮೇ 27ರೊಳಗಾಗಿ ವೆಬ್‌ಸೈಟ್ http://sahityaacademy.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದು.

ರಸ್ತೆಬದಿ ವ್ಯಾಪಾರಿಗಳಿಗೆ ಪ್ರಧಾನಮಂತ್ರಿ ಸ್ವನಿಧಿ ಯೋಜನೆಯಡಿ ತಲಾ 10,000 ರೂ. ಬಡ್ಡಿರಹಿತ ಸಾಲ ವಿತರಣೆ

ನಾನಾ ಪರಿಹಾರ ನಿಧಿ ಪಡೆದ ಫಲಾನುಭವಿಗಳಿಂದ ಸಂಸದ ಪ್ರತಾಪ್‌ಸಿಂಹರಿಗೆ ಅಭಿನಂದನೆ

ಮೈಸೂರು, ಮೇ 4(ಆರ್‌ಕೆಬಿ)– ಪ್ರಧಾನಮಂತ್ರಿ ರಸ್ತೆಬದಿ ವ್ಯಾಪಾರಿಗಳ ಆತ್ಮನಿರ್ಭರ ನಿಧಿ (ಸ್ವನಿಧಿ ಯೋಜನೆ)ಯಡಿ 200ಕ್ಕೂ ಹೆಚ್ಚು ರಸ್ತೆ ಬದಿ ವ್ಯಾಪಾರಿಗಳಿಗೆ ತಲಾ 10 ಸಾವಿರ ರೂ. ಬಡ್ಡಿ ರಹಿತ ಸಾಲವನ್ನು ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಫಲಾನುಭವಿಗಳಿಗೆ ವಿತರಿಸಿದರು.

ಮೈಸೂರಿನ ಕೆ.ಎಂ.ನಿಶಾಂತ್ ಜನಸೇವಾ ಕೇಂದ್ರದ ವತಿಯಿಂದ ಜಲದರ್ಶಿನಿ ಆವರಣದಲ್ಲಿರುವ ಸಂಸದ ಪ್ರತಾಪ್‌ಸಿಂಹ ಕಚೇರಿ ಎದುರು ಬುಧವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸಂಸದ ಪ್ರತಾಪ್ ಸಿಂಹ ಅವರು ವಿವಿಧ ಸಾಮಾಜಿಕ ಭದ್ರತಾ ಪಿಂಚಣಿ ವಿತರಣೆಗೂ ಚಾಲನೆ ನೀಡಿದರು. ಇದೇ ವೇಳೆ ಮುಖ್ಯಮಂತ್ರಿಗಳ ಪರಿಹಾರ ನಿಧಿ ಮತ್ತು ಕೋವಿಡ್ ಪರಿಹಾರ ನಿಧಿ ಪಡೆದ ಫಲಾನುಭವಿಗಳು ಸಂಸದ ಪ್ರತಾಪ್‌ಸಿಂಹ ಅವರನ್ನು ಅಭಿನಂದಿಸಿದರು.

ನಂತರ ಮಾತನಾಡಿದ ಪ್ರತಾಪ್‌ಸಿಂಹ, ಸರ್ಕಾರದ ಯೋಜನೆಗಳು ನಿಜವಾದ ಫಲಾನುಭವಿಗಳಿಗೆ ತಲುಪದಿದ್ದರೆ ಸರ್ಕಾರ ಯೋಜನೆ ತಂದಿದ್ದರೂ ಪ್ರಯೋಜನವಾಗುವುದಿಲ್ಲ. ಆ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವಲ್ಲಿ ಕೆ.ಎಂ.ನಿಶಾಂತ್ ಅವರ ಶ್ರಮವನ್ನು ಪ್ರಶಂಸಿಸಿದರು. ಕೋವಿಡ್ ನಂತರದಲ್ಲಿ ರಸ್ತೆ ಬದಿ ವ್ಯಾಪಾರಿಗಳಿಗೆ ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸುವ ನಿಟ್ಟಿನಲ್ಲಿ ನರೇಂದ್ರ ಮೋದಿ ಅವರು ಆತ್ಮ ನಿರ್ಭರ ಯೋಜನೆಯಡಿ ಫಲಾನುಭವಿಗಳಿಗೆ ಬಡ್ಡಿ ರಹಿತ ಸಾಲ ನೀಡುವ ಯೋಜನೆ ರೂಪಿಸಿದ್ದಾರೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಬಳಿಕ ಮೈಸೂರಿನ ಅಭಿವೃದ್ಧಿ ಯಾರಿಂದಲೂ ಮಾಡಲು ಸಾಧ್ಯವಾಗಿರಲಿಲ್ಲ. ಆ ಕೆಲಸವನ್ನು ಪ್ರಧಾನಿ ನರೇಂದ್ರ ಮೋದಿ ಮತ್ತು ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದ ಸಾಧ್ಯವಾಗುತ್ತಿದೆ. ಇಂದು ಮೈಸೂರು ವಿಮಾನ ನಿಲ್ದಾಣ, ರೈಲು, ರಸ್ತೆಗಳು ಅಭಿವೃದ್ಧಿ ಹೊಂದುತ್ತಿವೆ. ಸರ್ಕಾರ 22,900 ಕೋಟಿ ರೂ.ಗಳಲ್ಲಿ ಮೈಸೂರಿನಲ್ಲಿ ಸೆಮಿ ಕಂಡಕ್ಟರ್ ಘಟಕ ಸ್ಥಾಪಿಸುತ್ತಿದೆ. ಪೈಪ್‌ಲೈನ್ ಮೂಲಕ ಮನೆ ಮನೆಗೆ ಗ್ಯಾಸ್ ಸಂಪರ್ಕ ಕಲ್ಪಿಸಲಾಗುತ್ತಿದ್ದು, ಇದರಿಂದ ಪ್ರತಿ ಕುಟುಂಬಕ್ಕೆ ವಾರ್ಷಿಕ 5 ಸಾವಿರ ರೂ. ಉಳಿತಾಯವಾಗಲಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕಾರ್ಪೊರೇಟರ್ ಎನ್.ಯು. ಸುಬ್ಬಯ್ಯ, ಕೆ.ಆರ್.ಕ್ಷೇತ್ರ ಬಿಜೆಪಿ ಮಾಜಿ ಅಧ್ಯಕ್ಷ ಆರ್.ರಾಮ್‌ಪ್ರಸಾದ್, ಜನಸೇವಾ ಕೇಂದ್ರದ ಕೆ.ಎಂ. ನಿಶಾಂತ್ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಜಲದರ್ಶಿನಿ ಆವರಣದಲ್ಲಿರುವ ತಮ್ಮ ಕಚೇರಿ ಎದುರು ಬುಧವಾರ ಸಂಸದ ಪ್ರತಾಪ್ ಸಿಂಹ ಅವರು ಜನಸೇವಾ ಕೇಂದ್ರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಸ್ತೆಬದಿ ವ್ಯಾಪಾರಿ ಫಲಾನುಭವಿಗಳಿಗೆ ಬಡ್ಡಿ ರಹಿತ ತಲಾ 10,000 ರೂ. ಸಾಲವನ್ನು ವಿತರಿಸಿದರು. ಚಿತ್ರದಲ್ಲಿ ಜನಸೇವಾ ಕೇಂದ್ರದ ಕೆ.ಎಂ.ನಿಶಾಂತ್, ಕಾರ್ಪೋರೇಟರ್ ಎನ್.ಯು.ಸುಬ್ಬಯ್ಯ ಇನ್ನಿತರರನ್ನು ಕಾಣಬಹುದು.

> **"ರೈತರು ರಾಜಕಾರಣಿಗಳಿಗೆ ಭೂಮಿ ಮಾರಬೇಡಿ, ಅದರಲ್ಲೂ ರಿಯಲ್ ಎಸ್ಟೇಟ್‌ನವರಿಗೆ ಮಾರಾಟ ಮಾಡಬೇಡಿ, ನಿಮ್ಮ ಭೂಮಿಗೆ ಮುಂದೆ ಭಾರಿ ಮೌಲ್ಯ ಬರಲಿದೆ. ಎಂಎಲ್ಎ, ಎಂಪಿಗಳ ಗುಲಾಮರಾಗಬೇಡಿ, ಅವರು ನಿಮ್ಮನ್ನು ಆಳುವ ಅಧಿಕಾರಿಗಳಲ್ಲ. ನೀವು ನಿಮ್ಮ ಹಕ್ಕು ಪ್ರತಿಪಾದಿಸಲು ಅವಕಾಶವಿದೆ. ಈ ಮನಸ್ಥಿತಿ ಬೆಳೆಸಿಕೊಳ್ಳಿ. –ಪ್ರತಾಪ್‌ಸಿಂಹ, ಸಂಸದ**

ನಾಳೆ ಶ್ರೀ ಶಂಕರಾಚಾರ್ಯರ ಜಯಂತಿ ಆಚರಣೆ



ಮೈಸೂರು, ಮೇ 4(ಆರ್‌ಕೆಬಿ)– ಜಿಲ್ಲಾಡಳಿತ ಹಾಗೂ ಶ್ರೀ ಶಂಕರಾಚಾರ್ಯರ ಜಯಂತ್ಯೋತ್ಸವ ಸಮಿತಿ ಸಂಯುಕ್ತಾಶ್ರಯದಲ್ಲಿ ಏ.6ರಂದು ಮೈಸೂರಿನ ಶೃಂಗೇರಿ ಶಂಕರ ಮಠದಲ್ಲಿ ಶ್ರೀ ಶಂಕರಾಚಾರ್ಯರ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಮೈಸೂರು ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಎಸ್.ಎ.ರಾಮದಾಸ್, ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಸಂಸದರಾದ ವಿ.ಶ್ರೀನಿವಾಸ ಪ್ರಸಾದ್, ಪ್ರತಾಪ್‌ಸಿಂಹ, ಸುಮಲತಾ ಅಂಬರೀಶ್ ಇನ್ನಿತರರು ಭಾಗವಹಿಸುವರು ಎಂದರು. ಸಂಜೆ 6 ಗಂಟೆಗೆ ಶ್ರೀ ಶಂಕರಾಚಾರ್ಯರ ಭಾವಚಿತ್ರದ ಮೆರವಣಿಗೆ ಶಂಕರಮಠದಿಂದ ಉತ್ತರಾದಿ ಮಠ, ಅಗ್ರಹಾರ, ಬಸವೇಶ್ವರ ರಸ್ತೆ, ರಾಮಾನುಜ ರಸ್ತೆ ಮೂಲಕ ಮತ್ತೆ ಶಂಕರಮಠಕ್ಕೆ ವಾಪಸಾಗಲಿದೆ. ಕಾರ್ಯಕ್ರಮದಲ್ಲಿ ತ್ರಿಮತಸ್ಥ ಬ್ರಾಹ್ಮಣರು ಒಗ್ಗಟ್ಟಿನಿಂದ ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.

ಇದೇ ವೇಳೆ ಶ್ರೀರಾಮಾನುಜ ಅಭ್ಯುದಯ ಸಹಕಾರ ಸಂಘದ ಅಧ್ಯಕ್ಷ ಎಚ್‌ವಿಎಲ್‌ಎನ್ ಆಚಾರ್ ಮಾತನಾಡಿ, ಬ್ರಾಹ್ಮಣ ಸಂಘ ಮತ್ತು ಶ್ರೀ ರಾಮಾನುಜ ಅಭ್ಯುದಯ ಸಹಕಾರ ಸಂಘದ ಸಹಯೋಗದಲ್ಲಿ ಮೇ 7ರಂದು ಸಂಜೆ 4 ಗಂಟೆಗೆ ರಾಮಾನುಜಾಚಾರ್ಯರ ಜಯಂತಿ ಏರ್ಪಡಿಸಿದೆ ಅಂದು ಸಂಜೆ 4 ಗಂಟೆಗೆ ರಾಮಾನುಜಾಚಾರ್ಯರ ಭವ್ಯ ರಥಯಾತ್ರೆ ದೇವಪಾರ್ಥಿವ ರಸ್ತೆಯಲ್ಲಿರುವ ಅರಳಿಕಟ್ಟೆ ಶ್ರೀರಾಮಮಂದಿರದಿಂದ ಆರಂಭವಾಗಿ ವಿವಿಧ ರಸ್ತೆಗಳ ಮೂಲಕ ಸಾಗಿ ಆರ್‌ಟಿಓ ವೃತ್ತದ ಮಾರ್ಗವಾಗಿ ಬಲ್ಲಾಳ್ ವೃತ್ತದಿಂದ ಕೃಷ್ಣಮೂರ್ತಿಪುರಂನ ಶ್ರೀರಾಮ ಮಂದಿರದವರೆಗೆ ನಡೆಯಲಿದೆ. ನಂತರ ಸಭಾ ಕಾರ್ಯಕ್ರಮ ನಡೆಯಲಿದೆ ಎಂದರು. ರಥಯಾತ್ರೆ ಪ್ರೊ. ಭಾಷ್ಯಂ ಸ್ವಾಮೀಜಿ ಉದ್ಘಾಟಿಸಲಿದ್ದಾರೆ. ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಶಾಸಕ ಎಸ್.ಎ. ರಾಮದಾಸ್, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮುಡಾ ಅಧ್ಯಕ್ಷ ಎಚ್.ವಿ. ರಾಜೀವ್ ಇನ್ನಿತರರು ಭಾಗವಹಿಸಲಿದ್ದಾರೆ ಎಂದರು. ಶ್ರೀ ಶಂಕರ, ಶ್ರೀರಾಮಾನುಜಾಚಾರ್ಯರು ಮತ್ತು ಶ್ರೀ ಮಧ್ವಾಚಾರ್ಯರ ಜಯಂತಿಗಳನ್ನು ಸರ್ಕಾರವೇ ಆಚರಿಸಬೇಕು ಎಂದು ಒತ್ತಾಯಿಸಿದರು. ಗೋಷ್ಠಿಯಲ್ಲಿ ಹರೀಶ್, ಪುಟ್ಟಸ್ವಾಮಿ, ಲಕ್ಷ್ಮಿ, ಶೋಭಾ, ಬಾಲಕೃಷ್ಣ ಉಪಸ್ಥಿತರಿದ್ದರು.

ಇಂದು ಸಾಧಕರಿಗೆ ರಾಮಾನುಜ ಸೇವಾ ಪ್ರಶಸ್ತಿ ಪ್ರದಾನ



ಪ್ರಶಾಂತ್ ವಿ.ಕೃಷ್ಣಮೂರ್ತಿ ಡಾ.ಸುನೀತಾ ಪುಟ್ಟಸ್ವಾಮಿ ಶ್ರೀಧರ್ ಶಾಮಣ್ಣ

ಮೈಸೂರು, ಮೇ 4–ಮೈಸೂರು ಜಿಲ್ಲಾ ಬ್ರಾಹ್ಮಣ ವೇದಿಕೆ ವತಿಯಿಂದ ಶ್ರೀ ರಾಮಾನುಜಾಚಾರ್ಯರ 1005ನೇ ವರ್ಷದ ಜಯಂತಿ ಅಂಗವಾಗಿ ವಿವಿಧ ಕ್ಷೇತ್ರದ ಸಾಧಕರಿಗೆ ನಗರದ ಇರ್ವಿನ್ ರಸ್ತೆಯಲ್ಲಿರುವ ಪಂಚಮುಖಿ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಮೇ 5ರಂದು ಬೆಳಗ್ಗೆ 11 ಗಂಟೆಗೆ ಶ್ರೀ ರಾಮಾನುಜಾ ಸೇವಾ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುವುದು. ವಿದ್ವಾನ್ ಕೃಷ್ಣಮೂರ್ತಿ (ಧಾರ್ಮಿಕ ಕ್ಷೇತ್ರ), ಪುಟ್ಟಸ್ವಾಮಿ (ಸಹಕಾರಿ ಕ್ಷೇತ್ರ), ಡಾ.ಸುನೀತಾ (ಪರಿಸರ ಕ್ಷೇತ್ರ), ಪ್ರಶಾಂತ್ ತಾತಾಚಾರ್ (ಸಹಕಾರಿ ಹಾಗೂ ಉದ್ಯಮ ಕ್ಷೇತ್ರ), ಎಸ್.ಶ್ರೀಧರ್ (ಶಿಕ್ಷಣ ಕ್ಷೇತ್ರ ಹಾಗೂ ಧಾರ್ಮಿಕ ಕ್ಷೇತ್ರ), ಟಿ.ಎಸ್. ಶಾಮಣ್ಣ (ಯೋಗ ಕ್ಷೇತ್ರ) ಅವರಿಗೆ ಈ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಮುಖ್ಯ ಅತಿಥಿಗಳಾಗಿ ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಶಾಸಕ ಎಲ್.ನಾಗೇಂದ್ರ, ಮಾಜಿ ಶಾಸಕ ವಾಸು, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವಲಯ ಉಪಾಧ್ಯಕ್ಷ ನಟರಾಜ್ ಜೋಯಿಸ್, ಕಾಂಗ್ರೆಸ್ ಯುವ ಮುಖಂಡ ಎನ್.ಎಂ.ನವೀನ್‌ಕುಮಾರ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಅಧ್ಯಕ್ಷ ಎಚ್.ಎನ್.ಶ್ರೀಧರ್‌ಮೂರ್ತಿ ಹಾಗೂ ಇನ್ನಿತರರು ಭಾಗವಹಿಸಲಿದ್ದಾರೆ ಎಂದು ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಂ ಐಯ್ಯಂಗಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಸಿ.ರೇವಣ್ಣ ಅವರನ್ನು ಶಾಸಕ ಜಿ.ಟಿ.ದೇವೇಗೌಡ ಅಭಿನಂದಿಸಿದರು. ಈ ವೇಳೆ ಮಾಜಿ ಅಧ್ಯಕ್ಷರಾದ ಕೆ.ಉಮಾಶಂಕರ್, ಎಸ್.ಸೋಮಣ್ಣ, ಉಪಾಧ್ಯಕ್ಷ ಜೆ.ಯೋಗೇಶ್, ನಿರ್ದೇಶಕರಾದ ಪಿ.ರಾಜೇಶ್ವರಿ, ಪಿ.ಸವಿತಾ, ವಕೀಲ ಪಡುವಾರಹಳ್ಳಿ ಎಂ.ರಾಮಕೃಷ್ಣ, ಹೆಚ್.ಹರೀಶ್‌ಕುಮಾರ್ ಉಪಸ್ಥಿತರಿದ್ದರು.



ಚಾಮರಾಜ ಕ್ಷೇತ್ರ ವ್ಯಾಪ್ತಿಯ ಕುಂಬಾರಕೊಪ್ಪಲಿನ ದಲಿತ ಸಮಾಜದ ಹಲವು ಮುಖಂಡರು ಕೊಳ್ಳೇಗಾಲ ಶಾಸಕ ಎನ್.ಮಹೇಶ್ ಹಾಗೂ ಶಾಸಕ ಎಲ್.ನಾಗೇಂದ್ರ ಸಮ್ಮುಖದಲ್ಲಿ ಬಿಜೆಪಿ ಸೇರ್ಪಡೆಗೊಂಡರು. ಈ ವೇಳೆ ನಗರ ಯುವ ಮೋರ್ಚಾ ಅಧ್ಯಕ್ಷ ಕಿರಣ್ ಗೌಡ, ಪಾಲಿಕೆ ಸದಸ್ಯರಾದ ಚಿಕ್ಕವೆಂಕಟು, ಮುಖಂಡರಾದ ಆರ್ಟ್ಸ್ ರಾಮು, ಅಶ್ವತ್, ದಿನೇಶ್‌ಗೌಡ, ಸ್ವಾಮಿ, ಗಿರೀಶ್, ರಾಮೇಗೌಡ, ಪ್ರವೀಣ್, ಪ್ರಮೋದ್, ಶ್ರೀನಿವಾಸ್, ಕಿರಣ್, ಮೋಹನ ಇನ್ನಿತರರು ಉಪಸ್ಥಿತರಿದ್ದರು.

ಕಾಂಗ್ರೆಸ್‌ಗೆ ನೇಮಕ



ಮೈಸೂರು, ಮೇ 4–ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ, ಅಸಂಘಟಿತ ಕಾರ್ಮಿಕರ ವಿಭಾಗದ ಮೈಸೂರು ಜಿಲ್ಲೆಯ ಕಟ್ಟಡ ಕಾರ್ಮಿಕರ ಜಿಲ್ಲಾ ಸಂಯೋಜಕರನ್ನಾಗಿ ಹರೀಶ್‌ಗೌಡ ಅವರನ್ನು ನೇಮಿಸಲಾಗಿದೆ.

ಜಾನಪದ ಗಾಯಕ ಡಾ.ಮಳವಳ್ಳಿ ಮಹದೇವಸ್ವಾಮಿಗೆ ನಾಳೆ ಅಭಿನಂದನೆ

ಮೈಸೂರು, ಮೇ 4 (ಆರ್‌ಕೆಬಿ)–ಮೈಸೂರು ವಿಶ್ವ ವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಸ್ವೀಕರಿಸಿದ ಜಾನಪದ ಕಲಾವಿದ ಡಾ.ಎಂ.ಮಹದೇವಸ್ವಾಮಿ ಅವರನ್ನು ಏ.6ರಂದು ಅಭಿನಂದಿಸಲಾಗುವುದು ಎಂದು ಸಪ್ತಸ್ವರ ಸಿಂಚನ ಟ್ರಸ್ಟ್‌ನ ಅಧ್ಯಕ್ಷ ಎನ್.ಹರೀಶ್ ತಿಳಿಸಿದರು.



ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ಸಪ್ತಸ್ವರ ಸಿಂಚನ ಟ್ರಸ್ಟ್, ಅಮ್ಮ ವಸುಂಧರೆ ಟ್ರಸ್ಟ್ ಜಂಟಿ ಆಶ್ರಯದಲ್ಲಿ ನಡೆಸಲಾಗುತ್ತಿದೆ. ಅಂದು ಸಂಜೆ 4 ಗಂಟೆಗೆ ಮೈಸೂರಿನ ನಾದಬ್ರಹ್ಮ ಸಂಗೀತ ಸಭಾಂಗಣದಲ್ಲಿ ಡಾ.ಎಂ.ಮಹದೇವಸ್ವಾಮಿ ಅವರನ್ನು ಅಭಿನಂದಿಸಲಾಗುತ್ತಿದೆ ಎಂದು ಸಪ್ತಸ್ವರ ಸಿಂಚನ ಟ್ರಸ್ಟ್‌ನ ಅಧ್ಯಕ್ಷ ಎನ್.ಹರೀಶ್ ತಿಳಿಸಿದರು.

ಜಾನಪದ ಕಲಾವಿದ ಹಾಗೂ ಸಂಶೋಧನಾ ವಿದ್ಯಾರ್ಥಿ ಅಮ್ಮ ರಾಮಚಂದ್ರ ಮಾತನಾಡಿ, ಇತ್ತೀಚಿನ ಮೈಸೂರು ವಿವಿ ಘಟಿಕೋತ್ಸವದಲ್ಲಿ ಮಹದೇವಸ್ವಾಮಿ ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡುವ ಮೂಲಕ ವಿವಿ ಎಲ್ಲ ಜಾನಪದ ಕಲಾವಿದರನ್ನು ಗೌರವಿಸಿದಂತಾಗಿದೆ ಎಂದರು.

ಅಂದಿನ ಕಾರ್ಯಕ್ರಮಕ್ಕೆ ಎಲ್ಲರಿಗೂ ಉಚಿತ ಪ್ರವೇಶವಿದ್ದು, ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್. ಸದಾನಂದ ಉದ್ಘಾಟಿಸುವರು. ಮೈಸೂರು ಪಾಲಿಕೆ ವಲಯ ಆಯುಕ್ತ ಎಂ.ನಂಜುಂಡಯ್ಯ ಅಧ್ಯಕ್ಷತೆ ವಹಿಸುವರು. ಮಹದೇವ ಸ್ವಾಮಿ ಅವರನ್ನು ಕುರಿತು ಮಾನಸಗಂಗೋತ್ರಿ ಜಾನಪದ ವಿಭಾಗದ ಮುಖ್ಯಸ್ಥ ಪ್ರೊ.ನಂಜಯ್ಯ ಹೊಂಗನೂರು ವಿಶೇಷ ಉಪನ್ಯಾಸ ನೀಡುವರು ಎಂದರು. ಕಾರ್ಯಕ್ರಮದ ಬಳಿಕ ಸಂಜೆ 6 ಗಂಟೆಗೆ ಅಮ್ಮ ರಾಮಚಂದ್ರ ಮತ್ತು ಸಂಗಡಿಗರು ಜನಪದ ಗೀತೆಗಳನ್ನು ಹಾಡಲಿದ್ದಾರೆ. ಸಂಜೆ 7 ಗಂಟೆಗೆ ಡಾ.ಎಂ.ಮಳವಳ್ಳಿ ಮಹದೇವಸ್ವಾಮಿ ಜಾನಪದ ಗಾಯನ ನಡೆಸಿಕೊಡಲಿದ್ದಾರೆ ಎಂದರು. ಇದೇ ಸಂದರ್ಭದಲ್ಲಿ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ ಮಾಡಲಾಯಿತು. ಗೋಷ್ಠಿಯಲ್ಲಿ ತಿಲಕ್‌ರಾಜ್, ಶರತ್ ಪಾಳ್ಯ, ರಾಹುಲ್ ಉಪಸ್ಥಿತರಿದ್ದರು.



ಬಸವ ಜಯಂತಿ ಅಂಗವಾಗಿ ಕರ್ನಾಟಕ ರಾಜ್ಯ ಭಾರತ ಮಾತ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಸಂಘದಿಂದ ಬಸವಣ್ಣನವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಸಂಘದ ರಾಜ್ಯಾಧ್ಯಕ್ಷ ಜಿ.ಸಿದ್ದರಾಜು, ಉಪಾಧ್ಯಕ್ಷ ಶ್ರೀನಿವಾಸ್, ಸುರೇಶ್, ಪುಟ್ಟಸ್ವಾಮಿ, ನೂರ್ ಅಹಮದ್, ನಂಜುಂಡ, ರಾಮಣ್ಣ, ಕಲ್ಪನಾ, ಗೀತಾ, ಪುಟ್ಟರಾಜು, ಕೀರ್ತಿರಾಜು ಹಾಗೂ ಪದಾಧಿಕಾರಿಗಳು ಇದ್ದಾರೆ.

ಅಪರಿಚಿತ ವ್ಯಕ್ತಿ ಸಾವು

ಮೈಸೂರು, ಮೇ 4–ಮೈಸೂರಿನ ಮಂಡಿ ಪೊಲೀಸ್ ಠಾಣಾ ವ್ಯಾಪ್ತಿಯ ಎಸ್.ಆರ್. ರಸ್ತೆಯಲ್ಲಿರುವ ಎಸ್‌ಬಿಐ ಬ್ಯಾಂಕ್ ಹಿಂಭಾಗ ಇರುವ ಖಾಲಿ ಜಾಗದಲ್ಲಿ ಸುಮಾರು 65 ವರ್ಷ ವಯಸ್ಸಿನ ಅಪರಿಚಿತ ವ್ಯಕ್ತಿ ಸಾವನ್ನಪ್ಪಿದ್ದಾನೆ. ಮೃತ ವ್ಯಕ್ತಿ ನೋಡಲು ಭಿಕ್ಷುಕನಂತೆ ಕಾಣುತ್ತಿದ್ದು, ಯಾವುದೋ ಖಾಯಿಲೆಯಿಂದ ಮೃತಪಟ್ಟಿರಬಹುದು ಎಂದು ಪೊಲೀಸರು ಸಂಶಯ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಮಂಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಶವವನ್ನು ಮೈಸೂರು ಮೆಡಿಕಲ್ ಕಾಲೇಜು ಶವಾಗಾರದಲ್ಲಿ ಇಡಲಾಗಿದೆ. ವಾರಸುದಾರರು ದೂ. 0821–2418339, 9845862184ಗೆ ಸಂಪರ್ಕಿಸಲು ಪೊಲೀಸ್ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

05.05.2022 ಗುರುವಾರ, ಮಳೆ ನಕ್ಷತ್ರ : ಭರಣಿ 27.04.2022 ರಿಂದ 10.05.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ
ತಿಥಿ: ಚತುರ್ಥೀ, ನಕ್ಷತ್ರ: ಆರಿದ್ರಾ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಗೃಹಶೋಭೆ ಇಂಟರ್‌ನ್ಯಾಷನಲ್ ಟ್ರೇಡ್ ಫೇರ್** : ಗೃಹಶೋಭೆ ಜೀವನ ಶೈಲಿ ವಸ್ತುಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ ಅಂಡ್ ಗೈಡ್ಸ್ ಗ್ರೌಂಡ್, ಬೆಳಗ್ಗೆ 11ರಿಂದ.

■ **ಶ್ರೀ ರೇಣುಕಾದೇವಿ ಕರಗ ದೇವಸ್ಥಾನ ಟ್ರಸ್ಟ್** : ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮನವರ 98ನೇ ವರ್ಷದ ಮೈಸೂರು ಕರಗ ಮಹೋತ್ಸವ, ಸ್ಥಳ: ಟ್ರಸ್ಟ್, ಇಟ್ಟಿಗೆಗೂಡು, ಬೆಳಗ್ಗೆ 7 ಗಂಟೆಗೆ

■ **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ** : ಗಾನಸಿರಿ–ವೇದಾಂತ ಲಹರಿ ಭಾಗ–9 ನವೋತ್ಸವ, ಶ್ರೀನಿವಾಸ ಕಲ್ಯಾಣ ವೈಭವ ಕಾರ್ಯಕ್ರಮ, ವಿದುಷಿ ಸಂಗೀತಾ ಬಾಲಚಂದ್ರ ಅವರಿಂದ ಸಂಗೀತ ಕಾರ್ಯಕ್ರಮ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 5 ರಿಂದ.

■ **ಮೈಸೂರು ಉತ್ಸವ** : ಮುಖ್ಯ ಅತಿಥಿಗಳು : ಶಾಸಕರಾದ ಎಸ್.ಎ. ರಾಮದಾಸ್, ಎಲ್. ನಾಗೇಂದ್ರ, ಸ್ಥಳ: ಜೆಎಸ್‌ಎಸ್ ಮೈದಾನ, ದೊಡ್ಡಕೆರೆ ಮೈದಾನದ ಪಕ್ಕ, ಸಂಜೆ 6ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ** : ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ– ಬಾನುಲಿ ಸರಣೀ, ಪ್ರಸ್ತುತಿ– ಪ್ರಭುಸ್ವಾಮಿ ಮಳೀಮಠ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ– ಎಂ. ರಾಘವೇಂದ್ರ, ಎಸ್. ಸಂಗೀತಾ, ಪಿ. ಸುರಭೀ, ವ್ಯಾಖ್ಯಾನ– ಡಾ. ಮಂಜುರಾಜ್, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳವಳಿಯ ಪಯಣ–ಆಕಾಶವಾಣಿಯೊಂದಿಗೆ", 10.00 ಆರ್.ಕೆ. ಪದ್ಮನಾಭ–ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರನಾಮ, 12.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳೀಮಠ್ ಮತ್ತು ಕೆ.ಬಿ. ಮೀನಾ, 1.20 ಭಾವಗೀತೆ, 4.00 ಹಳ್ಳಿ ಹಾಡು –ಸಾಕಮ್ಮ ಮತ್ತು ತಂಡ, 6.50 ಕೃಷಿರಂಗ–ಕಿಸಾನ್‌ವಾಣಿ, ಮಿಶ್ರ ಕೃಷಿಯಲ್ಲಿ ಆರ್ಥಿಕ ಅಭಿವೃದ್ಧಿ ಕುರಿತು ಡಿ.ಎಂ.ಮಂಟೇಸ್ವಾಮಿ ಹಾಗೂ ಜ್ಯೋತಿ ಅವರೊಡನೆ ಸಂದರ್ಶನ, 10.00 ನಾಟಕ "ಬಾಳೆ ಹೊನ್ನೂರಿನ ಬ್ರಹ್ಮ ರಾಕ್ಷಸ", ರಚನೆ– ಅಪರಂಜಿ ಶಿವು

■ **ಕರ್ನಾಟಕ ವ್ಯಂಗ್ಯಚಿತ್ರಕಾರರ ಸಂಘ, ರಂಗಾಯಣ** : ವಿಶ್ವ ವ್ಯಂಗ್ಯಚಿತ್ರಕಾರರ ದಿನಾಚರಣೆ ಅಂಗವಾಗಿ ಖ್ಯಾತ ವ್ಯಂಗ್ಯಚಿತ್ರಕಾರ ಹಾಗೂ ಫುಲ್ ಬ್ರೈಟರ್ ಎಂ.ವಿ. ನಾಗೇಂದ್ರ ಬಾಬು (ಬ್ರ್ಯಾಂಟರ್‌ಬಾಬು) ಅವರ 'ಕಾರ್ಟೂನ್ ಕುಂಚದಲ್ಲಿ ಕೊರೊನಾ' ವ್ಯಂಗ್ಯಚಿತ್ರಗಳ ಪ್ರದರ್ಶನ, ಉದ್ಘಾಟನೆ : ಸಂಸದ ಪ್ರತಾಪ್ ಸಿಂಹ, ಅಧ್ಯಕ್ಷತೆ : ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ, ಮುಖ್ಯ ಅತಿಥಿಗಳು : ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ: ರಂಗಾಯಣ, ಬೆಳಗ್ಗೆ 10.30ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು** : ಕಸಾಪ 108ನೇ ಸಂಸ್ಥಾಪನಾ ದಿನಾಚರಣೆ, ಉದ್ಘಾಟನೆ : ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸದಸ್ಯೆ ಡಾ. ವಿನೋದಮ್ಮ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು : ಕವಯಿತ್ರಿ ಡಾ. ಡಿ. ಸುಮಂಗಲ, ಕನ್ನಡ ಸಹೃದಯ ಬಳಗದ ಮಾಜಿ ಅಧ್ಯಕ್ಷ ರಂಗಧಾಮಯ್ಯ, ಸ್ಥಳ: ಜಿಲ್ಲಾ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ.

■ **ಶ್ರೀ ಶಂಕರ ಜಯಂತಿ ಸಭಾ:** ಶ್ರೀ ಶಂಕರ ಭಗವತ್ಪಾದರ ಜಯಂತ್ಯುತ್ಸವ, ಬೆಳಗ್ಗೆ 9.30ರಿಂದ ಶ್ರೀಮದ್ ಭಗವತ್ಪಾದರಿಗೆ ರುದ್ರಾಭಿಷೇಕ, ಷೋಡಶೋಪಚಾರ ಪೂಜೆ, ಸಹಸ್ರನಾಮಾರ್ಚನೆ, ಬೆಳಗ್ಗೆ 11.30ರಿಂದ ಮಹಾಮಂಗಳಾರತಿ, ರಾಜಾಶೀರ್ವಾದ, ಪ್ರಸಾದ ವಿನಿಯೋಗ, ಸಂಜೆ 5ರಿಂದ ಚಿನ್ಮಯ ಭಜನಾ ಮಂಡಳಿಯಿಂದ ಭಕ್ತಿಗೀತೆಗಳು, ಸಂಜೆ 5.45ರಿಂದ ವಿದುಷಿ ಜೆ.ಶ್ರೀಲಕ್ಷ್ಮಿ ಮತ್ತು ವೃಂದದವರಿಂದ ವೀಣಾವಾದನ, ಸ್ಥಳ:

ಮೈಸೂರು ಮಿತ್ರ ಗುರುವಾರ 5 ಮೇ 2022

ಮೇ 7ರಂದು ಎಲೆಕ್ಟ್ರಿಕ್ ವಾಹನಗಳು, ಚಾರ್ಜಿಂಗ್ ತಂತ್ರಜ್ಞಾನದ ವಿಚಾರ ಸಂಕಿರಣ



ಜಿಲ್ಲೆ	ಟ್ರಾನ್ಸ್‌ಫಾರ್ಮರ್	ತಂಡಗಳು
ಮೈಸೂರು	717	239
ಚಾ.ನಗರ	228	76
ಕೊಡಗು	150	50
ಮಂಡ್ಯ	507	169
ಹಾಸನ	933	311

ಮೈಸೂರು, ಮೇ 4(ಜಿಎ)– ಮೈಸೂರು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಇಂಜಿನಿಯರುಗಳ ಸಂಘ ಮತ್ತು ಮೈಸೂರು ವಲಯ ಕೇಂದ್ರದ ವತಿಯಿಂದ ವಿದ್ಯುತ್ ಚಾಲಿತ ವಾಹನಗಳು ಮತ್ತು ಅದರ ಚಾರ್ಜಿಂಗ್ ತಂತ್ರಜ್ಞಾನಗಳ ಕುರಿತು ಒಂದು ದಿನದ ವಿಚಾರ ಸಂಕಿರಣವನ್ನು ಆಯೋಜಿಸಲಾಗಿದೆ.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ವ್ಯವಸ್ಥಾಪಕ ನಿರ್ದೇಶಕರಾದ ಜಯವಿಭವ ಸ್ವಾಮಿ ಅವರು ಮೈಸೂರಿನ ವಿಜಯನಗರದಲ್ಲಿರುವ ನಿಗಮದ ಕಾರ್ಯಾಲಯದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಮೇ 7ರಂದು ಬೆಳಗ್ಗೆ 10ಗಂಟೆಗೆ ಮೈಸೂರು–ಊಟಿ ರಸ್ತೆಯಲ್ಲಿರುವ ಕಡಕೊಳದ ಕೆಇಬಿಇಎ ತರಬೇತಿ ಕೇಂದ್ರದಲ್ಲಿ ವಿಚಾರ ಸಂಕಿರಣವನ್ನು ಆಯೋಜಿಸಿದ್ದು, ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ವಿ. ಸುನೀಲ್ ಕುಮಾರ್ ಅವರು ಉದ್ಘಾಟಿಸಲಿದ್ದಾರೆ ಎಂದರು.

ರಾಜ್ಯದಲ್ಲೇ ಮೊದಲ ಬಾರಿಗೆ ವಿದ್ಯುತ್ ಚಾಲಿತ ವಾಹನಗಳ ಕುರಿತಾದ ವಿಚಾರ ಸಂಕಿರಣ ಆಯೋಜಿಸಿದ್ದು, ಅಂದು ಕ್ರೆಡಲ್, ಕೆಪಿಟಿಸಿಎಲ್, ರಾಜ್ಯದ ಎಲ್ಲಾ ವಿದ್ಯುತ್ ನಿಗಮಗಳು ಸೇರಿದಂತೆ ರಾಜ್ಯ ಮತ್ತು ಅಂತರ ರಾಜ್ಯಗಳ ವಿದ್ಯುತ್ ಚಾಲಿತ ವಾಹನಗಳ ಉತ್ಪಾದಕರು ಭಾಗವಹಿಸಲಿದ್ದು, 700ಕ್ಕೂ ಅಧಿಕ ಆಸಕ್ತರು ಬರುವ ನಿರೀಕ್ಷೆ ಇದೆ ಎಂದರು.

ವಿದ್ಯುತ್ ಚಾಲಿತ ವಾಹನಗಳು ಮತ್ತು ಅದರ ಚಾರ್ಜಿಂಗ್ ತಂತ್ರಜ್ಞಾನಗಳ ವಿಚಾರ ಸಂಕಿರಣದ ಪ್ರಮುಖ ಉದ್ದೇಶವೆಂದರೆ ವಿದ್ಯುತ್ ಚಾಲಿತ ವಾಹನಗಳು ಪ್ರಯೋಜನ ಮತ್ತು ಪರಿಣಾಮಗಳ ಬಗ್ಗೆ ಮಾಹಿತಿಗಳನ್ನು ಕಲೆ ಹಾಕಲಾಗುತ್ತದೆ. ವಿಚಾರ ಸಂಕಿರಣದಲ್ಲಿ ದೊರೆಯುವ ಅಂಶಗಳ ಬಗ್ಗೆ ಸೆಸ್ಕ್ ವತಿಯಿಂದ ಸಮಾಲೋಚನೆ ನಡೆಸಿ ಮುಂದಿನ ದಿನಗಳಲ್ಲಿ ಅವುಗಳನ್ನು ಅಳವಡಿಸಿಕೊಳ್ಳಲಾಗುತ್ತದೆ ಎಂದ ಅವರು, ಕೆಲ ತಿಂಗಳುಗಳ ನಂತರ ಸಾರ್ವಜನಿಕರ ಜೊತೆಯೂ ಒಂದು ವಿಚಾರ ಸಂಕಿರಣವನ್ನು ಅಯೋಜಿಸಲಾಗುತ್ತದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೆಸ್ಕ್ ತಾಂತ್ರಿಕ ನಿರ್ದೇಶಕ ಮಂಜಪ್ಪ, ಕೆ.ವಿ.ಪ್ರ.ನಿ.ನಿ ಲೆಕ್ಕಾಧಿಕಾರಿಗಳ ಸಂಘದ ಅಧ್ಯಕ್ಷ ಜಿ.ಮಂಜಪ್ಪ ಯೋಜನೆ ಪ್ರಧಾನ ವ್ಯವಸ್ಥಾಪಕ ಮುನಿಗೋಪಾಲ ರಾಜು, ಮುಖ್ಯ ಆರ್ಥಿಕ ಅಧಿಕಾರಿ ಶೇಖ್ ಮಹಮ್ಮದ್ ಮುಹಿಮುಲ್ಲ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

25 ವರ್ಷ ಮೇಲ್ಪಟ್ಟ ಟ್ರಾನ್ಸ್ ಫಾರ್ಮರ್‌ಗಳ ನಿರ್ವಹಣೆ ಅಭಿಯಾನ

ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರ ನಿರ್ದೇಶನದ ಮೇರೆಗೆ ಮೇ 5ರಿಂದ ಟ್ರಾನ್ಸ್ ಫಾರ್ಮರ್‌ಗಳ ನಿರ್ವಹಣೆ ಅಭಿಯಾನವನ್ನು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಐದು ಜಿಲ್ಲೆಗಳಲ್ಲಿಯೂ ಏಕಕಾಲದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ವ್ಯವಸ್ಥಾಪಕ



ನಿರ್ದೇಶಕ ಜಯವಿಭವಸ್ವಾಮಿ ಅವರು ತಿಳಿಸಿದ್ದಾರೆ.

25 ವರ್ಷ ಮೇಲ್ಪಟ್ಟ ಟ್ರಾನ್ಸ್‌ಫಾರ್ಮರ್‌ಗಳನ್ನು ಈಗಾಗಲೇ ಗುರುತಿಸಲಾಗಿದೆ. ಅದಕ್ಕಾಗಿ ವಿಶೇಷ ತಂಡವನ್ನು ರಚನೆ ಮಾಡಲಾಗಿದೆ. ಹತ್ತು ದಿನಗಳ ಒಳಗೆ ಈ ಅಭಿಯಾನವನ್ನು ಮುಗಿಸುವ ಗುರಿ ಹೊಂದಿದ್ದೇವೆ. ಒಂದು ಟ್ರಾನ್ಸ್ ಫಾರ್ಮರ್ ಅನ್ನು ಮೂರು ಮಂದಿ ನಿರ್ವಹಣೆ ಮಾಡಲಿದ್ದಾರೆ. ಟ್ರಾನ್ಸ್‌ಫಾರ್ಮರ್‌ಗಳ ಗುಣಮಟ್ಟ ಮತ್ತು ಅವುಗಳ ಬುಷ್, ಆಯಿಲ್, ನಟ್, ಬೋಲ್ಟ್ ಹಾಗೂ ವಿವಿಧ ಭಾಗಗಳನ್ನು ಪರಿಶೀಲನೆ ನಡೆಸಿ ನಂತರ ಬದಲಾಯಿಸುತ್ತಾರೆ.

ಈಗಾಗಲೇ ಮಳೆ ಅರಂಭವಾಗಿದ್ದು, ಇದರಿಂದ ವಿದ್ಯುತ್ ಅಪಘಾತ ತಪ್ಪಿಸುವುದು ಹಾಗೂ ಟ್ರಾನ್ಸ್ ಫಾರ್ಮರ್‌ಗಳ ವಿಫಲತೆ ಕಡಿಮೆ ಮಾಡುವುದು ಇದರ ಉದ್ದೇಶವಾಗಿದೆ. ಪ್ರತಿ ಟ್ರಾನ್ಸ್‌ಫಾರ್ಮರ್ ನಿರ್ವಹಣೆಗೆ 3 ಗಂಟೆ ತಗುಲಲ್ಲಿದ್ದು, ಕಾರ್ಯನಿರ್ವಹಿಸುವ ಸಂದರ್ಭದಲ್ಲಿ ವಿದ್ಯುತ್ ಅಡಚಣೆ ಉಂಟಾಗುವ ಸಾಧ್ಯತೆ ಇದ್ದು, ಗ್ರಾಹಕರು ಸಹಕರಿಸಬೇಕಿದೆ.

ದಸರಾ ವಸ್ತು ಪ್ರದರ್ಶನದಲ್ಲಿ 'ಬೇಸಿಗೆ ಮೇಳ'ಕ್ಕೆ ಚಾಲನೆ

● 45 ದಿನಗಳ ಮೇಳ ● 12 ಜಾಯಿಂಟ್ ವೀಲ್ಸ್ 72 ವಾಣಿಜ್ಯ ಮಳಿಗೆ, 27 ತಿಂಡಿ–ತಿನಿಸುಗಳ ಮಳಿಗೆಗಳು



ಮೈಸೂರು, ಮೇ 4(ಎಂಕೆ)– ಮೈಸೂರು ದಸರಾ ವಸ್ತುಪ್ರದರ್ಶನ ಮೈದಾನದಲ್ಲಿ 45 ದಿನಗಳ ಕಾಲ ಹಮ್ಮಿಕೊಂಡಿರುವ 'ಬೇಸಿಗೆ ಮೇಳ–2022'ಗೆ ಬುಧವಾರ ಚಾಲನೆ ನೀಡಲಾಯಿತು.

12 ಬಗೆಯ ಜಾಯಿಂಟ್ ವೀಲ್ಸ್, 72 ವಾಣಿಜ್ಯ ಮಳಿಗೆ ಹಾಗೂ ವಿವಿಧ ಬಗೆಯ ತಿಂಡಿ–ತಿನಿಸುಗಳ 27ಕ್ಕೂ ಹೆಚ್ಚು ಮಳಿಗೆಗಳನ್ನೊಳಗೊಂಡ 'ಬೇಸಿಗೆ ಮೇಳ'ಕ್ಕೆ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತ್ ಕುಮಾರ್ ಗೌಡ ಚಾಲನೆ ನೀಡಿದರು. ಫನ್‌ವರ್ಲ್ಡ್ ಅಂಡ್ ರೆಸಾರ್ಟ್ ಇಂಡಿಯಾ ಪ್ರೈ.ಲಿ ಮುಖ್ಯಸ್ಥ ವಿನೋದ್ ಕುಮಾರ್ ಸಬರ್‌ವಾಲ್, ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ಕೆ.ರುದ್ರೇಶ್, ಉದ್ಯಮಿ ಮಂಜು, ಗುತ್ತಿಗೆದಾರ ಎಡ್ವರ್ಡ್, ವರಕೋಡು ಪ್ರಕಾಶ್ ಮತ್ತಿತರರಿದ್ದರು.

ದಿ ಮಡಗಾಸ್ಕರ್ ಆರ್ಟ್ ಸ್ಟುಡಿಯೋ: 'ಬೇಸಿಗೆ ಮೇಳ'ದಲ್ಲಿ ಮೊದಲ ಬಾರಿಗೆ 'ದಿ ಮಡಗಾಸ್ಕರ್ ಆರ್ಟ್ ಸ್ಟುಡಿಯೋ' ಇದ್ದು, ಪುಟಾಣಿ ಮಕ್ಕಳ ಪ್ರಿಯವಾದ ಪ್ರಾಣಿ–ಪಕ್ಷಿಗಳೊಂದಿಗಿನ ಆಟದ ಅನುಭವ ಪಡೆಯಬಹುದಾಗಿದೆ. ಅಲ್ಲದೆ ಜಾಯಿಂಟ್ ವೀಲ್ಸ್‌ನ ಮೋಜು–ಮಸ್ತಿಯೊಂದಿಗೆ ಬೋಟಿಂಗ್, ಬಗೆ ಬಗೆಯ ತಿಂಡಿ–ತಿನಿಸು ಸವಿಯಬಹುದಾಗಿದೆ.

ಎರಡು ದಿನ ಉಚಿತ: ಬೇಸಿಗೆ ಮೇಳದಲ್ಲಿ ಕೆಲ ಮಳಿಗೆಗಳ ನಿರ್ಮಾಣ ನಡೆಯುತ್ತಿರುವುದರಿಂದ ಆರಂಭದ ಎರಡು(ಮೇ 5 ಮತ್ತು 6)ದಿನ ಉಚಿತ ಪ್ರವೇಶವಿರಲಿದೆ. ನಂತರ ವಯಸ್ಕರಿಗೆ 30 ರೂ., ಮಕ್ಕಳಿಗೆ 20 ರೂ. ಟಿಕೆಟ್ ಇರಲಿದೆ. 150 ರೂ. ಟಿಕೆಟ್ ಕೊಂಡು ನೋಡಬೇಕಾದ 'ದಿ ಮಡಗಾಸ್ಕರ್ ಆರ್ಟ್ ಸ್ಟುಡಿಯೋ'ವನ್ನು ಪ್ರವೇಶ ಪಡೆದ ಟಿಕೆಟ್‌ನಲ್ಲಿಯೇ ವೀಕ್ಷಣೆ ಮಾಡಲು ಅವಕಾಶ ಮಾಡಿಕೊಡಲಾಗಿದೆ ಎಂದು ಫನ್‌ವರ್ಲ್ಡ್ ಅಂಡ್ ರೆಸಾರ್ಟ್ ಇಂಡಿಯಾ ಪ್ರೈ.ಲಿ ಮುಖ್ಯಸ್ಥ ವಿನೋದ್ ಕುಮಾರ್ ಸಬರ್‌ವಾಲ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

> "ದಸರಾ ವಸ್ತು ಪ್ರದರ್ಶನ ಮೈದಾನದಲ್ಲಿ ನೆಲ ಬಾಡಿಗೆ ಆಧಾರದ ಮೇಲೆ 39 ಲಕ್ಷ ರೂ.ಗಳಿಗೆ 'ಬೇಸಿಗೆ ಮೇಳ–2022'ಕ್ಕೆ ಅವಕಾಶ ನೀಡಲಾಗಿದೆ. ಕಳೆದ ಬಾರೀ 66 ದಿನ ನಡೆದ ವಸ್ತುಪ್ರದರ್ಶನದಲ್ಲಿ ಜನರಿಂದ ಉತ್ತಮ ಪ್ರತಿಕ್ರಿಯೆ ದೊರೆಯಿತು. ಹಾಗೆಯೇ 'ಬೇಸಿಗೆ ಮೇಳ'ಕ್ಕೂ ಉತ್ತಮ ಸ್ಪಂದನೆ ಸಿಗಲಿದೆ. ಮಕ್ಕಳ ಆಟಿಕೆಗಳು ಹೆಚ್ಚಾಗಿದ್ದು, ಬೇಸಿಗೆ ರಜೆ ಇರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಬರುವ ನೀರಿಕ್ಷೆಯಿದೆ.
>
> – **ಹೇಮಂತ್ ಕುಮಾರ್ ಗೌಡ**, ಅಧ್ಯಕ್ಷ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ

ಮೈಸೂರು ಜಿಲ್ಲೆಯಲ್ಲಿ ಮಳೆಗೆ ಭಾರೀ ಹಾನಿ

419 ವಿದ್ಯುತ್ ಕಂಬಗಳು ನೆಲಕ್ಕೆ, 25 ಟ್ರಾನ್ಸ್‌ಫಾರ್ಮರ್ ಘಟಕ, 0.66 ಕಿಮೀ ಉದ್ದ ವಿದ್ಯುತ್ ತಂತಿ ಹಾಳು

ಮೈಸೂರು, ಮೇ 4(ಎಂಕೆ)– ಮೈಸೂರು ನಗರ ಸೇರಿದಂತೆ ಜಿಲ್ಲೆಯಾದ್ಯಂತ ಮಳೆ ಅಬ್ಬರ ಜೋರಾಗಿದ್ದು, ಕಳೆದ ನಾಲ್ಕು ದಿನಗಳಲ್ಲಿಯೇ 419 ವಿದ್ಯುತ್ ಕಂಬಗಳು



ಧರೆಗುರುಳಿದರೆ, 25 ಟ್ರಾನ್ಸ್ ಫಾರ್ಮರ್ ಘಟಕ ಹಾಗೂ 0.66 ಕಿ.ಮೀ ಉದ್ದದ ವಿದ್ಯುತ್ ತಂತಿ ಸೇರಿ 60.33 ಲಕ್ಷ ರೂ. ಹಾನಿಯಾಗಿದೆ.

ಹಾಗೆಯೇ ಏಪ್ರಿಲ್ ತಿಂಗಳಿನಲ್ಲಿ ಜಿಲ್ಲೆಯಾದ್ಯಂತ 599 ವಿದ್ಯುತ್ ಕಂಬಗಳು, 15 ಟ್ರಾನ್ಸ್‌ಫಾರ್ಮರ್ ಘಟಕ ಹಾಗೂ 0.69 ಕಿ.ಮೀ ಉದ್ದದ ವಿದ್ಯುತ್ ತಂತಿ ಸೇರಿ 60.59 ಲಕ್ಷ ರೂ. ಹಾನಿಯಾಗಿದೆ. ಮಾಹಿತಿ ತಿಳಿದ ಕೂಡಲೇ ಸ್ಥಳಕ್ಕೆ ಭೇಟಿ ಕಾರ್ಯಾಚರಣೆ ನಡೆಸಿ, ಬೇರೆ ವಿದ್ಯುತ್ ಕಂಬಗಳನ್ನು ಅಳವಡಿಸಲಾಗುತ್ತಿದೆ ಎಂದು ಸೆಸ್ಕ್‌ನ ಅಧೀಕ್ಷಕ ಅಭಿಯಂತರ ನಾಗೇಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು. ಗಾಳಿ–ಮಳೆಗೆ ಮುರಿದು ಬಿದ್ದ ವಿದ್ಯುತ್ ಕಂಬಗಳನ್ನು ತೆರವುಗೊಳಿಸಿ ಈಗಾಗಲೇ ಶೇ.99 ರಷ್ಟು ಹೊಸ ಕಂಬಗಳನ್ನು ಅಳವಡಿಸಲಾಗಿದೆ. ಬಹಳಷ್ಟು ವಿದ್ಯುತ್ ಕಂಬಗಳು ಮರಗಳು ಉರುಳಿಬಿದ್ದಿದ್ದರಿಂದಲೇ ಮುರಿದು ಹೋಗುತ್ತಿವೆ. ವಿಪರೀತವಾದ ಗಾಳಿ, ಗುಡುಗು–ಮಿಂಚಿನಿಂದ ಟ್ರಾನ್ಸ್‌ಫಾರ್ಮರ್ ಘಟಕಗಳು ಹಾಗೂ ವಿದ್ಯುತ್ ತಂತಿಗೆ ಹಾನಿಯಾಗುತ್ತಿದೆ ಎಂದು ತಿಳಿಸಿದರು.

ಮುಂದುವರಿದ ಮಳೆ: ಮೈಸೂರಿನಲ್ಲಿ ಮಳೆ ಮುಂದುವರಿದಿದ್ದು, ಬುಧವಾರ ಸಂಜೆ 7 ಗಂಟೆಯಿಂದ ತಡರಾತ್ರಿಯವರೆಗೂ ಸುರಿಯಿತು. ಪರಿಣಾಮ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದರೆ, ಕೆರೆಯಂತಾಗಿದ್ದ ರಸ್ತೆಗಳಲ್ಲಿ ಸಂಚರಿಸಲು ವಾಹನ ಸವಾರರು ಹೆಣಗಾಡುವಂತಾಯಿತು.

ಪ್ರಕೃತಿ ವಿಕೋಪದ ಹಾನಿ ತಪ್ಪಿಸಲು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಿ: ಡಿಸಿ

ಮೈಸೂರು, ಮೇ 4– ಮಳೆಗಾಲ ಪ್ರಾರಂಭವಾಗಿದ್ದು ಪ್ರಕೃತಿ ವಿಕೋಪದಿಂದ ಆಗುವ ಹಾನಿಯನ್ನು ತಪ್ಪಿಸಲು ಸಂಬಂಧಿಸಿದ ಎಲ್ಲಾ ಅಧಿಕಾರಿಗಳು ತಮ್ಮ ಇಲಾಖೆ ಹಂತದಲ್ಲಿ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಸೂಚಿಸಿದ್ದಾರೆ.

ತಮ್ಮ ಕಚೇರಿಯ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಪ್ರಕೃತಿ ವಿಕೋಪ ಕುರಿತ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಿಡಿಲಿನಿಂದ ತಪ್ಪಿಸಿಕೊಳ್ಳಲು ಹಾಗೂ ಮುನ್ನೆಚ್ಚರಿಕೆ ಕೈಗೊಳ್ಳಲು ಪ್ರತಿಯೊಬ್ಬರು ಸಿಡಿಲು ಆಪ್‌ನ್ನು ತಮ್ಮ ಮೊಬೈಲ್‌ಗಳಲ್ಲಿ ಡೌನ್‌ಲೋಡ್ ಮಾಡಿಕೊಳ್ಳಿ, ಇದರಿಂದ ಸಿಡಿಲು ಸಂಭವಿಸುವ ಮೊದಲು ಮಾಹಿತಿ ದೊರೆಯುತ್ತದೆ ಎಂದರು. ಜಿಲ್ಲೆಯಲ್ಲಿ ಈ ಸಾಲಿನಲ್ಲಿ ಉತ್ತಮ ಮಳೆಯಾಗಿದ್ದು ಶೇ 34 ರಷ್ಟು ಹೆಚ್ಚುವರಿ ಮಳೆಯಾಗಿದೆ. ಜಿಲ್ಲೆಯಲ್ಲಿ ಬಿತ್ತನೆ ಬೀಜ ಹಾಗೂ ರಸಗೊಬ್ಬರದ ಕೊರತೆ ಇಲ್ಲ. ಇದುವರೆಗೆ 45 ಸಾವಿರ ಹೆಕ್ಟೇರ್ ಬಿತ್ತನೆ ಗುರಿ ಇದ್ದು ಜಿಲ್ಲೆಯಲ್ಲಿ 53 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ ಎಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಡಾ.ಬಿ.ಎಸ್ ಮಂಜುನಾಥ್ ಮಾತನಾಡಿ, ಮಳೆಗಾಲದಲ್ಲಿ ರಸ್ತೆಗಳು ಹಾಳಾಗುತ್ತಿದ್ದು ಪಿ.ಡಬ್ಲ್ಯೂ.ಡಿ ಇಲಾಖೆಯವರು ದುರಸ್ತಿ ಮಾಡಬೇಕು. ವಿದ್ಯುತ್ ಕಂಬಗಳು ಹಾನಿಯಾಗುತ್ತಿದ್ದು ಈ ಬಗ್ಗೆ ದೂರುಗಳು ಬರುತ್ತಿವೆ. ಚೆಸ್ಕಾಂನವರು ಮುನ್ನೆಚ್ಚರಿಕೆ ವಹಿಸಬೇಕು. ಎಲ್ಲಾ ತಹಸೀಲ್ದಾರರು ತಾಲೂಕು ಹಂತದಲ್ಲಿ ಅಧಿಕಾರಿಗಳ ಸಭೆ ನಡೆಸಿ ಪ್ರಕೃತಿ ವಿಕೋಪಗಳನ್ನು ಎದುರಿಸಲು ಯೋಜನೆಯನ್ನು ರೂಪಿಸಿಕೊಳ್ಳಿ ಹಾಗೂ ತಾಲೂಕು ಮಟ್ಟದಲ್ಲಿ ಕಂಟ್ರೋಲ್ ರೂಂಗಳನ್ನು ತೆರೆಯುವಂತೆ ಸೂಚಿಸಿದರು. ಸಭೆಯಲ್ಲಿ ಜಿಪಂ ಸಿಇಓ ಡಾ. ಪೂರ್ಣಿಮಾ, ಎಸ್‌ಪಿ ಚೇತನ್ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ರಾಜ್ಯದಲ್ಲಿ ಇನ್ನೂ 2 ದಿನ ಮಳೆ ಸಾಧ್ಯತೆ

ಬೆಂಗಳೂರು,ಮೇ 4–ಬೇಸಿಗೆ ಬಿರು ಬಿಸಿಲಿನ ನಡುವೆ ದಕ್ಷಿಣ ಒಳನಾಡಿನ ಬಹುತೇಕ ಕಡೆಗಳಲ್ಲಿ ಮುಂದಿನ ಎರಡು ದಿನಗಳ ಕಾಲ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿರುವುದಾಗಿ ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ದಕ್ಷಿಣ ಅರಬಿಯನ್ ಸಮುದ್ರದಲ್ಲಿ ಚಂಡಮಾರುತದ ಕಾರಣದಿಂದ ಮೇ 6ರಿಂದ ರಾಜ್ಯದ ಹಲವೆಡೆ ಮಳೆಯಾಗುವ ಸಾಧ್ಯತೆಯಿರುವುದಾಗಿ ಸೂಚನೆ ನೀಡಲಾಗಿದೆ.

ಮಂಗಳವಾರ ಸಂಜೆ ಬೆಂಗಳೂರು ನಗರದಲ್ಲಿನ ಗರಿಷ್ಠ ಉಷ್ಣಾಂಶ 34 ಡಿಗ್ರಿ ಸೆಲ್ಸಿಯಸ್ ದಾಖಲಾಗುವ ಮೂಲಕ ಅಚ್ಚರಿಗೆ ಕಾರಣವಾಯಿತು. ಸಂಜೆ 8.30ರವರೆಗೂ ಮಳೆಯ ವರದಿಯಾಗಿರಲಿಲ್ಲ. ಪ್ಯಾಲೆಸ್ ರಸ್ತೆಯಲ್ಲಿ 6 ಮಿ.ಮೀ. ಮಳೆಯಾಗಿತ್ತು.

ಕರ್ನಾಟಕ ಜಾನಪದ ವಿವಿ ಕುಲಪತಿ, ಸಿಂಡಿಕೇಟ್ ಸದಸ್ಯರಿಂದ ರಾಜ್ಯಪಾಲರ ಭೇಟಿ



ಬೆಂಗಳೂರು, ಮೇ 4– ಬೆಂಗಳೂರಿನ ರಾಜಭವನದಲ್ಲಿ ರಾಜ್ಯಪಾಲರಾದ ಥಾವರ್ ಚಂದ್ ಗೆಲ್ಹೋಟ್ ಅವರನ್ನು ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರು ಹಾಗೂ ಕುಲಪತಿಗಳು ಭೇಟಿ ಮಾಡಿ ಹಲವು ವಿಷಯಗಳನ್ನು ಚರ್ಚಿಸಿದರು.

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಸ್ಥಾಪನೆ ಆಗಿ ಹತ್ತು ವರ್ಷಗಳು ತುಂಬಿರುವ ಪ್ರಯುಕ್ತ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ರಾಜ್ಯಪಾಲರಿಗೆ ತಿಳಿಸಲಾಯಿತು, ವಿವಿ ಸ್ಥಾಪನೆ ನಂತರ ಇಲ್ಲಿಯವರೆಗೆ ಬೋಧಕ ಹಾಗೂ ಬೋಧಕೇತರ ನೌಕರರ ನೇಮಕ ಆಗದೆ ಇರುವ ಬಗ್ಗೆ ಗಮನ ಸೆಳೆಯಲಾಯಿತು. ವಿವಿ ಘಟಿಕೋತ್ಸವದ ಬಗ್ಗೆಯೂ ಚರ್ಚಿಸಿ ಅವರಿಂದ ಹಲವು ರೀತಿಯ ಸಲಹೆ ಸೂಚನೆಗಳನ್ನು ಪಡೆಯಲಾಯಿತು.

ಈ ಸಂದರ್ಭದಲ್ಲಿ ಹಂಗಾಮಿ ಉಪ ಕುಲಪತಿಗಳಾದ ಪ್ರೊ. ಗುರುಪ್ರಸಾದ್, ಸಿಂಡಿಕೇಟ್ ಸದಸ್ಯರುಗಳಾದ ಡಾ.ಕೆ. ವಸಂತ ಕುಮಾರ್, ಹಾಸನ್ ರಘು, ಕೆ.ಎನ್. ಪಾಟೀಲ್, ವೆಂಕಟೇಶ, ಡಾ.ಸುನಂದಾ ಹಾಗೂ ಹಿದಾಯತ್ ಅಹಮ್ಮದ್ ಉಪಸ್ಥಿತರಿದ್ದರು.

ಉಚಿತ ಕಾರ್ಯಾಗಾರ

ಮೈಸೂರು, ಮೇ 4– ಅಂತರ್‌ದೃಷ್ಟಿ ಬ್ರೈನ್ ಅಕಾಡೆಮಿ–ಪರಮಹಂಸ ಯೋಗ ಮಹಾವಿದ್ಯಾಲಯದ ಆಶ್ರಯದಲ್ಲಿ ಅಂತರ್‌ದೃಷ್ಟಿ ವಿಸ್ಮಯ ಶಕ್ತಿಗಳ ಕುರಿತು ಉಚಿತ ಕಾರ್ಯಾಗಾರವನ್ನು 6ರಿಂದ 15 ವರ್ಷದ ಮಕ್ಕಳು ಮತ್ತು ಪೋಷಕರಿಗಾಗಿ ಮೇ 5ರಂದು ಸಂಜೆ 5ರಿಂದ 7ರವರೆಗೆ ಏರ್ಪಡಿಸಲಾಗಿದ್ದು, ಮಕ್ಕಳು ತಮ್ಮ ಸುಪ್ತ ಮನಸ್ಸಿನಲ್ಲಿ ಇರುವಂತಹ ಸ್ಮರಣ ಶಕ್ತಿ, ಕ್ರಿಯಾಶಕ್ತಿ, ಏಕಾಗ್ರತೆ, ಆತ್ಮವಿಶ್ವಾಸ ವಿದ್ಯಾಭ್ಯಾಸದಲ್ಲಿ ಉನ್ನತಿ ಮತ್ತು ಹೆಚ್ಚಿನ ಅಂಕ ಗಳಿಸಲು 360° ಡಿಗ್ರಿ ಆತ್ಮಶಕ್ತಿ ಜಾಗೃತಿಗಾಗಿ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ಹೇಗೆ ಶೈಕ್ಷಣಿಕ ಸಾಲಿನಲ್ಲಿ ತೊಡಗಿಸಿಕೊಂಡು ಉನ್ನತಿಯನ್ನು ಹೊಂದಬಹುದು. ಮಾಹಿತಿಗಾಗಿ ಮೊ. ನಂ.: 9035506790, 9008727172 ಸಂಪರ್ಕಿಸಬಹುದು.

ಮೈಸೂರು ಭಾಗದಲ್ಲಿ ಬಿಜೆಪಿ ಅಧಿಕ ಸ್ಥಾನ ಗಳಿಸಲು ಸರ್ವಸನ್ನದ್ಧ

ಮೈಸೂರು, ಮೇ 4(ಜಿಎ)– ಮೈಸೂರು ಭಾಗದಲ್ಲಿ ಪಕ್ಷ ಸಂಘಟನೆಗೆ ಹೆಚ್ಚಾಗಿ ತೊಡಗಿಸಿಕೊಳ್ಳುವುದಾಗಿ ರಾಜ್ಯ ಬಿಜೆಪಿ ಉಪಾಧ್ಯಕ್ಷ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಪುತ್ರ ಬಿ.ವೈ.ವಿಜಯೇಂದ್ರ ಸ್ಪಷ್ಟಪಡಿಸಿದ್ದಾರೆ.



ವರುಣಾಗೆ ಭೇಟಿ ನೀಡಿದ ವೇಳೆ ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷದ ವರಿಷ್ಠರು ನನಗೆ ಸದ್ಯಕ್ಕೆ ಉಪಾಧ್ಯಕ್ಷ ಸ್ಥಾನವನ್ನು ಕಲ್ಪಿಸಿದ್ದಾರೆ. ಈ ಸ್ಥಾನ ಉಪಯೋಗಿಸಿಕೊಂಡು ಶಕ್ತಿ ಮೀರಿ ಕೆಲಸ ಮಾಡುತ್ತೇನೆ. ಮುಂದೆ ಏನಾಗಬೇಕು ಎಂಬುದನ್ನು ವರಿಷ್ಠರೇ ತೀರ್ಮಾನಿಸುತ್ತಾರೆ ಎಂದರು.

ಅನೇಕ ಕಾರಣಗಳಿಂದ ಹಳೇ ಮೈಸೂರು ಭಾಗದಲ್ಲಿ ಪಕ್ಷ ಹೆಚ್ಚು ಸಾಧನೆ ಮಾಡಲು ಸಾಧ್ಯವಾಗಿಲ್ಲ. ಇಲ್ಲಿನ ಕಾರ್ಯಕರ್ತರು ಬಹಳಷ್ಟು ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಅವರೊಂದಿಗೆ ಸೇರಿ ಪಕ್ಷ ಸಂಘಟನೆ ಮಾಡುತ್ತೇನೆ. ಈ ಭಾಗದಲ್ಲಿ ಹೆಚ್ಚು ಸ್ಥಾನಗಳನ್ನು ಗೆಲ್ಲಲು ಪ್ರಯತ್ನಿಸುತ್ತೇವೆ ಎಂದು ತಿಳಿಸಿದರು.

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಕನಿಷ್ಠ 120 ಸ್ಥಾನಗಳನ್ನು ಗೆಲ್ಲಲಿದೆ ಎಂದ ವಿಜಯೇಂದ್ರ, ಕಾಂಗ್ರೆಸ್ ನಾನಾ ಕಾರಣಕ್ಕೆ ಮಾಡುತ್ತಿರುವ ಆರೋಪಗಳು ಆಧಾರರಹಿತ. ಸ್ವಾತಂತ್ರ್ಯ ನಂತರ ಬಹಳ ಕಾಲ ಅಧಿಕಾರದಲ್ಲಿದ್ದ ಕಾಂಗ್ರೆಸ್‌ಗೆ ಈಗ ಅಧಿಕಾರವಿಲ್ಲ. ಮತ್ತೆ ಅಧಿಕಾರ ಗಿಟ್ಟಿಸಿಕೊಳ್ಳಲು ಬಿಜೆಪಿ ವಿರುದ್ಧ ಆಧಾರರಹಿತ ಆರೋಪ ಮಾಡುತ್ತಿದೆ. ಪಿಎಸ್‌ಐ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಸಚಿವರಾದ ಡಾ. ಅಶ್ವತ್ಥ್‌ನಾರಾಯಣ ವಿರುದ್ಧ ಕಾಂಗ್ರೆಸ್ ಪುರಾವೆ ಇಲ್ಲದೆ ಆರೋಪ ಮಾಡುತ್ತಿದೆ. ಈಗಾಗಲೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತನಿಖೆಗೆ ಆದೇಶಿಸಿದ್ದಾರೆ. ನಿಷ್ಪಕ್ಷಪಾತ ತನಿಖೆ ನಡೆದು ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವವರೆಗೂ ಕಾಂಗ್ರೆಸ್ ಸಹಿಸಿಕೊಳ್ಳಲಾಗುತ್ತಿಲ್ಲ ಎಂದು ವಾಗ್ದಾಳಿ ನಡೆಸಿದರು.

ಭಾರತೀಯ ಜನತಾ ಪಕ್ಷಕ್ಕೆ ಭವಿಷ್ಯದ ಬಗ್ಗೆ ಒಂದು ಸ್ಪಷ್ಟನೆ ಇದೆ. ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿಜೀ ಕೊಟ್ಟಂತಹ ಜನಪರ ಕಾರ್ಯಕ್ರಮಗಳು, ಯಡಿಯೂರಪ್ಪನವರು ನೀಡಿದಂತಹ ಕಾರ್ಯಕ್ರಮಗಳು ಬೊಮ್ಮಾಯಿ ಅವರು ಕೊಟ್ಟಂತಹ ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸುವ ಮೂಲಕ ಬಿಜೆಪಿಯನ್ನು ಮತ್ತೊಮ್ಮೆ ಅಧಿಕಾರಕ್ಕೆ ತರುವ ಕೆಲಸ ಮಾಡುತ್ತಿದ್ದೇವೆ ಎಂದರು.

ಇಂದಿನಿಂದ 'ಅಯೋಧ್ಯಾ ಕಾಂಡ' ನಾಟಕ ಪ್ರದರ್ಶನ

ಮೈಸೂರು, ಮೇ 4(ಎಂಕೆ)– ಹಿರಿಯ ರಂಗಕರ್ಮಿ ಪ್ರಸನ್ನ ನಿರ್ದೇಶನದಲ್ಲಿ ವಾಲ್ಮೀಕಿ ರಾಮಾಯಣ ಆಧಾರಿತ 'ಅಯೋಧ್ಯಾ ಕಾಂಡ' ನಾಟಕ ಇಂದಿನಿಂದ ಮೇ 8ರವರೆಗೆ ಪ್ರತಿ ದಿನ ಸಂಜೆ 7 ಗಂಟೆಗೆ ಕಲಾಮಂದಿರದ ಕಿರುರಂಗಮಂದಿರದಲ್ಲಿ ಪ್ರದರ್ಶನಗೊಳ್ಳಲಿದೆ.

ರಂಗಾಯಣದ ಹಿರಿಯ ಕಲಾವಿದ ಪಶಾಂತ್ ಹಿರೇಮಠ್, ರಾಷ್ಟ್ರೀಯ ನಾಟಕ ಶಾಲೆಯಲ್ಲಿ ಪದವಿ ಪಡೆದ ಸಿ.ಆರ್. ಪದ್ಮಶ್ರೀ, ಕಥೆಗಾರ ಹಾಗೂ ಸಂಗೀತ ಗಾರ ಅನುಪ್ ಶೆಟ್ಟಿ, ರಂಗವಲ್ಲಿ ತಂಡದ ವಿಶ್ವಾಸ್, ಗಿಟಾರ್ ಕಲಾವಿದ ಸುಂದರೇಶ್ (ಮುನ್ನ) ಇನ್ನಿತರು ಅಭಿನಯಿಸಿದ್ದಾರೆ.

ಮೃಗಾಲಯಕ್ಕೆ ಕೇಂದ್ರ ಸಚಿವ ನಾರಾಯಣಸ್ವಾಮಿ ಭೇಟಿ



ಮೈಸೂರು, ಮೇ 4(ಎಂಕೆ)– ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯಕ್ಕೆ ಕೇಂದ್ರ ಸಚಿವ ನಾರಾಯಣಸ್ವಾಮಿ ಬುಧವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಚಿತ್ರದುರ್ಗದ ಆಡು ಮಲ್ಲೇಶ್ವರ ಮೃಗಾಲಯದ ಅಭಿವೃದ್ಧಿಪಡಿಸುವ ಹಿನ್ನೆಲೆಯಲ್ಲಿ ಭೇಟಿ ನೀಡಿದ ಅವರು, ಮೃಗಾಲಯ ನಿರ್ವಹಣೆ ಹಾಗೂ ಪ್ರಾಣಿ– ಪಕ್ಷಿಗಳ ವಾಸಕ್ಕೆ ಕಟ್ಟಿರುವ ಮನೆಗಳನ್ನು ಪರಿಶೀಲನೆ ನಡೆಸಿದರು. ಅಲ್ಲದೆ ಮೈಸೂರು ಮೃಗಾಲಯದಿಂದ ನೀರಾನೆ, ಹುಲಿ ಹಾಗೂ ವಿವಿಧ ಬಗೆಯ ಪಕ್ಷಿಗಳನ್ನು ಆಡು ಮಲ್ಲೇಶ್ವರ ಮೃಗಾಲಯಕ್ಕೆ ವರ್ಗಾವಣೆ ಮಾಡಿಕೊಳ್ಳುವ ಕುರಿತು ಚರ್ಚಿಸಿದರು.

ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮೈಸೂರು ಮೃಗಾಲಯ ನಿರ್ದೇಶಕ ಅಜಿತ್ ಕುಲಕರ್ಣಿ, ಡಿಆರ್‌ಎಫ್ ಮಂಜುನಾಥ್ ಮತ್ತಿತರರಿದ್ದರು.

ಎಸ್.ಸಿ.ವಾಲಿಂಡೀಕರ್ ಅಡೆಪ್ಪಾ ನಿಧನ


ಮೈಸೂರು: ಮೈಸೂರಿನ ನಜರ್‌ಬಾದ್ ಮುಖ್ಯ ರಸ್ತೆಯ ಅಶ್ವತ್ ವಿಲ್ಲಾ ನಿವಾಸಿ



ಎಸ್.ಸಿ. ವಾಲಿಂಡೀಕರ್ ಅಡೆಪ್ಪಾ (74) ಅವರು ಬುಧವಾರ ಬೆಳಗ್ಗೆ ನಿಧನರಾದರು.

ಮೈಸೂರು ಮೃಗಾಲಯದ ಸಹಾಯಕ ನಿರ್ದೇಶಕ ಸೇರಿದಂತೆ ಹಲವು ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದ ಮೃತರು ಪತ್ನಿ ಶೋಭಾ ರಾಣಿ, ಓರ್ವ ಪುತ್ರ ಹಾಗೂ ಪುತ್ರಿ ಮತ್ತು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಗುರುವಾರ) ಬೆಳಗ್ಗೆ 10 ಗಂಟೆಗೆ ಮೈಸೂರು ಲಲಿತಾದ್ರಿಪುರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

ದಂಡೀಕೆರೆ ಸುರೇಶ್



ಮೈಸೂರು: ಮೈಸೂರು ತಾಲೂಕು ವರುಣಾ ಹೋಬಳಿ ದಂಡೀಕೆರೆ ಗ್ರಾಮದ ಮೊಸರು ಮಹದೇವಪ್ಪನವರ ಮಗ ಸುರೇಶ್ (50) ಇಂದು ನಿಧನರಾದರು.

ಮೃತರು ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ದಂಡೀಕೆರೆ ಗ್ರಾಮದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಾರ್ಮಿಕರ ದಿನಾಚರಣೆ: 'ರೋಟರಿ ವೀನಸ್ ಶ್ರಮಜೀವಿ' ಪ್ರಶಸ್ತಿ ಪ್ರದಾನ



ಮೈಸೂರು, ಮೇ 4(ಜಿಎ)– ರೋಟರಿ ಮೈಸೂರು ಮಿಡ್‌ಟೌನ್ ವತಿಯಿಂದ ಅಂತಾರಾಷ್ಟ್ರೀಯ ಕಾರ್ಮಿಕರ ದಿನಾಚರಣೆ ಅಂಗವಾಗಿ 'ರೋಟರಿ ವೀನಸ್ ಶ್ರಮಜೀವಿ' ಪ್ರಶಸ್ತಿ ನೀಡಲಾಯಿತು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಬುಧವಾರ ಸಂಜೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಡಾ. ರೇಖಾ ಷಣ್ಮುಖ ಅವರು ತರಕಾರಿ ಸರಬರಾಜುದಾರ ಸಿ.ಮಹದೇವಸ್ವಾಮಿ ಮತ್ತು ಮಾಸ್ಟರ್ ಟೈಲರ್ ಎಂ.ಎಸ್. ಅಶೋಕ್ ಅವರಿಗೆ ರೋಟರಿ ವೀನಸ್ ಶ್ರಮಜೀವಿ ಪ್ರಶಸ್ತಿಯನ್ನು ಪ್ರದಾನ ಮಾಡಿ ಅಭಿನಂದಿಸಿದರು.

ನಂತರ ಮಾತನಾಡಿದ ಅವರು, ನಮ್ಮ ಗಮನಕ್ಕೆ ಬಾರದೇ ಅನೇಕ ಜನರು ತಮ್ಮ ಪಾಡಿಗೆ ತಾವು ಉತ್ತಮ ಕೆಲಸಗಳನ್ನು ಮಾಡಿಕೊಂಡು ಇರುತ್ತಾರೆ. ಅಂತಹವರನ್ನು ರೋಟರಿ ಮೈಸೂರು ಮಿಡ್‌ಟೌನ್ ಪ್ರತಿ ವರ್ಷ ಹುಡುಕಿ ಈ ರೀತಿ ಪ್ರಶಸ್ತಿಯನ್ನು ನೀಡುತ್ತಿರುವುದು ಹೆಮ್ಮೆಯ ವಿಷಯ ವಾಗಿದೆ ಎಂದರು.

ಮಹದೇವಸ್ವಾಮಿ ಮತ್ತು ಅಶೋಕ್ ಅವರಿಗೆ ಅವರ ತ್ಯಾಗ, ಪರಿಶ್ರಮದ ಫಲದಿಂದ ಮಾತ್ರ ವೀನಸ್ ಶ್ರಮಜೀವಿ ಪ್ರಶಸ್ತಿ ಲಭಿಸಿದೆ. ವಿಶ್ವದಾದ್ಯಂತ ಸೇವೆಗಾಗಿ ಇರುವ ರೋಟರಿ ಸಂಸ್ಥೆಯು ಉತ್ತಮ ಕೆಲಸವನ್ನು ಮಾಡುತ್ತಿದೆ. ಇದಕ್ಕೆ ಉದಾಹರಣೆಯಂತೆ ನಮ್ಮ ಸ್ವಾಮಿವಿವೇಕಾನಂದ ಯೂತ್ ಮೂವ್‌ಮೆಂಟ್ ಜತೆಯೂ ಕೈಜೋಡಿಸಿರುವುದರಿಂದ ನಾವು ಸಹ ಉತ್ತಮ ಸೇವೆ ಮಾಡಲು ಸಹಾಯಕವಾ ಗಿದೆ ಎಂದು ತಿಳಿಸಿದರು.

ಸಂಸ್ಥೆಯ ಅಧ್ಯಕ್ಷ ಡಾ.ಎಸ್.ಎಂ.ರವೀಂದ್ರನಾಥ್, ವೀನಸ್ ಎಗ್ ಸೆಂಟರ್ ಮಾಲೀಕ ಆರ್.ವೆಂಕಟೇಶ್, ರಮೇಶ್, ವಿಜಯಕುಮಾರ್, ಡಾ.ಚಂದ್ರಶೇಖರ್ ಮಂಜುನಾಥ್, ರವೀಂದ್ರಬಾಬು, ಲಾವಣ್ಯ ಮತ್ತಿತರರು ಭಾಗವಹಿಸಿದ್ದರು.

ನಕ್ಕರೆ ಅದೇ ಸ್ವರ್ಗ

ಆತ : "ನಿಮ್ಮ ಅಜ್ಜ ಇವತ್ತು ನನ್ನ ಜೊತೆ ಮಾತು ಮಾತಿಗೂ ನಗ್ತಾ ಇದ್ರು ಯಾಕೆ?"

ಈತ : "ನಿನ್ನೆ ತಾನೆ ಹೊಸ ಹಲ್ಲಿನ ಸೆಟ್ ಕಟ್ಟಿಸಿಕೊಂಡು ಬಂದಿದ್ದಾರೆ. ಅದಕ್ಕೇ ಹೀಗೆ ನಗ್ತಾ ಇದ್ದಾರೆ!"

ಮೈಸೂರು ಮಿತ್ರ

ಗುರುವಾರ, 5 ಮೇ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ತಪ್ಪು ದಾರಿಯಿಂದ ಗಳಿಸಿಕೊಂಡ ಅಧಿಕಾರದಿಂದ ಒಳ್ಳೆಯದನ್ನು ಸಾಧಿಸುವುದು ಅಸಾಧ್ಯ. – ಟೆನಿಸನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಬಲ್ಲವನಾದರೂ ಕಲ್ಲು ತಗುಲಿದರೆ ತಲ್ಲಣಿಸದೇ ಇರನು

ನಿಮ್ಮ ಪತ್ರಗಳು

ಲಿಂಗಾಂಬುದಿ ಪರಿಸರಕ್ಕೆ ತಪ್ಪದ ತ್ಯಾಜ್ಯ ಹರಿವು, ಕೇಳದ ಕೂಗು



ಮಾನ್ಯರೆ,

ಲಿಂಗಾಂಬುದಿ ಅರಣ್ಯ ಪರಿಸರ ಪ್ರೇಮಿಗಳ ಅದ್ಭುತ ತಾಣ. ಇಲ್ಲಿಗೆ ನಿರಂತರವಾಗಿ ಪ್ಲಾಸ್ಟಿಕ್ ತ್ಯಾಜ್ಯ ಹರಿದು ಬರುವ ಬಗ್ಗೆ ಪದೇ ಪದೆ ವರದಿಯಾಗಿದ್ದರೂ, ಪರಿಹಾರ ಸಿಕ್ಕಿಲ್ಲ. ಮಳೆ ಬಂದಾಗಲೆಲ್ಲಾ ಆ ಮಳೆ ನೀರಿನೊಂದಿಗೆ ಬಾರೀ ಪ್ರಮಾಣದಲ್ಲಿ ತ್ಯಾಜ್ಯ ಹರಿದು ಬರುತ್ತದೆ. ಕೆಲವೊಮ್ಮೆ ಸರಾಗವಾಗಿ ಮುಂದೆ ಸಾಗದೇ ಅಲ್ಲಲ್ಲಿ ರಾಶಿ ರಾಶಿ ಬೀಳುತ್ತದೆ. ಇದು ಇಲ್ಲಿನ ಮಣ್ಣಿನೊಂದಿಗೆ ಸೇರುವುದಲ್ಲದೇ, ಯಾವುದೇ ಜೀವಿಗೆ ಕಂಟಕವೂ ಆಗಬಹುದು.

ಅರಣ್ಯ ಇಲಾಖೆಗೆ ಇದುವರೆಗೂ ಈ ಬಗ್ಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಿಲ್ಲ? ಎಂಬುದು ಇಲ್ಲಿ ನಿರಂತರವಾಗಿ ಭೇಟಿ ನೀಡುವ ಪರಿಸರ ಪ್ರೇಮಿಗಳಿಗೆ ಯಕ್ಷ ಪ್ರಶ್ನೆ.ಇತ್ತೀಚೆಗಷ್ಟೇ 'ಭೂದಿನ' ಆಚರಿಸಿ, 'ಪರಿಸರ ದಿನ'ದೆಡೆಗೆ ಹೆಜ್ಜೆ ಇಡುತ್ತಿದ್ದೇವೆ. ಗಿಡನೆಟ್ಟು 'ಪ್ರಗತಿ' ತೋರಿಸುವಂತೆಯೇ ಇರುವ ಪರಿಸರ ಉಳಿಸುವ ಕಾಳಜಿಯೂ ತೋರಬೇಕು. ಕಾಡು ಹಂದಿ, ಹಾವು, ಮುಂಗುಸಿ ಸೇರಿದಂತೆ ಹಲವಾರು ಪ್ರಾಣಿ ಪಕ್ಷಿಗಳ ತಾಣ ಇದು. ನವಿಲಿನ ನಿರಂತರ ಕೂಗು ಮುದ ನೀಡುವ ತಾಣ ಇದು. ಇಂಥಹ ಪರಿಸರ ಇಷ್ಟು ಕಲ್ಮಶವಾದಲ್ಲಿ ಮುಂದಿನ ಜನಾಂಗ ನೈಸರ್ಗಿಕ ಕಾಡಿನ ಬದಲು, ಬೃಹತ್ ಕಟ್ಟಡಗಳ ಕಾಂಕ್ರಿಟ್ ಕಾಡನ್ನೇ ಇಷ್ಟ ಪಡಲು ಪ್ರಾರಂಭಿಸಬಹುದು.

ಅರಣ್ಯ ಇಲಾಖೆ ಪರಿಮಿತಿಯ ಯಾ ಅಸಹಾಯಕತೆಯ ಕಾರಣ ಹೇಳದೆ ಖಾಯಂ ಪರಿಹಾರ ಕಲ್ಪಿಸಲಿ ಎಂಬುದೇ ಸಾರ್ವಜನಿಕರ ಮನವಿ.ಯಾವುದೇ ಕ್ರಮದಲ್ಲಿ ಪರಿಸರ ಸಂರಕ್ಷಣಾ ಕೆಲಸಕ್ಕೆ ನಾವೂ ಕೈ ಜೋಡಿಸುತ್ತೇವೆಂಬ ಭರವಸೆಯನ್ನು ಇಲ್ಲಿನ ಪರಿಸರ ಪ್ರೇಮಿಗಳು ನೀಡುತ್ತಾರೆ.

–ಅನಿಲ್ ಕುಮಾರ್ ನಾಡಿಗೇರ್, ಇಂಧನ ಹಾಗೂ ಪರಿಸರ ಸಲಹೆಗಾರರು, ಮೈಸೂರು.

ಪಾರಂಪರಿಕತೆ ಉಳಿಸಿಕೊಳ್ಳುವತ್ತ? ಒಂದು ಚಿಂತನೆ

ಮಾನ್ಯರೆ,

ಮೈಸೂರಿನ ಪಾರಂಪರಿಕ ಕಟ್ಟಡಗಳ ವಿಷಯ ಪ್ರಸ್ತಾಪವಾದಾಗಲೆಲ್ಲಾ, ಪರ ವಿರೋಧ ವಾದಗಳ ಮೂಲಕವೇ ಸಮಯ ಕಳೆಯುತ್ತಾ ಬಂದಿದೆ. ಶಿಥಿಲಾವಸ್ಥೆ ತಲುಪಿರುವ ಪಾರಂಪರಿಕ ಕಟ್ಟಡಗಳ ನೆಲಸಮಗೊಳಿಸಿ, ಅದೇ ಶೈಲಿಯ ನಿರ್ಮಾಣಗಳನ್ನು ಮಾಡಬೇಕೆನ್ನುವವರು ಅಭಿವೃದ್ಧಿ ಮತ್ತು ಮುಂದಿನ ಬೆಳವಣಿಗೆಗಳನ್ನು ಮನಗಂಡು ಮಾತನಾಡಿದರೆ, ಇದಕ್ಕೆ ವಿರೋಧ ವ್ಯಕ್ತಪಡಿಸುವವರು, ಪಾರಂಪರಿಕತೆಗೆ ಎಲ್ಲಿ ಧಕ್ಕೆಯಾಗುತ್ತದೆಯೋ ಅಥವಾ ಹಳೆಯತನವನ್ನು ಮರೆ ಮಾಚಿ ಎಲ್ಲಿ ಹಳೆಯ ಸೊಗಡನ್ನು ತೆಗೆದುಬಿಡುವರೋ ಎಂಬ ಭಾವನೆ ಅವರಲ್ಲಿರಬಹುದು. ಒಟ್ಟಾರೆ ಈ ಜಿಜ್ಞಾಸೆಯ ನಡುವೆಯೇ ಈ ಪಾರಂಪರಿಕ ಕಟ್ಟಡಗಳಿಗೆ ಮುಕ್ತಿ ಬಹುಶಃ ದೊರೆಯಲಾರದೇನೋ. ಒಮ್ಮೆ ಪರ ವಾದಿಸುವವರ ಮಾತು ಕೇಳಿದಲ್ಲಿ, ಅವರೇ ಸರಿ ಎನಿಸಿದರೂ, ವಿರೋಧ ವ್ಯಕ್ತಪಡಿಸುವವರ ಮಾತನ್ನೂ ಕೇಳಿದರೆ, ಅವರು ಹೇಳುವುದು ಸರಿ ಎನ್ನಲಡ್ಡಿಯಿಲ್ಲ.

ಹಾಗಿದ್ದರೆ, ಇದರ ಬಗ್ಗೆ ಏನು ಮಾಡಬೇಕು. ಪಾರಂಪರಿಕತೆ, ಪುರಾತನ ಎನ್ನುವವರೇ, ಮೈಸೂರಿನಲ್ಲಿ ಈಗಾಗಲೇ ಲ್ಯಾನ್ಸ್‌ಡೌನ್ ಕಟ್ಟಡ, ದೇವರಾಜ ಮಾರುಕಟ್ಟೆ, ಹೀಗೆ ಹತ್ತು ಹಲವಾರು ಪಾರಂಪರಿಕ ಕಟ್ಟಡಗಳು ನೂರಾರು ವರುಷಗಳ ಹಿಂದೆ ನಿರ್ಮಿಸಲಾಗಿದೆ. ಆಗೆಲ್ಲಾ ಇಂದಿನ ಹಾಗೆ ತಾಂತ್ರಿಕತೆ ಇರಲಿಲ್ಲವಾದರೂ, ಗಾರೆ, ಮಣ್ಣು, ಹೀಗೆ ಅಂದಿನ ಕಾಲದ ತಾಂತ್ರಿಕತೆಗನುಗುಣವಾಗಿಯೇ ಕಟ್ಟಿದ್ದರು. ಆದರೆ, ಕಾಲನ ಹೊಡೆತಕ್ಕೆ ಸಿಕ್ಕಿ ಅವುಗಳು ಇದೀಗ ಕುಸಿಯುವ ಹಂತಕ್ಕೆ ಬಂದಿವೆ. ಈಗಾಗಲೇ ದೇವರಾಜ ಮಾರುಕಟ್ಟೆಯ ಭಾಗ ಕುಸಿದು ಮಣ್ಣಾಗಿದೆ. ಲ್ಯಾನ್ಸ್‌ಡೌನ್ ಕಟ್ಟಡ ಭೂತ ಬಂಗಲೆಯಾಗಿದೆ. ಹೀಗೆ ಇನ್ನೂ ಇರುವ ಹಲವಾರು ಪಾರಂಪರಿಕ ಕಟ್ಟಡಗಳು ಇದೇ ಹಾದಿ ಹಿಡಿದು ಅನಾಥವಾಗುವುದರಲ್ಲಿ ಸಂದೇಹವೇ ಇರಲಾರದು. ಆದರೆ, ಏನು ಮಾಡಬೇಕು. ಬಹುಶಃ ಒಂದು ಪಕ್ಷ ಹೊಸದಾಗಿಯೇ ಪಾರಂಪರಿಕ ಕಟ್ಟಡವನ್ನು ಪೂರ್ಣ ಕೆಡವಿ ನೂತನವಾಗಿ, ಹಳೆಯತನದ ಪಾರಂಪರಿಕತೆಗೆ ಚೂರೂ ಧಕ್ಕೆ ಬಾರದಂತೆ ಕಟ್ಟಬಹುದೇ ಎನ್ನಲು, ಇಂದು ನಡೆಯುವ ರಸ್ತೆ ಕಾಮಗಾರಿ, ಕಟ್ಟಡ ಕಾಮಗಾರಿಗಳನ್ನು, ನೀರಾವರಿ ಕಾಮಗಾರಿಗಳ ಕರ್ಮಕಾಂಡವನ್ನು ನೋಡಿಯೇ ಅದಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ ಎನಿಸುವುದುಂಟು. ನಿಜ, ಅವರ ಭಾವನೆಗಳು ಮತ್ತು ಅನಿಸಿಕೆಗಳು ಬಹಳ ಸ್ಪಷ್ಟ. ಆದರೆ, ಹಾಗೆಂದುಕೊಂಡು ಹಾಗೇ ಬಿಟ್ಟರೆ, ಉಳಿದ ಕಟ್ಟಡಗಳು ಇನ್ನು ಸ್ವಲ್ಪ ಕಾಲದಲ್ಲಿಯೇ ಧರೆಯಲ್ಲಿ ಹುದುಗಿ ಹೋಗಬಹುದೇನೋ. ಇಲ್ಲಿ ಒಂದು ಗಮನಿಸಬೇಕಾದ ಸಂಗತಿ ಇದೆ. ಅತ್ಯಂತ ಕಠಿಣವಾದ ಶ್ರೀರಂಗಪಟ್ಟಣದ ಮದ್ದಿನ ಮನೆಯನ್ನೇ ಆಧುನಿಕ ತಂತ್ರಜ್ಞಾನ ಬಳಸಿ ಸ್ಥಳಾಂತರಿಸಲಾಗಲಿಲ್ಲವೇ. ಅಥವಾ ನೂತನ ಜಿಲ್ಲಾಧಿಕಾರಿಗಳ ಕಟ್ಟಡ, ಮಹಾರಾಣಿ ಕಾಲೇಜಿನ ಕಟ್ಟಡ, ಹೀಗೆ ಹಲವಾರು ಹೊಸ ಕಟ್ಟಡಗಳಲ್ಲಿ ಪಾರಂಪರಿಕತೆ ಜೊತೆಗೆ ನಾವೀನ್ಯತೆ ಮತ್ತು ದೀರ್ಘ ಬಾಳಿಕೆಯನ್ನು ಕಾಪಾಡಿಕೊಳ್ಳಲಿಲ್ಲವೇ!? ಒಂದು ವೇಳೆ, ಇದಕ್ಕೆ ಅನುಮಾನವಿದ್ದಲ್ಲಿ, ಇದಕ್ಕಾಗಿಯೇ ಒಂದು ತಂಡವನ್ನು ರಚಿಸಲಿ. ಅದರನ್ವಯ ಪಾರಂಪರಿಕತೆಗೆ ಕಿಂಚಿತ್ತೂ ಚ್ಯುತಿಯಾಗದಂತೆ, ಮತ್ತೆ ನೂರಾರು ವರುಷ ಬಾಳಿಕೆ ಬರುವಂತಹ ಹಳೇ ಮಾದರಿಯ ಕಟ್ಟಡ ನಿರ್ಮಿಸಲಿ. ಅದರಲ್ಲಿ, ಪಾಲಿಕೆಗೆ ಆದಾಯ ತರುವಂತಹ ವುಗಳನ್ನೂ ಗಮನಿಸಲಿ. ಅಂದರೆ, ಸಯ್ಯಾಜಿರಾವ್ ರಸ್ತೆಯ ಕಡೆಯ ದೇವರಾಜ ಮಾರುಕಟ್ಟೆ ಪುನರ್ ನಿರ್ಮಿಸಿದಲ್ಲಿ, ವಿಶ್ವಪ್ರಸಿದ್ಧ ದಸರೆಯ ಜಂಬೂ ಸವಾರಿ ನೋಡುವಂತಾಗಲೂ, ಅಂಗಡಿಗಳ ಅಟ್ಟಣಿಗೆಗಳ ಮೇಲೆ ಕೂರಲು ಸ್ಥಳಾವಕಾಶ ನಿರ್ಮಿಸಲಿ. ಅದಕ್ಕೆ ಟಿಕೆಟ್ ನೀಡಲಿ. ಅದರಿಂದ ಪಾರಂಪರಿಕತೆಗೆ ಧಕ್ಕೆಯೇನೂ ಇಲ್ಲವಲ್ಲ ಇವುಗಳಲ್ಲದೇ ಇನ್ನೂ ಹಲವಾರು ಮಾರ್ಗಗಳಿವೆ. ಅವುಗಳನ್ನೆಲ್ಲಾ ನೋಡದೇ, ಏಕಪಕ್ಷೀಯವಾಗಿ, ಪುನರ್ ನಿರ್ಮಾಣ ಬೇಡವೆನ್ನುವುದು ಹಾಸ್ಯಾಸ್ಪದವಾಗುತ್ತದೆ ಯಲ್ಲವೇ? ಇದು ಹೀಗೆಯೇ ಮುಂದುವರಿದರೆ, ಹೇಳಲು ಇಲ್ಲಿ ಶತಮಾನಗಳ ಹಿಂದಿನ ಕಟ್ಟಡ ಎಂದು ತೋರಿಸಲು ಏನೂ ಉಳಿದಿರಲಾರದಷ್ಟೆ. ಇದಕ್ಕೆ ತಾಜಾ ಉದಾಹರಣೆ, ದೇವರಾಜ ಮಾರುಕಟ್ಟೆಯ ಕುಸಿದಿರುವ ಪ್ರದೇಶ. ಪ್ರಜ್ಞಾವಂತರು ಈ ಬಗ್ಗೆ ದೀರ್ಘ ಚಿಂತನೆ ನಡೆಸಿ, ಶೀಘ್ರವೇ ಪಾರಂಪರಿಕತೆ ಉಳಿಸುವತ್ತ ಹಾಗೆಯೇ ಮುಂದುವರಿದ ಪೀಳಿಗೆಗೆ ಇದರ ಬಗ್ಗೆ ಮಾಹಿತಿ ಸಿಗುವಂತಾಗಲೂ ಒಂದು ಹೊಸ ಕಾಯಕಲ್ಪ ಕೈಗೊಳ್ಳುವ ಅವಶ್ಯಕತೆ ಬಗ್ಗೆ ಕ್ರಮ ಕೈಗೊಳ್ಳುವುದು ಸಕಾಲಿಕ.

–ವಿಜಯ್ ಹೆಮ್ಮಿಗೆ, ಮೈಸೂರು



ಪ್ರೊ. ಆರ್. ಇಂದಿರಾ
ಸಮಾಜ ಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಭಾರತದ ದುಡಿಮೆಗಾರ ವರ್ಗದಲ್ಲಿ ಇಳಿಮುಖವಾಗುತ್ತಿರುವ ಮಹಿಳೆಯರ ಪ್ರಮಾಣ


ಭಾರತದ ಅಭಿವೃದ್ಧಿ ಚರ್ಚೆಯಲ್ಲಿ ಗೌಣವಾಗುತ್ತಿರುವ ವಿಚಾರಗಳಲ್ಲಿ ಒಂದೆಂದರೆ, ದೇಶದಲ್ಲಿ ದುಡಿಮೆಗಾರ (ತಮ್ಮ ಕೆಲಸಕ್ಕೆ ವೇತನವನ್ನು ಪಡೆಯುತ್ತಿರುವವರು) ವರ್ಗದಲ್ಲಿ ದಶಕದಿಂದ ದಶಕಕ್ಕೆ ಇಳಿಮುಖವಾಗುತ್ತಿರುವ ಮಹಿಳೆಯರ ಭಾಗವಹಿಸುವಿಕೆ. ಪಿರಿಯಾಡಿಕ್ ಲೇಬರ್ ಫೋರ್ಸ್ ಸರ್ವೇ 2020 ನೀಡಿರುವ ಮಾಹಿತಿಯ ಅನ್ವಯ ದುಡಿಮೆಯ ವಯೋಗುಂಪಿನಲ್ಲಿರುವ ಮಹಿಳೆಯರಲ್ಲಿ ಶೇಕಡಾ 18.6 ರಷ್ಟು ಮಾತ್ರ ಕಾರ್ಮಿಕ ವರ್ಗದಲ್ಲಿ ಭಾಗವಹಿಸುತ್ತಿದ್ದಾರೆ. ಈ ಪ್ರಮಾಣ ಪುರುಷರ ಭಾಗವಹಿಸುವಿಕೆಗಿಂತ ಮೂರು ಪಾಲು ಕಡಿಮೆಯಿದೆ. ವಿಶ್ವ ಬ್ಯಾಂಕ್ ಪ್ರಕಾರ ಇಡೀ ಜಗತ್ತಿನಲ್ಲೇ ಕೆಲ ಅರಬ್ ದೇಶಗಳನ್ನು ಹೊರತುಪಡಿಸಿದರೆ, ದುಡಿಯುವ ವರ್ಗದಲ್ಲಿ ಅತ್ಯಂತ ಕಡಿಮೆ ಪ್ರಮಾಣದ ಮಹಿಳಾ ಭಾಗವಹಿಸುವಿಕೆ ಇರುವುದು ಭಾರತದಲ್ಲೇ.

ಭಾರತದಲ್ಲಿ ಆರ್ಥಿಕ ಬೆಳವಣಿಗೆ ಅಧಿಕ ಪ್ರಮಾಣದಲ್ಲಿ ಆಗುತ್ತಿದೆ ಎಂಬ ಮಾತನ್ನು ಆಗಾಗ್ಗೆ ಕೇಳುತ್ತಲೇ ಇರುತ್ತೇವೆ. ಕಳೆದ 2 ದಶಕಗಳಲ್ಲಿ ಭಾರತೀಯ ಸ್ತ್ರೀಯರ ಪ್ರಾತಿನಿಧ್ಯ ಶಿಕ್ಷಣದ ಎಲ್ಲ ಮಟ್ಟಗಳಲ್ಲೂ ಗಮನಾರ್ಹವಾದ ಹೆಚ್ಚಳವನ್ನು ಕಂಡಿದೆ. ಇಂದು ಅವರು ಎಲ್ಲಾ ಉದ್ಯೋಗಗಳಲ್ಲಿಯೂ ಪ್ರವೇಶವನ್ನು ಪಡೆದಿದ್ದಾರೆ. ಹೆಣ್ಣು ಮಕ್ಕಳ ವಿವಾಹದ ಸರಾಸರಿ ವಯಸ್ಸಿನಲ್ಲೂ ಏರಿಕೆಯಾಗಿದೆ, ಫಲಿತತೆಯ ಪ್ರಮಾಣವೂ ಇಳಿದಿದೆ. ಆದಾಗ್ಯೂ ಶ್ರಮಿಕ ವರ್ಗದಲ್ಲಿ ಅವರ ಸಂಖ್ಯೆ ಕ್ರಮೇಣ ಇಳಿಮುಖವಾಗುತ್ತಿದೆ.

ಒಂದು ಸಮಾಜದಲ್ಲಿ ಅರಿವಿನ ಮಟ್ಟ ಹೆಚ್ಚಾದಾಗ ಮಹಿಳೆಯರ ಆರ್ಥಿಕ ಸ್ವಾವಲಂಬನೆಯ ಹಂಬಲವೂ ಹೆಚ್ಚುತ್ತದೆ. ಶಾಲಾ ಮಟ್ಟದ ಮಾತಿರಲಿ, ಉನ್ನತ ಶಿಕ್ಷಣದಲ್ಲೇ, 2006–07ರಲ್ಲಿ ಶೇಕಡಾ 11 ರಷ್ಟಿದ್ದ ಮಹಿಳೆಯರ ಪ್ರಾತಿನಿಧ್ಯ 2019–20ರ ವೇಳೆಗೆ ಶೇಕಡಾ 49ರಷ್ಟಾಗಿತ್ತು ಎಂದು ಇಂಡಿಯಾ ಸರ್ವೇ ಆನ್ ಹೈಯರ್ ಎಜುಕೇಶನ್ ಮಾಹಿತಿ ತಿಳಿಸುತ್ತದೆ. ಒಂದೆಡೆ ಶಿಕ್ಷಣಾವಕಾಶ ಹಾಗೂ ಅದರ ಲಭ್ಯತೆ–ಎರಡರಲ್ಲೂ ಹೆಚ್ಚಳ, ಮತ್ತೊಂದೆಡೆ ಉದ್ಯೋಗಗಳಲ್ಲಿ ಅವರ ಪ್ರಾತಿನಿಧ್ಯ ಇಳಿಮುಖ–ಈ ವೈರುಧ್ಯ ಏಕೆ?

ಅಭಿವೃದ್ಧಿಶೀಲ ದೇಶಗಳಲ್ಲಿ ಅತೀ ಕಡಿಮೆ ಸಂಖ್ಯೆಯ ಮಹಿಳಾ ದುಡಿಮೆಗಾರರನ್ನು ಹೊಂದಿರುವ ದೇಶಗಳಲ್ಲಿ ಭಾರತ ಮೊದಲನೇ ಸಾಲಿನಲ್ಲಿದೆ. 1993–94ರಲ್ಲಿ ಶೇಕಡಾ 32.8 ರಷ್ಟಿದ್ದ ದುಡಿಮೆಯಲ್ಲಿ ಭಾಗವಹಿಸುವಿಕೆಯ ಗ್ರಾಮೀಣ ಮಹಿಳೆಯರ ಪ್ರಮಾಣ ಆ ಶತಮಾನ ಅಂತ್ಯಗೊಳ್ಳುವ ವೇಳೆಗೆ ಶೇಕಡಾ 29.9ಕ್ಕೆ ಇಳಿದಿತ್ತು. ಈ ಶತಮಾನದ ಮೊದಲ ದಶಕ ಕೊನೆಗೊಂಡಾಗ, ಅಂದರೆ 2010ರ ವೇಳೆಗೆ 26.1%ಗೆ ಇಳಿದಿದ್ದ ಅವರ ಪ್ರಾತಿನಿಧ್ಯ 2020ರ ವೇಳೆಗೆ ಶೇಕಡಾ 19ರಷ್ಟಾಯಿತೇಕೆ? ನಗರ ಕೇಂದ್ರಿತ ಉದ್ಯೋಗಗಳಲ್ಲಿ ಅವರ ಪ್ರಮಾಣ ಇದೇ ಅವಧಿಯಲ್ಲಿ ಶೇಕಡಾ 25ರಿಂದ 22.5%ಕ್ಕೆ ಇಳಿದಿದೆ ಎನ್ನುವುದು ಲಭ್ಯ ಮಾಹಿತಿಯ ಅಂಬೋಣ.

> ಮಹಿಳೆಯರು ನಿರುದ್ಯೋಗಿಗಳಾಗಲು ಅಥವಾ ಉದ್ಯೋಗಾಕಾಂಕ್ಷೆಯಿಂದ ದೂರವಿರಲು ಸಾಮಾಜಿಕ- ಸಾಂಸ್ಕೃತಿಕ ಕಾರಣಗಳು ಹಲವಾರಿವೆ. ವಿಶೇಷವಾಗಿ ವಿವಾಹಿತರು, ಸುರಕ್ಷಿತ ಶಿಶು ಪಾಲನಾ ವ್ಯವಸ್ಥೆ ಹಾಗೂ ಅನುಕೂಲಕರ ಸಾರ್ವಜನಿಕ ಸಾರಿಗೆ ಸೌಕರ್ಯ ಗಳಿಂದ ವಂಚಿತರಾದವರು, ಮಕ್ಕಳ ಪಾಲನೆ-ಪೋಷಣೆ ಮತ್ತು ಗೃಹ ನಿರ್ವಹಣೆಯ ಜವಾಬ್ದಾರಿ ಗಳನ್ನು ಏಕಾಂಗಿಯಾಗಿ ಹೊರಬೇಕಾದ ಸ್ಥಿತಿಯಲ್ಲಿ ರುವ ಅನೇಕ ಮಹಿಳೆಯರು ಉದ್ಯೋಗಾವಕಾಶ ಗಳು ಇದ್ದರೂ ಅವುಗಳನ್ನು ಬಳಸಿಕೊಳ್ಳಲಾಗುವು ದಿಲ್ಲ. ನಗರ ಮತ್ತು ಗ್ರಾಮೀಣ ಪ್ರದೇಶಗಳೆರಡರಲ್ಲೂ ಮಹಿಳೆಯರು ಮಾಡುತಿದ್ದ ಅನೇಕ ಕೆಲಸಗಳಿಗೆ, ಈಗ ಪುರುಷರನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ.



1993–94ರಿಂದ ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರು ಕೆಲಸಗಳನ್ನು ಕಳೆದುಕೊಳ್ಳುತ್ತಿದ್ದಾರೆ ಅಥವಾ ಅತ್ಯಂತ ಕ್ಷುಲ್ಲಕ ವೇತನವನ್ನು ತರುವ ಕೆಲಸಗಳಲ್ಲಿ ಕೇಂದ್ರೀಕೃತರಾಗುತ್ತಿದ್ದಾರೆ. ಅಧ್ಯಯನಗಳ ಪ್ರಕಾರ ಹೆಚ್ಚಿನ ಗ್ರಾಮೀಣ ಮಹಿಳೆಯರು ವಿಶೇಷ ಕೌಶಲ್ಯಗಳನ್ನೇನೂ ನಿರೀಕ್ಷಿಸದ ಉದ್ಯೋಗಗಳಲ್ಲಿ ತೊಡಗಿದ್ದರೆ ನಗರಗಳಲ್ಲಿ ಬೆಳೆಯುತ್ತಿರುವ ಸೇವಾ ಕ್ಷೇತ್ರದಲ್ಲಿ ಮಹಿಳೆಯರನ್ನು ಹೆಚ್ಚಿನ ಸಂಖ್ಯೆಯಲ್ಲಿ ಕಾಣಬಹುದು.

ಕೋವಿಡ್ ಮಹಾ ಪಿಡುಗು ಎರಡು ವರ್ಷಗಳ ಹಿಂದೆ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ತಂಡ ಪಲ್ಲಟಗಳ ಕಾರಣದಿಂದಾಗಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗಾವಕಾಶಗಳನ್ನು ಕಳೆದುಕೊಂಡವರು ಮಹಿಳೆಯರು. ಲಾನ್ಸೆಟ್ ನಿಯತಕಾಲಿಕೆಯ ಪ್ರಕಾರ ಮಹಿಳೆಯರ ಉದ್ಯೋಗ ನಷ್ಟದ ಪ್ರಮಾಣ, ಪುರುಷರ ಶೇ. 20ಕ್ಕೆ ಹೋಲಿಸಿದರೆ ಶೇಕಡಾ 26ರಷ್ಟಿತ್ತು. ಇವರಲ್ಲಿ ಯುವ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಇದ್ದು ಇದಕ್ಕೆ ಕಾರಣವೆಂದರೆ ಅವರಿಗೆ ಉದ್ಯೋಗಗಳನ್ನು ಒದಗಿಸಿದ್ದ ಶಿಶು ಆರೈಕೆ ಕೇಂದ್ರಗಳು, ಶಾಲೆಗಳು, ಉಡುಪು ತಯಾರಿಕಾ ಘಟಕಗಳು, ಸಣ್ಣ ಅಂಗಡಿಗಳು, ಬೃಹತ್ ಮಾಲುಗಳು ಹಾಗೂ ಹೋಟೆಲ್ ಉದ್ಯಮ ಮುಂತಾದುವು ಕೋವಿಡ್ ಕಾರಣದಿಂದಾಗಿ ಮುಚ್ಚಿದ್ದವು.

ಕೋವಿಡ್‌ನಿಂದ ದುಡಿಯುವ ವರ್ಗದಿಂದ ಹೊರದೂಡಲ್ಪಟ್ಟವರು ಕೇವಲ ಸೇವಾ ಕ್ಷೇತ್ರದಲ್ಲಿದ್ದ ಮಹಿಳೆಯರಲ್ಲ. ಲಾಕ್‌ಡೌನ್ ಕಾರಣದಿಂದಾಗಿ ನಗರಗಳಲ್ಲಿನ ಕಟ್ಟಡ ನಿರ್ಮಾಣ ಕೆಲಸ ಮತ್ತು ಮನೆಗೆಲಸದ ಅವಕಾಶಗಳು ಮುಚ್ಚಿಕೊಂಡು ಹೋದಾಗ ಮೇಲ್ನೋಟಕ್ಕೆ ಎನಿಸಿದ್ದು ನಗರ ಮಹಿಳಾ ಕಾರ್ಮಿಕ ವರ್ಗ ಕುಗ್ಗುತ್ತಿದೆ ಎಂದು. ಆದರೆ ಇದರಲ್ಲಿ ಸಹಸ್ರಾರು ಸಂಖ್ಯೆಯ ಮಹಿಳೆಯರು ದೇಶದ ನಾನಾ ರಾಜ್ಯಗಳ ಬೇರೆ–ಬೇರೆ ಗ್ರಾಮಗಳಿಂದ ಬೃಹತ್ ನಗರಗಳಿಗೆ ವಲಸೆ ಬಂದವರಾಗಿದ್ದು, ಅವರಿಗೆ ಬರುತ್ತಿದ್ದ ಆದಾಯ ಇದ್ದಕಿದ್ದ ಹಾಗೆ ಕುಸಿದಾಗ ಅಸಹಾಯಕರಾಗಿ ತಮ್ಮ ಸ್ವಗ್ರಾಮಗಳಿಗೆ ಹಿಂದಿರುಗಬೇಕಾಯ್ತು. ಹಾಗೆ ಮರು–ವಲಸೆ ಹೋದ ಬಹುತೇಕ ಮಂದಿಗೆ ಯಾವ ಕೆಲಸವೂ ದೊರೆಯದೆ ಅವರು ಗ್ರಾಮೀಣ ನಿರುದ್ಯೋಗಿಗಳ ಸಾಲಿಗೆ ಸೇರಿ ಹೋದರು. ಅವರ ಬಳಿ ನರೇಗಾ ಕಾರ್ಡ್ ಅಥವಾ ಇತರ ದಾಖಲೆಗಳು ಇಲ್ಲದಿದ್ದುದರಿಂದ ಕೆಲಸಗಳು ದೊರೆಯುವುದು ಅಸಂಭವವಾಯಿತು.

2016ರಲ್ಲಿ ನೋಟು ಅಮಾನ್ಯೀಕರಣವಾದಾಗಲೇ ಸುಮಾರು 25 ಲಕ್ಷ ಮಹಿಳೆಯರು ಉದ್ಯೋಗಗಳನ್ನು ಕಳೆದುಕೊಂಡರು ಎಂದು ಹೇಳಿರುವ ಒಂದು ಆರ್ಥಿಕ ಅಧ್ಯಯನ ಕೋವಿಡ್ ಕಾರಣದಿಂದಾಗಿ ಸಂಭವಿಸಿದ ಉದ್ಯೋಗ ನಷ್ಟದಲ್ಲಿ ಕೆಲಸಗಳನ್ನು ಕಳೆದುಕೊಂಡ ಮಹಿಳೆಯರ ಪ್ರಮಾಣ ಪುರುಷರ ಪ್ರಮಾಣಕ್ಕಿಂತ 10 ಪಟ್ಟು ಹೆಚ್ಚಿತ್ತು ಎಂದಿದೆ. ಇದರಲ್ಲಿ ಬಹು ಮಂದಿಗೆ ಮತ್ತೆ ಉದ್ಯೋಗಗಳು ದೊರೆಯುವ ಸಾಧ್ಯತೆ ಕಡಿಮೆ, ಏಕೆಂದರೆ ಕೋವಿಡ್ ನಂತರ ಹೊರಹೊಮ್ಮುತ್ತಿರುವ ನವ–ಉದ್ಯೋಗ ಮಾರುಕಟ್ಟೆಯಲ್ಲಿ ಪ್ರವೇಶ ಪಡೆಯಲು ಅಗತ್ಯವಾದ ಕೌಶಲಗಳಾಗಲೀ, ಅವುಗಳನ್ನು ಪಡೆದುಕೊಳ್ಳುವ ಅವಕಾಶಗಳಾಗಲೀ ಬಹು ಮಂದಿ ಬಡ ಗ್ರಾಮೀಣ ಮಹಿಳೆಯರಿಗೆ ಇಲ್ಲ. ಕೆಲಸಗಳನ್ನು ಕಳೆದುಕೊಂಡ ಪುರುಷರಲ್ಲಿ ಶೇಕಡಾ 67ರಷ್ಟು ಮತ್ತೆ ಉದ್ಯೋಗಗಳನ್ನು ಹುಡುಕುತ್ತಿದ್ದರೆ, ಮಹಿಳೆಯರಲ್ಲಿ ಶೇಕಡಾ 37 ರಷ್ಟು ಮಾತ್ರ ಉದ್ಯೋಗದ ಹುಡುಕಾಟದಲ್ಲಿದ್ದಾರೆ ಎಂದು ಒಂದು ಅಧ್ಯಯನ ತಿಳಿಸಿದೆ. ತಮ್ಮ ಕೆಲಸಗಳನ್ನು ಕಳೆದುಕೊಂಡು ಮೂಲ ವಾಸಸ್ಥಾನಗಳಿಗೆ ಹಿಂದಿರುಗಿದ ಮಹಿಳೆಯರು ಇನ್ನು ಮುಂದೆ ಕುಟುಂಬ ನಿರ್ವಹಣೆಗಾಗಿ ಏನನ್ನೂ ಕೊಡಲು ಸಾಧ್ಯವಿಲ್ಲ ಎಂಬ ಪರಿಸ್ಥಿತಿಗೆ ತಲುಪಿದಾಗ ಅವರ ಮೇಲಿನ ಕೌಟುಂಬಿಕ ದೌರ್ಜನ್ಯಗಳೂ ಹೆಚ್ಚಾಗಿವೆ ಎಂದು ಅಧ್ಯಯನಗಳು ತಿಳಿಸುತ್ತಿವೆ.

ಕೋವಿಡ್‌ನಿಂದ ಮಹಿಳಾ ನಿರುದ್ಯೋಗದ ಪ್ರಮಾಣ ಹೆಚ್ಚು ತೀವ್ರವಾಯಿತು ನಿಜ. ಆದರೆ ಸುಮಾರು ಮೂರು ದಶಕಗಳಿಂದಲೂ ದುಡಿಯುವ ವರ್ಗದ ನಕಾಶೆಯಿಂದ ಮಹಿಳೆಯರ ನಿರ್ಗಮನ ನಿರಂತರವಾಗಿ ನಡೆಯುತ್ತಲೇ ಇದೆ. ಭಾರತದಲ್ಲಿ ಗೋಚರವಾಗುತ್ತಿರುವ ಈ ಪ್ರವೃತ್ತಿ ಜಗತ್ತಿನ ಮತ್ಯಾವುದೇ ಭಾಗದಲ್ಲಿ ಕಂಡುಬರುವುದಿಲ್ಲ ಎಂದು ಅರ್ಥಶಾಸ್ತ್ರಜ್ಞರು ಹೇಳುತ್ತಿದ್ದಾರೆ. ಆಧುನೀಕರಣ, ಜಾಗತೀಕರಣ, ಖಾಸಗೀಕರಣ, ಆರ್ಥಿಕ ಉದಾರೀಕರಣ–ಈ ಯಾವ ಪ್ರಕ್ರಿಯೆಗಳೂ ಏಕೆ ಮಹಿಳೆಯರ ಗಳಿಕಾ ಶಕ್ತಿಯನ್ನು ವೃದ್ಧಿಸುತ್ತಿಲ್ಲ ಎಂಬ ಪ್ರಶ್ನೆಗೆ ಉತ್ತರವನ್ನು ಹುಡುಕುತ್ತಾ ಹೊರಟರೆ, ಹೇಗೆ ಉದ್ಯೋಗ ವಲಯ ಇನ್ನೂ ಲಿಂಗ ಪೂರ್ವಾಗ್ರಹಗಳಿಂದ ಹೊರ ಬಂದಿಲ್ಲ ಎಂಬ ಸತ್ಯ ನಮ್ಮ ಮುಂದೆ ತೆರೆದುಕೊಳ್ಳುತ್ತಾ ಹೋಗುತ್ತದೆ.

ಮಹಿಳೆಯರು ನಿರುದ್ಯೋಗಿಗಳಾಗಲು ಅಥವಾ ಉದ್ಯೋಗಾಕಾಂಕ್ಷೆಯಿಂದ ದೂರವಿರಲು ಸಾಮಾಜಿಕ–ಸಾಂಸ್ಕೃತಿಕ ಕಾರಣಗಳು ಹಲವಾರಿವೆ. ವಿಶೇಷವಾಗಿ ವಿವಾಹಿತರು, ಸುರಕ್ಷಿತ ಶಿಶು ಪಾಲನಾ ವ್ಯವಸ್ಥೆ ಹಾಗೂ ಅನುಕೂಲಕರ ಸಾರ್ವಜನಿಕ ಸಾರಿಗೆ ಸೌಕರ್ಯಗಳಿಂದ ವಂಚಿತರಾದವರು, ಮಕ್ಕಳ ಪಾಲನೆ–ಪೋಷಣೆ ಮತ್ತು ಗೃಹ ನಿರ್ವಹಣೆಯ ಜವಾಬ್ದಾರಿಗಳನ್ನು ಏಕಾಂಗಿಯಾಗಿ ಹೊರಬೇಕಾದ ಸ್ಥಿತಿಯಲ್ಲಿರುವ ಅನೇಕ ಮಹಿಳೆಯರು ಉದ್ಯೋಗಾವಕಾಶಗಳು ಇದ್ದರೂ ಅವುಗಳನ್ನು ಬಳಸಿಕೊಳ್ಳಲಾಗುವುದಿಲ್ಲ. ನಗರ ಮತ್ತು ಗ್ರಾಮೀಣ ಪ್ರದೇಶಗಳೆರಡರಲ್ಲೂ ಮಹಿಳೆಯರು ಮಾಡುತಿದ್ದ ಅನೇಕ ಕೆಲಸಗಳಿಗೆ, ಈಗ ಪುರುಷರನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ. ಮನೆಯಿಂದಲೇ ಮಾಡುವ ಕೆಲಸದ ಅನುಕೂಲಗಳನ್ನು ಕಂಡುಕೊಂಡ ಅನೇಕ ಉದ್ಯಮಗಳು, ಮಹಿಳೆಯರ ಕೆಲಸದ ಅವಧಿಯನ್ನು ಹೆಚ್ಚಿಸುತ್ತಿವೆ, ಹಾಗೆ ಮಾಡಲು ಒಪ್ಪದಿದ್ದವರನ್ನು ಕೆಲಸದಿಂದ ಹೊರಗೆ ಕಳುಹಿಸುತ್ತಿವೆ.

ಮಹಿಳೆಯರ ದ್ವಿ–ಹೊರೆ ಹಾಗೂ ಅದು ತರುವ ದೈಹಿಕ–ಮಾನಸಿಕ ಒತ್ತಡಗಳು ಅನೇಕ ಮಹಿಳೆಯರನ್ನು ಉದ್ಯೋಗ ಮಾರುಕಟ್ಟೆಯಿಂದ ಹೊರತಳ್ಳುತ್ತಿವೆ. ನಮ್ಮ ಆರ್ಥಿಕ ವ್ಯವಸ್ಥೆಯ ದ್ವಂದ ನಿಲುವುಗಳು ಎಷ್ಟು ಪ್ರಖರವಾಗಿವೆ ಎಂದರೆ ಕೋವಿಡ್ ಪರಾಕಾಷ್ಠೆಯಲ್ಲಿದ್ದಾಗ ತಮ್ಮ ಜೀವದ ಹಂಗು ತೊರೆದು ಸೇವೆ ಮಾಡಿದ ಅನೇಕ ಮಹಿಳೆಯರು ಇಂದು ಕೆಲಸವನ್ನು ಕಳೆದುಕೊಂಡು ಅಂಚಿಗೆ ತಳ್ಳಲ್ಪಟ್ಟಿರುವುದು.

ನಮ್ಮ ದೇಶದ ಆರ್ಥಿಕ ಕ್ಷೇತ್ರದಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸಿ ಅವರಿಗೆ ಸ್ವಾವಲಂಬನೆಯ ಬದುಕನ್ನು ಕಟ್ಟಿಕೊಡಬೇಕಾದರೆ ಲಿಂಗ ಸೂಕ್ಷ್ಮ ಕಾರ್ಮಿಕ ಕಾಯಿದೆಗಳು ರೂಪಿತವಾಗ ಬೇಕು, ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ವಿಶೇಷವಾಗಿ ಗ್ರಾಮೀಣ ಹಾಗೂ ಅಂಚಿನಲ್ಲಿರುವ ವರ್ಗಗಳ ಮಹಿಳೆಯರಿಗೆ ನೀಡಬೇಕು ಹಾಗೂ ದೇಶದ ಉದ್ಯೋಗ ನಕ್ಷೆಯಿಂದ ಕಣ್ಮರೆಯಾಗಿರುವ ಮಹಿಳೆಯರನ್ನು ಹುಡುಕಿ, ಅವರನ್ನು ಮತ್ತೆ ಅದರಲ್ಲಿ ಒಳಗೊಳ್ಳುವ ಪ್ರಾಮಾಣಿಕ ಪ್ರಯತ್ನ ಗ್ರಾಮ ಪಂಚಾಯತಿಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ಆಗಬೇಕಿದೆ.

ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿಗೆ ಆದ್ಯತೆ: ಸಿಎಂ

ಕರ್ನಾಟಕ ವೈವಿಧ್ಯಮಯ ನಿಸರ್ಗ ಸಂಪತ್ತಿನ ರಮ್ಯ ತಾಣ; ಬಣ್ಣನೆ



ಬೆಂಗಳೂರು, ಮೇ 4(ಕೆಎಂಶಿ)– ರಾಜ್ಯದ ಪ್ರವಾಸೋದ್ಯಮವನ್ನು ದೊಡ್ಡ ಪ್ರಮಾಣದಲ್ಲಿ ಅಭಿವೃದ್ಧಿಗೊಳಿಸಿ ಕರ್ನಾಟಕದ ಪ್ರವಾಸೋದ್ಯಮ ನಕ್ಷೆಯನ್ನು ಸಂಪೂರ್ಣವಾಗಿ ಬದಲಾಯಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಕರ್ನಾಟಕ ದೇವರ ಸೃಷ್ಟಿಯ ಅದ್ಭುತಗಳ ನಾಡು. ಹತ್ತು ಆಗ್ರೋ ವಲಯಗಳಿವೆ. ಈ ರೀತಿಯ ಹವಾಮಾನ, ವೈವಿಧ್ಯಮಯ ಸಂಪತ್ತು ಎಲ್ಲಿ ಇದೆಯೋ ಆ ಸ್ಥಳ ನಿಸರ್ಗದ ರಮ್ಯ ತಾಣವಾಗುತ್ತದೆ.

ಇಲ್ಲಿನ ನೀರು ಹಾಗೂ ಮಣ್ಣಿನ ಗುಣ ವಿಶಿಷ್ಟವಾಗಿದೆ. 330 ಕಿಮೀ ಕರಾವಳಿ, ಅದಕ್ಕೆ ಹೊಂದಿಕೊಂಡಿರುವ ಪಶ್ಚಿಮ ಘಟ್ಟ, ಪಶ್ಚಿಮಘಟ್ಟಗಳಲ್ಲಿ ಕೈಲಾಸ ಎಂಬ ಕಲ್ಪನೆಯ ಎಲ್ಲಾ ಗುಣ ಲಕ್ಷಣಗಳು ಅಲ್ಲಿವೆ ಎಂದರು. ಅತ್ಯುತ್ತಮ ಬಯಲುಸೀಮೆ, ಅದಕ್ಕೆ ಹೊಂದಿಕೊಂಡಿರುವಂತೆ ನಮ್ಮ ನದಿಗಳು. ಎಲ್ಲಾ ನದಿಗಳು ಪಶ್ಚಿಮದಲ್ಲಿ ಹುಟ್ಟಿ, ಪೂರ್ವಕ್ಕೆ ಹರಿಯುತ್ತವೆ. ರಾಜ್ಯವನ್ನು ದಾಟಿ ಬಂಗಾಲ ಕೊಲ್ಲಿಗೆ ಸೇರುತ್ತವೆ.

ಎಲ್ಲಿ ನದಿಗಳು ಹರಿಯುತ್ತವೆ ಅಲ್ಲಿ ಸಂಸ್ಕೃತಿ ಹಾಗೂ ನಾಗರಿಕತೆ ಬೆಳೆಯುತ್ತವೆ. ನಮ್ಮನ್ನಾಳಿದ ರಾಷ್ಟ್ರಕೂಟ, ಹೊಯ್ಸಳರಿಂದ ವಿಜಯನಗರ ಸಾಮ್ರಾಜ್ಯದವರೆಗೆ ಶಿಲಾಶಾಸನಗಳನ್ನು ಬಿಟ್ಟುಹೋಗಿದ್ದಾರೆ.

ಆಳುವುದು ಬೇರೆ ಆಡಳಿತ ಮಾಡುವುದು ಬೇರೆ ಎನ್ನುವ ತತ್ವವನ್ನು ಶಿಲಾಶಾಸನದಲ್ಲಿ ತಿಳಿಸಿದ್ದಾರೆ. ಇವುಗಳನ್ನು ಹುಡುಕಿ ಜನರ ಮುಂದೆ ಇಡುವ ಕೆಲಸಗಳಾಗಿದ್ದರೂ ಇನ್ನೂ ಪರಿಣಾಮಕಾರಿಯಾಗಿ ಆಗಬೇಕು ಎಂದರು. ತಮ್ಮ ಸ್ವಕ್ಷೇತ್ರ ಶಿಗ್ಗಾಂವಿಯಲ್ಲಿ ಪ್ರವಾಸಿ ತಾಣಗಳನ್ನು ಗುರುತಿಸಿ, ಬ್ರಾಂಡಿಂಗ್ ಹಾಗೂ ಮಾರ್ಕೆಟಿಂಗ್ ಮಾಡಿ ಅವುಗಳ ಫೋಟೋಗಳ ಕ್ಯಾಲೆಂಡರ್ ಮಾಡಿ ಎಲ್ಲಾ ಹೆದ್ದಾರಿಗಳಲ್ಲಿ ಹಾಕಿಸಲಾಗಿತ್ತು. ಅದಕ್ಕೆ ಅದ್ಭುತವಾದ ಪ್ರತಿಕ್ರಿಯೆ ದೊರೆತಿತ್ತು. ಕನಕದಾಸರ ಅರಮನೆಯಲ್ಲಿ ಅವರ ಜೀವನಚರಿತ್ರೆಯನ್ನು ಬಿಂಬಿಸುವ ಸ್ಟುಡಿಯೋ ಮುಂತಾದವುಗಳನ್ನು ನಿರ್ಮಿಸಲಾಗಿದೆ. ದೇಶದಲ್ಲಿ ಮೂರನೇ ಅತಿ ದೊಡ್ಡ ನವಿಲು ಉದ್ಯಾನವನ್ನು ನಿರ್ಮಿಸಲಾಗಿದೆ ಎಂದು ತಿಳಿಸಿದರು. ಈ ರೀತಿ ತಾಲೂಕು ಸರ್ಕಿಟ್ ಅಭಿವೃದ್ಧಿಗೊಳಿಸ ಲಾಗಿತ್ತು ಎಂದು ಮುಖ್ಯಮಂತ್ರಿಗಳು ಸ್ಮರಿಸಿದರು.

ಕರ್ನಾಟಕದಲ್ಲಿ ಪ್ರವಾಸೋದ್ಯಮಕ್ಕೆ ವಿಫುಲ ಅವಕಾಶಗಳಿವೆ. ಇದೊಂದು ಅತ್ಯುತ್ತಮ ಅಭಿಯಾನವಾಗಿದೆ. ಪ್ರವಾಸೀ ತಾಣಗಳ ಹುಡುಕಾಟವೇ ಒಂದು ಚಿಮ್ಮುಹಲಗೆ. ಅಲ್ಲಿ ರತ್ನಗಳೇ ಸಿಗಬಹುದು. ಇತಿಹಾಸ ಮರುಸೃಷ್ಟಿಸುವ ಅವಕಾಶವಿದೆ.

ನಿರೀಕ್ಷೆ ಮೀರಿ ಪ್ರತಿಕ್ರಿಯೆ ದೊರಕುವ ವಿಶ್ವಾಸವಿದೆ. ಬೀದರ್, ಕಲಬುರ್ಗಿ, ಬಾದಾಮಿ, ಲಕ್ಕುಂಡಿ, ಮುಂತಾದವುಗಳನ್ನು ಉತ್ತಮವಾಗಿ ನಿರ್ವಹಿಸಿದರೂ ಪ್ರವಾಸಿಗರನ್ನು ಆಕರ್ಷಿಸ ಬಹುದು. ಹಂಪಿ, ಮೈಸೂರು ಸರ್ಕಿಟ್‌ಗಳನ್ನು ಸೃಜಿಸಲಾಗಿದೆ. ನಂದಿ ಬೆಟ್ಟದಲ್ಲಿ ರೋಪ್ ವೇ, ಹಾಗೂ ಜೋಗ್ ಜಲಪಾತ ದಲ್ಲಿಯೂ ರೇಪ್ ವೇಗೆ ಚಾಲನೆ ದೊರೆತಿದೆ. ಯಾಣ, ಮುಳ್ಳಯ್ಯನಗಿರಿ, ಚಾಮುಂಡಿಬೆಟ್ಟದಲ್ಲಿ ರೋಪ್ ವೇ ನಿರ್ಮಾಣ, ಯಾತ್ರಿಕರು ಹೊರರಾಜ್ಯಗಳಿಗೆ ಭೇಟಿ ನೀಡುತ್ತಾರೆ ಅಲ್ಲಿ ರಾಜ್ಯದ ಸೌಕರ್ಯಗಳು, ಅಂಜನಾದ್ರಿ ಬೆಟ್ಟದಲ್ಲಿ ರೋಪ್ ವೇ ಹಾಗೂ ಸುತ್ತಮುತ್ತಲಿನ ಸ್ಥಳಗಳ ಅಭಿವೃದ್ಧಿಗಾಗಿ ಈ ವರ್ಷ 100 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ.

ನಂದಿಬೆಟ್ಟ, ಜೋಗ ಜಲಪಾತಕ್ಕೆ ಸಿಆರ್‌ಜೆಡ್ ಮಾರ್ಗಸೂಚಿಗಳನ್ನು ಪಡೆದುಕೊಂಡು ಕರಾವಳಿ ಭಾಗವನ್ನೂ ಒಳಗೊಂಡಂತೆ ಅಭಿವೃದ್ಧಿಗೊಳಿಸಲಾಗುವುದು ಎಂದರು. ಕರ್ನಾಟಕದ ಏಳು ಅದ್ಭುತಗಳು ಅಭಿಯಾನ ರಾಜ್ಯದ ಪ್ರವಾಸೋದ್ಯಮ ಬ್ರಾಂಡಿಂಗ್‌ಗೆ ಮುನ್ನುಡಿ ಬರೆದಿದೆ. ರಮೇಶ್ ಅರವಿಂದ್ ಅತ್ಯಂತ ಸೂಕ್ತ ರಾಯಭಾರಿಯಾಗಿದ್ದಾರೆ. ಅಭಿಯಾನದ ಯಶಸ್ಸು ಕರ್ನಾಟಕದ ಹಾಗೂ ರಾಜ್ಯದ ಪ್ರವಾಸೋದ್ಯಮದ ಯಶಸ್ಸು ಆಗಲಿದೆ.

ಕನ್ನಡನಾಡು ನೈಸರ್ಗಿಕವಾಗಿ ಅದ್ಭುತವಾಗಿರುವ ನಾಡು. ಅಭಿಯಾನದ ಮೂಲಕ ಸರ್ಕಾರದ ಪ್ರವಾಸೋದ್ಯಮ ಅಭಿವೃದ್ಧಿಗೆ ಮುನ್ನುಡಿ ಬರೆಯಲಾಗಿದೆ. ಇಲ್ಲಿ ಏಳು ಅದ್ಭುತಗಳನ್ನು ಹುಡುಕುವ ಅಭಿಯಾನ ಯಶಸ್ವಿಯಾಗಲಿ ಎಂದರು. ಪ್ರವಾಸೋದ್ಯಮ ಬೆಳವಣಿಗೆಗೆ ಹಂಪಿಯವರೇ ಆದ ಸಚಿವ ಆನಂದ್ ಸಿಂಗ್ ಅವರು ಹೆಚ್ಚಿನ ಒತ್ತು ನೀಡುತ್ತಿದ್ದಾರೆ ಎಂದರು.

---

28 ವರ್ಷಗಳ ನಂತರ ಹುಟ್ಟೂರಿಗೆ ಯೋಗಿ ಆದಿತ್ಯನಾಥ್ ಭೇಟಿ: ತಾಯಿಯ ಆಶೀರ್ವಾದ ಪಡೆದ ಯುಪಿ ಸಿಎಂ

ಲಕ್ನೋ, ಮೇ 4– ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಸುಮಾರು 28 ವರ್ಷಗಳ ನಂತರ ಹುಟ್ಟೂರಿನಲ್ಲಿ ತಮ್ಮ ತಾಯಿಯನ್ನು ಭೇಟಿ ಮಾಡಿ ಆಶೀರ್ವಾದ ಪಡೆದಿದ್ದಾರೆ. ಖಾಸಗಿ ಕಾರ್ಯಕ್ರಮದ ಮೇಲೆ ಬಹಳ ವರ್ಷಗಳ ನಂತರ ತಮ್ಮ ಹುಟ್ಟೂರಾದ ಉತ್ತರಾಖಂಡದ ಪೌರಿಗೆ ತೆರಳಿರುವ ಯೋಗಿ, ತಮ್ಮ ತಾಯಿ ಸಾವಿತ್ರಾ ದೇವಿ(85) ಅವರನ್ನು ಭೇಟಿ ಮಾಡಿ ಅವರ ಕಾಲಿಗೆ ನಮಸ್ಕರಿಸಿದ್ದಾರೆ.




ತಾಯಿಗೆ ನಮಸ್ಕಾರ ಮಾಡುತ್ತಿರುವ ಫೋಟೋವನ್ನು ಟ್ವೀಟರ್‌ನಲ್ಲಿ ಸ್ವತಃ ಯೋಗಿ ಅವರು ಹಂಚಿಕೊಂಡಿದ್ದಾರೆ. 28 ವರ್ಷಗಳಿಂದ ಯೋಗಿ ತಮ್ಮ ಹುಟ್ಟೂರಿಗೆ ಭೇಟಿ ನೀಡಿರಲಿಲ್ಲ ಎಂದು ಹೇಳಲಾಗಿದ. ಅವರ ತಾಯಿ ಮಗನ ತಲೆಯ ಮೇಲೆ ಕೈಯಿಟ್ಟು ಆಶೀರ್ವಾದ ಮಾಡಿದ್ದಾರೆ.

ಫೋಟೋಗೆ 'ಮಾ' ಎಂದು ಶೀರ್ಷಿಕೆ ನೀಡಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ತಮ್ಮ ತಾಯಿ ಸಾವಿತ್ರಾ ದೇವಿ ಅವರೊಂದಿಗಿನ ಚಿತ್ರವನ್ನು ಟ್ವಿಟರ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಸಿಎಂ ಯೋಗಿ ಆದಿತ್ಯನಾಥ್ ಅವರು ಪ್ರಸ್ತುತ ಉತ್ತರಾಖಂಡ್‌ನ ತಮ್ಮ ತವರೂರು ಪೌರಿಯಲ್ಲಿದ್ದಾರೆ. ಅವರು ಉತ್ತರಪ್ರದೇಶ ಮುಖ್ಯಮಂತ್ರಿಯಾದ ನಂತರ ಮೊದಲ ಬಾರಿಗೆ ತಮ್ಮ ತಾಯಿಯನ್ನು ಭೇಟಿಯಾಗುತ್ತಿದ್ದಾರೆ. ಬುಧವಾರ ನಡೆಯಲಿರುವ ತಮ್ಮ ಸೋದರಳಿಯನ ಕೇಶ ಮುಂಡನ ಸಮಾರಂಭಕ್ಕಾಗಿ ಅವರು ತಮ್ಮ ಪೂರ್ವಜರ ಗ್ರಾಮಕ್ಕೆ ಭೇಟಿ ನೀಡುತ್ತಿದ್ದಾರೆ.

28 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಉತ್ತರಾಖಂಡ್‌ಗೆ ಕುಟುಂಬ ಸಮಾರಂಭದಲ್ಲಿ ಭಾಗವಹಿಸಲು ತೆರಳಿದ್ದಾರೆ ಎಂದು ವರದಿಯಾಗಿದೆ. ಕೊರೊನಾ ಸಾಂಕ್ರಾಮಿಕ ರೋಗದ ಕಾರಣದಿಂದ ಯೋಗಿ ಆದಿತ್ಯನಾಥ್ ಅವರು ಏಪ್ರಿಲ್ 2020 ರಲ್ಲಿ ಹರಿದ್ವಾರದಲ್ಲಿ ತನ್ನ ತಂದೆಯ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ಸಾಧ್ಯವಾಗಿರಲಿಲ್ಲ.

ರಾಜ್ಯ ಒಕ್ಕಲಿಗರ ಸಂಘದ ಕಾರ್ಯಾಧ್ಯಕ್ಷರಾಗಿ ಸಿ.ಜೆ. ಗಂಗಾಧರ್



ಬೆಂಗಳೂರು, ಮೇ 4– ರಾಜ್ಯ ಒಕ್ಕಲಿಗರ ಸಂಘದ ಕಾರ್ಯಾಧ್ಯಕ್ಷರನ್ನಾಗಿ ಸಿ.ಜೆ. ಗಂಗಾಧರ್ ಅವರನ್ನು ಸಂಘದ ಅಧ್ಯಕ್ಷ ಸಿ.ಎನ್. ಬಾಲಕೃಷ್ಣ ನೇಮಕ ಮಾಡಿದ್ದಾರೆ. ಇತ್ತೀಚೆಗೆ ನಡೆದ ರಾಜ್ಯ ಒಕ್ಕಲಿಗರ ಸಂಘದ ಚುನಾವಣೆಯಲ್ಲಿ ಗಂಗಾಧರ್ ಅವರು ಮೈಸೂರು ಭಾಗದಿಂದ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಆಯ್ಕೆಯಾಗಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ
0821–
2496522/23

WANTED
*Web Developer 2 to 3 years of Exp (php, Codeignetor, Html, Css, Js,Jquery & React Js),
*Digital Marketing Executive 1 to 2 years of Exp (Seo, Google Adwords, Backlinks)
* Academic Counsellor / Telesales 1 to 2 years Exp (Sales),
*Graphic Designer / Image Editor (Fresher)
Contact No. 7406603888
Email Id hr@adyaitsolutions.in
Interview Time : Mon - Sat (10.30 AM to 5 PM)

ಮನೆ ಬಾಡಿಗೆಗೆ ಇದೆ
ವಿಜಯನಗರ 2ನೇ ಹಂತದಲ್ಲಿರುವ 23ನೇ ಮೇನ್, 22ನೇ ಕ್ರಾಸ್‌ನಲ್ಲಿರುವ ಮನೆ ನಂಬರ್ 2974E ನ 2 ಬೆಡ್‌ರೂಮಿನ ಎಲ್ಲಾ ಸೌಕರ್ಯವಿರುವ 1ನೇ ಅಂತಸ್ತಿನ ಮನೆ ಬಾಡಿಗೆಗೆ ದೊರೆಯುತ್ತದೆ. ಸಂಪರ್ಕಿಸಿ:
9448108048

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

Rapvee Online Store
Work From Home
ಮನೆಯಿಂದಲೇ ತಿಂಗಳಿಗೆ 5000–20000/– ವರೆಗೆ ಸಂಪಾದಿಸಿ.
ಮಹಿಳೆಯರಿಗೆ ಮೊದಲ ಆದ್ಯತೆ
6363724645
(WhatsApp)

S.K.CONSTRUCTION
ಕನಸು ನಿಮ್ಮದು ನನಸು ನಮ್ಮದು ಮನೆ ಕಟ್ಟಲು ಕಾಯಬೇಡಿ, Construction Loan ಮಾಡಿಸಿ Approval Plan, Working Plan, 3D Elevation ಸಹಿತ ಅತಿ ಉತ್ತಮ ಗುಣಮಟ್ಟದಲ್ಲಿ ಮಾಡಿಕೊಡುತ್ತೇವೆ.
9620528490

WANTED
ENGINEER / CIVIL DIPLOMA
for layout project.
Pursuing is also ok.
Need candidate with the right attitude
Contact:
9342182142 / 9900977993

AFFOTDABL HOME LOAN
ಮುಡಾ, ಎ ಖಾತೆ, ನಗರ ಸಭಾ, ಪಂಚಾಯಿತಿ ಖಾತೆ 9 & 11ಎ ಖಾತೆ
ಮನೆ ತೆಗೆದುಕೊಳ್ಳುವುದಕ್ಕೆ, ಕಟ್ಟುವುದಕ್ಕೆ, ಬ್ಯಾಲೆನ್ಸ್ ಟ್ರಾನ್ಸ್‌ಫರ್, ಪ್ಲಾಟ್ ಪರ್ಚೆಸ್, ಎಲ್ಲಾ ಸರ್ಕಾರದ ಸೌಲಭ್ಯದೊಂದಿಗೆ 100% ಸಾಲ. ಯಾವುದೇ ಆದಾಯದ ಕಡತಗಳಿಲ್ಲದೆ ಕೊಡಲಾಗುವುದು.
ಪ್ರಧಾನಮಂತ್ರಿ ಆವಾಸ್ ಯೋಜನ ಅಡಿಯಲ್ಲಿ ರೂ.2,67,000 ಸಬ್ಸಿಡಿ ಕೊಡಲಾಗುವುದು.
ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ.
Ph:9448375325

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದ TVS ಫ್ಯಾಕ್ಟರಿ ಸುತ್ತಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮೇಲ್ಪಟ್ಟು, ಸಂಬಳ: 14,500/– 8 Hours, 26 days, ವಯೋಮಿತಿ 45 ವರ್ಷದೊಳಗೆ, ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9620777819 / 9538567819

ಬೇಕಾಗಿದ್ದಾರೆ
ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಪ್ರತಿಷ್ಠಿತ ಫ್ಯಾಕ್ಟರಿಗಳಿಗೆ ಯುವಕರು ಬೇಕಾಗಿದ್ದಾರೆ. ವಯಸ್ಸು: 18 ರಿಂದ 30 ವರ್ಷ, ವಿದ್ಯಾರ್ಹತೆ: 7 ರಿಂದ PUC ಮತ್ತು ITI, ಉಚಿತ, ಊಟ ಮತ್ತು ರಿಯಾಯಿತಿ ದರದಲ್ಲಿ ವಸತಿ ನೀಡಲಾಗುವುದು. ESI ಮತ್ತು PF ಸೌಲಭ್ಯವಿರುತ್ತದೆ.
(ಯಾವುದೇ ಶುಲ್ಕವಿರುವುದಿಲ್ಲ)
8277047300

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

2 Bed Room ಕಾರ್ನರ್ ಮನೆ ಮಾರಾಟಕ್ಕಿದೆ
ನಂ 331, KRS Road, (ಕುಸುಮ ಚಂದ್ರಶೇಖರ್ ಛತ್ರದ ಎದುರು) ಚಾಮುಂಡೇಶ್ವರಿ ಲೇಔಟ್, ನಾರ್ತ್ ಫೇಸ್, ಗ್ರೌಂಡ್ ಫ್ಲೋರ್ ಮತ್ತು First Floor (21x40)
9686995959
8660754874

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

SRI VINAYAKA CENTRAL SCHOOL, TARIPURA
WANTED TEACHERS
Trained & experienced graduate teachers required for all subjects, including computer, Arts & Craft & NST for Primary and High School. Free transport facility available. Hostel facility available from 7th to 10th Std. for boys.
8971577685 / 9980631121
Send your resume through SMS

ಬಟ್ಟಲು ಸಾಂಬ್ರಾಣಿ ಉದ್ಯೋಗ
ಉತ್ತಮ ಗುಣಮಟ್ಟದ ಬಟ್ಟಲು ಸಾಂಬ್ರಾಣಿಯನ್ನು ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 1000 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196
9880548596

ಕೆಲಸಕ್ಕೆ ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಹೊಲಿಗೆ ಗೊತ್ತಿರುವವರಿಗೆ ಆದ್ಯತೆ. ಮೈಸೂರಿನಿಂದ ಹೊರಗಿರುವವರಿಗೆ ಉಳಿದುಕೊಳ್ಳುವ ವ್ಯವಸ್ಥೆ ಇದೆ
9880058866

ಭೋಗ್ಯಕ್ಕಿದೆ
1) 33x25 2 Bed Room (BHK) ಕುಂಬಾರ ಕೊಪ್ಪಲು.
2) ಶ್ರೀ ಅಂಕಮ್ಮನವರ ದೇವಸ್ಥಾನದ ಹತ್ತಿರ 20x15 1 Bed Room (BHK)
3) ಮೇದರ್ ಬ್ಲಾಕ್ 3 Bed Room (BHK) 35x50
9611135796
7619627710

ಆಲ್ಟ್ರೇಷನ್ ಕೆಲಸ ಮಾಡಿಕೊಡಲಾಗುತ್ತದೆ
ಹಳೇಮನೆ ಕೆಲಸ ಮತ್ತು ಬಣ್ಣದ ಕೆಲಸ, ಗಾರೆ ರಿಪೇರಿ ಮತ್ತು ತಾರಸಿ ಸೋರುವಿಕೆ ಸರಿಪಡಿಸಿಕೊಡಲಾಗುತ್ತದೆ.
9880813586 / 6360884930

HOUSE FOR LEASE
Independent 4 BHK House with Car Parking Facilities is for Lease @ Bannimantap Extension, For Immediate Occupy, Contact -
7406349666



Solar Water Heater
SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

Shree Hypnotherapy Clinic
Kamakshi Hospital Road, Mysuru
WELCOME TO OUR CLINIC, TO BALANCE YOUR BODY, MIND AND SOUL
Fear & Anxiety, Past Life Regression
Headach, Chronic Pain, Body Pians,
Schizophrenia, Loss in Business,
Paranormal Issues, Marriage Problems,
Irregular Periods, O.C.D, Depression.
10:00 am To 02:00 pm & 04:00 pm To08:00 pm
8762443326

ಸುವರ್ಣ ಯಾತ್ರ
01/06/22 ಕಾಶಿ ಪ್ರವಾಸ 7 ದಿನಗಳು ಕಾಶಿ, ಗಯಾ ಬುದ್ಧಗಯಾ, ಪ್ರಯಾಗರಾಜ್, ಜಾರ್ಖಾಂಡ್, ಅಯೋಧ್ಯೆ,
11/06/22 ದೆಹಲಿ ಕೇದಾರನಾಥ್, ಬದ್ರಿನಾಥ್ ಯಮುನೋತ್ರಿ, ಗಂಗೋತ್ರಿ 13 ದಿನಗಳು
28/05/22 ಪುರಿ ಜಗನ್ನಾಥ ಹಾಗೂ ವಿಶಾಖಪಟ್ಟಣಂ ಪ್ರವಾಸ 9 ದಿನಗಳು
9019462508
9008381022

ತಕ್ಷಣ ಬೇಕಾಗಿದ್ದಾರೆ
ಯಾದವಗಿರಿ, ಒಂಟಿಕೊಪ್ಪಲ್, K G Koppal ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮೇಲ್ಪಟ್ಟು, ಸಂಬಳ: 14,500/–, ESI, PF ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9880727819 / 9620667819

ಗಿರವಿ ಚಿನ್ನಾಭರಣ ಖರೀದಿ
1 ಗ್ರಾಂ ಚಿನ್ನಕ್ಕೆ 5200
ಪ್ಯೂರಿಟಿಯ ಗುಣಮಟ್ಟಕ್ಕೆ ಅನುಗುಣವಾಗಿ ಕೊಡಲಾಗುತ್ತದೆ. ನೀವು ಯಾವುದೇ ಬ್ಯಾಂಕ್ ಮತ್ತು ಫೈನಾನ್ಸ್‌ನಲ್ಲಿ ಗಿರವಿಯಿಟ್ಟು ಬಿಡಿಸಿ ಕೊಳ್ಳಲಾಗದ ಚಿನ್ನದ ಆಭರಣಗಳನ್ನು ಬಿಡಿಸಿ ಮಾರುಕಟ್ಟೆಗಿಂತ ಅಧಿಕ ಬೆಲೆಗೆ ತೆಗೆದುಕೊಂಡು ಉಳಿದ ಹಣವನ್ನು ತಕ್ಷಣಕೊಡುತ್ತೇವೆ. ನಿಮಗೆ ಮತ್ತೆ ಚಿನ್ನಾಭರಣ ಬೇಕಾದಲ್ಲಿ ಕೂಲಿ ವೇಸ್ಟೇಜ್ ಇಲ್ಲದೆ ಮಾಡಿಕೊಡಲಾಗುತ್ತದೆ. ಕೂಡಲೇ (T&C) ಸಂಪರ್ಕಿಸಿ– S.M ಗೋಲ್ಡ್ ಫೈನಾನ್ಸ್
8050518881

Gem Selections
(A Part of Khanna Gems Group)
100% Natural Govt. Lab Certified Gemstones
ಶೇಕಡಾ 100 ರಷ್ಟು ನೈಸರ್ಗಿಕ ಸರ್ಕಾರಿ ಪ್ರಯೋಗಾಲಯದಿಂದ ಪ್ರಮಾಣಿಕೃತ ರತ್ನದ ಹರಳುಗಳು ದೊರೆಯುತ್ತವೆ.
HIG-3, Near Akshaya Bhandar, New Kantharaju Urs Rd. Kuvempu Nagar, Mysuru, Karnataka-570023
8152066999

ವಿವಾಹ ವೇದಿಕೆ
ಒಕ್ಕಲಿಗ ಗೌಡರು ವಧು – ವರರಿಗಾಗಿ ಸಂಪರ್ಕಿಸಿ.
ವಿಧವೆ – ವಿಧುರರು ಕೂಡ ಸಂಪರ್ಕಿಸಬಹುದು
8660870553

MOBILE ರಿಪೇರಿ ಟ್ರೈನಿಂಗ್
18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿರುವ ಏಕೈಕ ಸಂಸ್ಥೆಯಲ್ಲಿ ಶೀಘ್ರದಲ್ಲಿ ಹೊಸ ಬ್ಯಾಚ್ ಪ್ರಾರಂಭ. ಯಾವುದೇ ವಿದ್ಯಾರ್ಹತೆ ಹಾಗೂ ವಯೋಮಿತಿಯ ಅಗತ್ಯವಿಲ್ಲ. ಕೂಡಲೇ ಸಂಪರ್ಕಿಸಿ:
SMM Institute,
ಶ್ರೀ ವೀರಭದ್ರೇಶ್ವರಸ್ವಾಮಿ ದೇವಸ್ಥಾನದ ಎದುರು, ದಳವಾಯಿ ಶಾಲೆಯ ರಸ್ತೆ, ಕೆ.ಆರ್.ಮೊಹಲ್ಲಾ ಮೈಸೂರು.
Mob.: 9986926101

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

WANTED
SECURITY FIELD OFFICER (MALE) CANDIDATE
Experience should have 2-3 Years Fresher's & Ex-Serviceman can also apply with good communication Skill. Interest candidates send your CV to E-mail: nimishpvtltd@gmail.com
Contact No.: 9513999755

ಬಾಡಿಗೆಗಿದೆ
ವಿದ್ಯಾವರ್ಧಕ ಇಂಜಿನಿಯರ್ ಕಾಲೇಜು, ವಿಜಯನಗರ 2nd Stage, ಎದುರು ರಸ್ತೆ High Tensin ರೋಡ್ ಮತ್ತು 10ನೇ ಮೇನ್, ಮಹದೇಶ್ವರ ಬಡಾವಣೆ, ಮೂಲೆ ನಿವೇಶನ, 621 ರಲ್ಲಿ ಕಟ್ಟಿರುವ ಶ್ರೀರಂಗ ಸಂಕೀರ್ಣದಲ್ಲಿ 10x20 ಅಳತೆಯುಳ್ಳ ಮಳಿಗೆ ಖಾಲಿ ಇದ್ದು ಬಾಡಿಗೆಗೆ ಸಿಗುತ್ತದೆ.
6361166487

ಶ್ರೀ ವಿನಾಯಕ ಮಲ್ಟಿ ಸರ್ವೀಸ್
ಕನ್ಸ್‌ಟ್ರಕ್ಷನ್ ವರ್ಕ್, ಡೆಮಾಲಿಸನ್ ವರ್ಕ್, ಗಾರೇ ಕೆಲಸ, ಸೋಲಾರ್ ಸರ್ವಿಸ್ & ಎಕ್ಸ್‌ಚೇಂಜ್, ಪ್ಲಂಬಿಂಗ್ ವರ್ಕ್, ಇಂಟೀರಿಯರ್ ವರ್ಕ್, ಅಲ್ಯುಮಿನಿಯ ಪಾರ್ಟಿಸನ್‌ಗಾಗಿ ಸಂಪರ್ಕಿಸಿ.
8217368859

ಕರ್ನಾಟಕದಾದ್ಯಂತ ತಕ್ಷಣ ಬೇಕಾಗಿದ್ದಾರೆ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) MNC ಕಂಪನಿಗಳಿಗೆ 4th, 7th, SSLC, PUC, ITI, any Degree Pass / Fail ಯುವಕ, ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ 15,000/– ರಿಂದ 46,000/–
7259865221 / 8867373902

ಮನೆ ಭೋಗ್ಯಕ್ಕೆ ಇದೆ
ಮನೆ ನಂ.4392 2BHK 4ನೇ ಕ್ರಾಸ್, 2ನೇ ಹಂತ, ಹಾಸನ ಬೇಕರಿ ಹತ್ತಿರ, ಕೆ.ಡಿ.ಸರ್ಕಲ್, ವಿಜಯನಗರ, ಮೈಸೂರು. ಸಂಪರ್ಕಿಸಿ.
8123941037

WANTED
* Service Manager
* Floor Incharge
* Technicians / Mechanics
For HINDUSTAN TRUCKS TATA MOTORS AURTHORISED COMMERCIAL VEHICLE SERVICE STATION
9945698822 / 9731563939

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ
7795560970

HOUSE FOR RENT
2 BHK, 1st Floor
Near Pramathi School, Kuvempunagar
For Vegetarians only
Mob: 8970150066

ಬೇಕಾಗಿದ್ದಾರೆ
1) ಲಲಿತಾದ್ರಿಪುರ, 2) ಅಗ್ರಹಾರ, 3) ಮಹದೇವಪುರ (ಶೂಟಿಂಗ್) ಮೇಲ್ಕಂಡ ಸ್ಥಳಗಳಿಗೆ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ಸಂಪರ್ಕಿಸಿ.
9242406261
9686422400

OUTHOUSE FOR RENT
at Saraswathipuram, Mysore, 14th Main
9739829644

ಸೈಟುಗಳು ಮತ್ತು ಮನೆ ಮಾರಾಟಕ್ಕಿದೆ
Bank loan available.
ಶ್ರೀರಾಂಪುರ ರಿಂಗ್ ರೋಡ್ ಹತ್ತಿರ, ಮೈಸೂರು
Mob: 8050345574

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

FOR HOME INTERIORS & KITCHENS
100% NEEM PLYWOOD & DOORS
@ DIRECT FACTORY RATES
Neem Platinum PLY 10yrs WARRANTY
Borer & Water Proof
Call: 9901291267 | 9845426862

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

Immediate Hiring in Mysore
Qualifications: SSLC, PUC, ITI,Diploma, Any Degree. Salary: 15,000-30,000
Age Limit: Below 35
Applicable for Male Candidates Only
Contact No. 9880151303

ಬೈಕ್ ರೈಡರ್ ಬೇಕಾಗಿದ್ದಾರೆ
ರಾಪಿಡೋ ಬೈಕ್ ರೈಡರ್ ಆಗಿ ಸೇರಿ ಹಾಗೂ ದಿನಕ್ಕೆ 1500/– ವರೆಗೂ ಸಂಪಾದಿಸಿ. ಅಗತ್ಯ ದಾಖಲೆಗಳು ಡಿ.ಎಲ್, ವಾಹನದ ದಾಖಲೆಗಳು ಮತ್ತು ಆಧಾರ್. ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ
04045209698

ಬಾಂಧವ್ಯ ಸೇವಾಶ್ರಮ
ಹಿರಿಯನಾಗರೀಕರು, ಹಾಸಿಗೆ ಪೀಡಿತರು, ಬಾಣಂತಿಯರ ಆರೈಕೆ ಮಾಡಲಾಗುವುದು ಸೇರಲು ಬಯಸುವವರು / ದಾನಿಗಳು ಸಂಪರ್ಕಿಸಿ
9620734669
8123480356

ವಾಸ್ತು ಪ್ರಕಾರ
ಹೊಸದಾಗಿ ಮನೆ ಮತ್ತು ಆಲ್ಟ್ರೇಷನ್ ಕೆಲಸ / ಕನ್‌ಸ್ಟ್ರಕ್ಷನ್ ಮಾಡಿಕೊಡಲಾಗುತ್ತದೆ.
ಒಂದು ಚದರಕ್ಕೆ 180000/–
*ಷರತ್ತು ಅನ್ವಯ
ಸ್ವಾಮಿ ಎಂ. ಸಿವಿಲ್ ಕಂಟ್ರಾಕ್ಟರ್
9945442361 / 9380885787

FOR SALE
Muda Approved
30X40 East Facing
Immediate Registration and Bank Loan Available
1.5 KM from Mysore University
Bogadi Main Road
Call: 98800 65122 / 77956 09173

ಬೇಕಾಗಿದ್ದಾರೆ
ತಮಿಳು ಮತ್ತು ಕನ್ನಡ ಮಾತನಾಡಲು ಬರುವ Telecaller ಮತ್ತು Executive ಬೇಕಾಗಿದ್ದಾರೆ.
ಸಂಬಳ - 20000/-
8884304444

ತಕ್ಷಣ ಬೇಕಾಗಿದ್ದಾರೆ
PART TIME /FULL TIME / HOME-BASED
E-CODE GAS SAFE

EDUCATION	WORK TIME	SALARY
SSLC,PUC ,Dip,Degree	4 HOURS	8000/-
	8 HOURS	16000/-

ಗ್ಯಾಸ್ ಸೇಫ್ ಬಗ್ಗೆ
ಮನೆಯಲ್ಲೇ ಕುಳಿತು ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ
Android ಸ್ಮಾರ್ಟ್ ಫೋನ್ ಹೊಂದಿರಬೇಕು
9986621226

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್‌ಗಳು & ಸೆಕ್ಯೂರಿಟಿ ಸೂಪರ್ ವೈಸರ್ ಬೇಕಾಗಿದ್ದಾರೆ. ವಯೋಮಿತಿ 45 ವರ್ಷ ಒಳಪಟ್ಟು, ವಿದ್ಯಾರ್ಹತೆ: ಎಸ್.ಎಸ್.ಎಲ್.ಸಿ/ಪಿ.ಯು.ಸಿ ಅಗತ್ಯ ವಿವರಗಳೊಂದಿಗೆ ಸಂಪರ್ಕಿಸಿ: # 380/ಎ, 2ನೇ ಮಹಡಿ, ಕೃಷ್ಣ ವಿಲಾಸ ರಸ್ತೆ, ಮೈಸೂರು. Contact:
9513089922 / 9513999755

ಭೋಗ್ಯಕ್ಕೆ ಇದೆ
119/1, 1ನೇ ಕ್ರಾಸ್, ರಾಮಾನುಜರಸ್ತೆ, ಖಿಲ್ಲೆ ಮೊಹಲ್ಲ, ಮೈಸೂರು. 1ನೇ ಮಹಡಿಯಲ್ಲಿರುವ ಒಂದು ರೂಂ ನ ಮನೆ ಭೋಗ್ಯಕ್ಕೆ ಇರುತ್ತದೆ. ಸಂಪರ್ಕಿಸ ಬೇಕಾದ ಸಂಖ್ಯೆ
9379769966

ಮನೆ ಬಾಡಿಗೆಗೆ
2 ಬೆಡ್ ರೂಂ, ಸೋಲಾರ್, ಗ್ರಾನೈಟ್ ಫ್ಲೋರಿಂಗ್, ನಾರಾಯಣ ಶಾಸ್ತ್ರಿ ರಸ್ತೆ, ಶಾಂತಲ ಟಾಕೀಸ್ ಹತ್ತಿರ, ಮೈಸೂರು.
9483901192

1 ಲಕ್ಷಕ್ಕೆ ತಿಂಗಳಿಗೆ 2000 ರೂ. ಬಡ್ಡಿ ಸೆಕ್ಯೂರಿಟಿಗೆ ಚಿನ್ನ ಕೊಡಲಾಗುವುದು
ಚಿನ್ನಾಭರಣದ ವ್ಯವಹಾರಕ್ಕಾಗಿ ಒಂದು ಲಕ್ಷಕ್ಕೆ ತಿಂಗಳಿಗೆ 2000 ರೂ. ಬಡ್ಡಿ ಕೊಡಲಾಗುವುದು. ಸೆಕ್ಯೂರಿಟಿಗೆ ಚಿನ್ನ ಕೊಡಲಾಗುವುದು ಆಸಕ್ತಿಯುಳ್ಳವರು ಕರೆಮಾಡಿ MNM ಗೋಲ್ಡ್, ಅಶೋಕ ರಸ್ತೆ, ಮೈಸೂರು
9036991977

ಗಿರವಿ ಚಿನ್ನಾಭರಣ ಖರೀದಿ ಹಾಗೂ EMI ನಲ್ಲಿ ಚಿನ್ನದ ಮೇಲೆ ಸಾಲ
ಯಾವುದೇ ಬ್ಯಾಂಕ್, ಫೈನಾನ್ಸ್ ಮತ್ತು ಗಿರವಿ ಅಂಗಡಿಯಲ್ಲಿ ಇಟ್ಟಿರುವ ಚಿನ್ನಾಭರಣವನ್ನು ಬಿಡಿಸಿ. EMI ನಲ್ಲಿ ಚಿನ್ನದ ಮೇಲೆ ಕಡಿಮೆ ಬಡ್ಡಿಯಲ್ಲಿ ಸಾಲ ಕೊಡಲಾಗುವುದು ಹಾಗೂ ಇಂದಿನ ಬೆಲೆಗೆ ಖರೀದಿಸಿ ಉಳಿದ ಹಣ ಕೊಡಲಾಗುವುದು. ಸಂಪರ್ಕಿಸಿ: MNM ಗೋಲ್ಡ್, ಅಶೋಕ ರಸ್ತೆ, ಗುಪ್ತ ಹೋಟೆಲ್ ಹತ್ತಿರ, ಮೈಸೂರು
9036991977

2 ಲಕ್ಷ ಇನ್‌ವೆಸ್ಟ್‌ಮೆಂಟ್ ಮಾಡುವವರಿಗೆ ಕೆಲಸ ಮತ್ತು ಪ್ರತಿದಿನ ಸಂಬಳ
ಪ್ರತಿದಿನ 2 ಲಕ್ಷ ಇನ್‌ವೆಸ್ಟ್‌ಮೆಂಟ್ ಮಾಡುವವರಿಗೆ ಕೆಲಸ ಮತ್ತು ಪ್ರತಿದಿನ 200 ರೂ., ಸಂಬಳ, 300 ರೂ. ಕೊಡಲಾಗುವುದು ಹಾಗೂ ಸಂಜೆ ನಿಮ್ಮ ಹಣ ವಾಪಸ್ ಪಡೆಯಬಹುದು. ಆಸಕ್ತಿಯುಳ್ಳವರು ಕರೆ ಮಾಡಿ. MNM ಗೋಲ್ಡ್, ಅಶೋಕ ರಸ್ತೆ, ಗುಪ್ತ ಹೋಟೆಲ್ ಹತ್ತಿರ, ಮೈಸೂರು
9036991977

BRIDE / GROOMS MATCH MAKERS ಮದುವೆಗಾಗಿ ಭೇಟಿ ನೀಡಿ
ಎಲ್ಲಾ ಜಾತಿಯ 18 to 70 ಡಾಕ್ಟರ್, ಇಂಜಿನಿಯರ್ All Degrees ಶ್ರೀಮಂತ/ Middle Class / Own Business/ Govt. Jobs/ Private, 18000 ವಧುಗಳಿಗೆ ವರಬೇಕು. 28000 ವರಗಳಿಗೆ ವಧು ಬೇಕು. ಡೈವೋರ್ಸಿಗಳು/ ವಿಧುರರು/ ವಿಧವೆಯರು/ಶ್ರೀಮಂತ/ ಉದ್ಯೋಗದಲ್ಲಿರುವ ಇಂಜಿನಿಯರ್/ಡಾಕ್ಟರ್‌ಗಳಿಗೆ ಬೆಂಗಳೂರು ಉದ್ಯೋಗದಲ್ಲಿರುವ 60 ಯಾವುದೇ ಜಾತಿ ವಧು ಬೇಕಾಗಿದೆ.
Wanted Office job Female+Shelter+Food
ಚೇತನ ಗಂಗಾ: 7975728012

REQUIRED
Office HR & ADMIN
Interest candidates send your CV to nimishpvtltd@gmail.com
Contact with Bio-Data:
380/D 14/A 2nd Floor, Krishna Vilasa Road, MYSORE-570001.

ತಕ್ಷಣ ಬೇಕಾಗಿದ್ದಾರೆ
ಟೆಲಿಕಾಲಿಂಗ್ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
Fixed Salary + Incentive
9060606659

ಷೇರ್ ಮಾರ್ಕೆಟ್ ಟ್ರೈನಿಂಗ್
ಮನೆಯಲ್ಲೇ ಕುಳಿತು ಟ್ರೇಡಿಂಗ್ ಮಾಡುವ ಮೂಲಕ ದಿನಕ್ಕೆ 1500 – 2000 ಸಂಪಾದಿಸಿ. Self ಟ್ರೇಡಿಂಗ್ ಮಾಡುವುದನ್ನು ಹೇಳಿಕೊಡುತ್ತೇವೆ. (Trading Tips Available) Do Not Depend on one Source of income
9945667806

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ ಆಸಕ್ತರು ಸಂಪರ್ಕಿಸಿ:
7676844160
6361056646

ತಕ್ಷಣ ಬೇಕಾಗಿದ್ದಾರೆ
ಹೂಟಗಳ್ಳಿ ಇಂಡಸ್ಟ್ರಿಯಲ್ ಹೆಸರಾಂತ ಕಂಪನಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. 18 ರಿಂದ 30 ವರ್ಷದ ಒಳಗಡೆ ಇರಬೇಕು. ವಿದ್ಯಾರ್ಹತೆ : ITI any Trade, ಸಂಬಳ: 14,500 to 18,500 ರೂ.ಗಳು ಇರುತ್ತದೆ. ಸೌಲಭ್ಯ: ESI & PF, Canteen ಸೌಲಭ್ಯವಿರುತ್ತದೆ.
9591977540 / 7019380847

ಮನೆಯಿಂದಲೇ ಕೆಲಸ ತಕ್ಷಣ ಬೇಕಾಗಿದ್ದಾರೆ
ಗೃಹಿಣಿಯರು, ವಿದ್ಯಾರ್ಥಿಗಳು, ನಿವೃತ್ತರು ಎಲ್ಲರಿಗೂ ಅವಕಾಶ ಕನ್ನಡ, ಇಂಗ್ಲೀಷ್ ಬರವಣಿಗೆ ಹಾಗೂ ಡೇಟಾ ಎಂಟ್ರಿ ಕೆಲಸಗಳು ಗಳಿಸಿ ತಿಂಗಳಿಗೆ 15,000–26,000/–
9663321516
8904253623

ಮನೆ ಸಾಲ
ಜನಮಿತ್ರ ಫಿನ್ ಸರ್ವ್ ಪ್ರೈ.ಲಿ.
2921/ಎ, ಸರಸ್ವತಿಪುರಂ, ಮೈಸೂರು
11B, 9&11A ಖಾತಾಗಳಿಗೂ ಮುಡಾ & ಕಾರ್ಪೊರೇಷನ್ ಖಾತೆ ಇದ್ದರು, ಇಲ್ಲದಿದ್ದರೂ ಹಾಗೂ 15,000 ಮೇಲ್ಪಟ್ಟು ಸಂಬಳ ಇರುವವರಿಗೆ ಪರ್ಸನಲ್ ಲೋನ್ ಹಾಗೂ ಬಿಸಿನೆಸ್ ಲೋನ್, ಇಂಡಸ್ಟ್ರಿಯಲ್ ಮಾರ್ಟ್‌ಗೇಜ್ ಲೋನ್ ಸೌಲಭ್ಯ ದೊರೆಯುತ್ತದೆ. ಸಂಪರ್ಕಿಸಿ.
8088647887

Vidyavahini School (R)
#282/8, Near Cauvery Circle, Hebbal 2nd Stage, Mysuru- 570017
Teachers Required
PUC, D.ED, B.A, M.A-English, B.Sc., B.Ed- Mathematics, Computer Teacher D.P.Ed/ B.P.Ed-Physical Education Email: vidyavahini06@gmail.com
9844032278 / 7795115811

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಕಂಪನಿ, ಆಫೀಸ್ ಮತ್ತು ಶೋರೂಂ ಗಳಿಗೆ 7th, SSLC, PUC, ITI, Any Degree, Pass / Fail ಆದವರಿಗೆ Helper, Packing, Labeling ಮತ್ತು Cashier, Billing, Data Entry, Receptionist, Front Office ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ: 14,000-39000 (ESI+PF+OT) ಸೇರಿ
7892878915 / 9663704915

ನೇರ ನೇಮಕಾತಿ
Engineer Civil - 4, 25,000/-
Engineer Computer Science -4, 25,000/-, Diploma -5, 20,000/-
ITI, Receptionist-2,
Accountant -2, Helpers and Security, ಹುಡುಗ–ಹುಡುಗಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳವಿರುತ್ತದೆ.
6362292620 / 7899099833

ಬೇಕಾಗಿದ್ದಾರೆ
ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ವಯಸ್ಸು 18 ರಿಂದ 45 ವಿದ್ಯಾಭ್ಯಾಸ ಬೇಕಾಗಿಲ್ಲ. ಸಂಬಳ: 13,500 ESI, PF ಒಳಗೊಂಡು 8 Hrs Duty, Week off ಇರುತ್ತದೆ. ಹೆಚ್ಚಿನ ಮಾಹಿತಿಯನ್ನು ಸ್ಥಳಕ್ಕೆ ಬಂದು ಪಡೆದುಕೊಳ್ಳತಕ್ಕದ್ದು. ಸ್ಥಳ: ಮೇಟಗಳ್ಳಿ, ರಿಂಗ್ ರೋಡ್, CIPET ಕಾಲೇಜ್ ಹತ್ತಿರ, ಮೈಸೂರು
9986874584

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ, ಯುವತಿಯರು, ಮಹಿಳೆಯರು, ವಿಧವೆ /ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ.
(ಸರ್ಕಾರಿ ನೋಂದಾಯಿತ ಸಂಸ್ಥೆ)
ಸಂಬಳ 14000ದಿಂದ 16000
(ESI, PF,ಸೌಲಭ್ಯ ಇರುತ್ತದೆ)
8050699742

SITES FOR SALE
20 x 30 - 13.20 Lakhs
30 x 40 - 26.40 Lakhs
Bank Loan upto 75%,Ready for Registration, near Gurur Bus Stop, Ramabainagar, Mysore. DTCP approved (Corporation limits)
1.5 Kms from JP Nagar Ring Road
8660105902

HOUSES FOR SALE
30x40, G+2, newly built independent house ground floor and 1st floor 2 BHK, 1 BHK high quality construction house for sale near Christ Public School, Dattagalli.
Mob: 9900251194/ 9738884777

ವಧು ಬೇಕಾಗಿದೆ
37 ವರ್ಷದ ವಿಶ್ವಕರ್ಮದ ವರನಿಗೆ 2ನೇ ಸಂಬಂಧಕ್ಕೆ ವಧು ಬೇಕಾಗಿದೆ. 35 ವರ್ಷದ ಒಳಗಿರುವ ವಿಶ್ವಕರ್ಮದ ವಿಧವೆ ವಿಚ್ಛೇದಿತೆಯರು ನೇರ ಸಂಪರ್ಕಿಸಿ, ಮಕ್ಕಳು ಇದ್ದರೂ ಪರವಾಗಿಲ್ಲ.
8904169918
ಮಧ್ಯವರ್ತಿಗಳಿಗೆ ಅವಕಾಶವಿಲ್ಲ

ಬೇಕಾಗಿದ್ದಾರೆ
ಲೇಔಟ್‌ನಲ್ಲಿ ವಾಚ್ ಮ್ಯಾನ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ವಯಸ್ಸು 35 ರಿಂದ 50 ವರ್ಷ ವಿದ್ಯಾರ್ಹತೆ ಬೇಕಾಗಿಲ್ಲ. ಸಂಬಳ 9,500/– ಇಲವಾಲ ಸುತ್ತಮುತ್ತ ಇರುವವರಿಗೆ ಆದ್ಯತೆ. ಸ್ಥಳ: ಯಲ್ಲಹಳ್ಳಿ, ಇಲವಾಲ, ಮೈಸೂರು.
9986874584

ತಕ್ಷಣ ಬೇಕಾಗಿದ್ದಾರೆ
SSLC Pass / Fail ಆದ ಹುಡುಗರು ಮೇಟಗಳ್ಳಿ ಇಂಡಸ್ಟ್ರಿಯಲ್ Area ದಲ್ಲಿ ಹೆಸರಾಂತ ಕಂಪನಿಯಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಸೌಲಭ್ಯಗಳು: PF & ESI Canteen ವಸತಿ ಸೌಲಭ್ಯಗಳು ಇರುತ್ತದೆ. ಸಂಬಳ: 15,000-18,000 ಇರುತ್ತದೆ. ಸಂಪರ್ಕಿಸಿ
9845743950 / 8105651601
9035885330

NEW BUILT HOUSE FOR SALE
4 BHK, I Block, Ramakrishnanagar
Contact:
9448938418/9845395953

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡಿ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಕೊಳ್ಳೇಗಾಲದ ಜ್ಯೋತಿಷ್ಯರು
ಮೋಡಿ ಮಾಂತ್ರಿಕರು ಪಂ.ಎಸ್.ಕುಮಾರಸ್ವಾಮಿ
ಮೊ.: 9880583804
ಸ್ತ್ರೀ ಪುರುಷ ಪ್ರೇಮ, ಸಂತಾನ, ದಾಂಪತ್ಯ ಸಮಸ್ಯೆ (Divorce) ಡಿವೋರ್ಸ್ ಪ್ರಾಬ್ಲಮ್, ಸಾಲಭಾದೆ, ಶತ್ರುಭಾದೇ, ದುಷ್ಟಶಕ್ತಿ, ಅಷ್ಟಪಟ್ಟವರು ನಿಮ್ಮಂತಾಗಲು, ಕೊಳ್ಳೇಗಾಲ ಮೋಡಿ ಮಾಂತ್ರಿಕ ಶಕ್ತಿಯಿಂದ ನಿಮ್ಮ ಯಾವುದೇ ಸಮಸ್ಯೆಗಳಿಗೆ ಎರಡೇ ದಿನದಲ್ಲಿ ಶಾಶ್ವತ ಪರಿಹಾರ ಶತಸಿದ್ಧ. ನಂಬಿ ಬನ್ನಿ. ಖಾಯಂ ವಿಳಾಸ: (Reliance Smart) ಹತ್ತಿರ, ATM ಪಕ್ಕ, ಟಿಕೇಟ್ ಬುಕ್ಕಿಂಗ್ ಕೌಂಟರ್ ಹತ್ತಿರ, (KSRTC) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

ದಲಿತರನ್ನು ಸಬಲೀಕರಣಗೊಳಿಸಿ ಕಾಂಗ್ರೆಸ್ ಅಧಿಕಾರಕ್ಕೆ ತನ್ನಿ



ಮಂಡ್ಯ,ಮೇ 4 (ಮೋಹನ್‌ರಾಜ್)– ದಲಿತರನ್ನು ಒಗ್ಗೂಡಿಸಿ ಕಾಂಗ್ರೆಸ್ ಪಕ್ಷವನ್ನು ಸಬಲೀಕರಣಗೊಳಿಸುವ ಮೂಲಕ ಅಧಿಕಾರಕ್ಕೆ ತರುವ ಕೆಲಸ ಮಾಡಬೇಕು ಎಂದು ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ರಾಜ್ಯ ಘಟಕದ ಅಧ್ಯಕ್ಷ ಆರ್.ಧರ್ಮಸೇನಾ ಕಾರ್ಯಕರ್ತರಿಗೆ ಕರೆ ನೀಡಿದರು.

ಬುಧವಾರ ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಜಿಲ್ಲಾ ಪರಿಶಿಷ್ಟ ಜಾತಿ ವಿಭಾಗದ ಕಾಂಗ್ರೆಸ್ ವತಿಯಿಂದ ನಡೆದ ಬ್ಲಾಕ್ ಅಧ್ಯಕ್ಷರು ಹಾಗೂ ಜಿಲ್ಲಾ ಪದಾಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರತಿಯೊಬ್ಬರೂ ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳುವಂತೆ ಸಲಹೆ ನೀಡಿದರು.

ಜಿಲ್ಲಾ ಪರಿಶಿಷ್ಟ ಜಾತಿ ಕಾಂಗ್ರೆಸ್ ವಿಭಾಗದ ಅಧ್ಯಕ್ಷ ಸುರೇಶ್ ಕಂಠಿ ಮಾತನಾಡಿ, ಕೇಂದ್ರ ಹಾಗೂ ರಾಜ್ಯದ ಬಿಜೆಪಿ ಸರ್ಕಾರದಿಂದ ಅತಿ ಹೆಚ್ಚು ಪರಿಶಿಷ್ಟ ಜಾತಿಯವರ ಮೇಲೆ ದೌರ್ಜನ್ಯಗಳು ನಡೆಯುತ್ತಿವೆ ಎಂದು ದೂರಿದರು. ಸರ್ಕಾರಿ ಸ್ವಾಮ್ಯದ ಕಂಪನಿಗಳನ್ನು ಖಾಸಗೀಕರಣ ಮಾಡುವ ಮೂಲಕ ಉದ್ಯೋಗದಲ್ಲಿ ಮೀಸಲಾತಿ ಕಸಿಯುವ ಕೆಲಸ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೆ ಸಂವಿಧಾನ ಬರೆಯಲು ಅವಕಾಶ ಮಾಡಿಕೊಟ್ಟಿದ್ದು ಕಾಂಗ್ರೆಸ್ ಸರ್ಕಾರ. ಹಾಗಾಗಿ ಸಂವಿಧಾನ ಉಳಿವು ಕಾಂಗ್ರೆಸ್ ಪಕ್ಷದಿಂದ ಮಾತ್ರ ಸಾಧ್ಯ ಎಂದು ತಿಳಿಸಿದರು.

ಕೊಳ್ಳೇಗಾಲದ ಶಾಸಕ ಎನ್.ಮಹೇಶ್ ತಮ್ಮ ಸ್ವಾರ್ಥ ರಾಜಕಾರಣಕ್ಕಾಗಿ ದಲಿತ ಸಮುದಾಯವನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಗ್ರಾಮೀಣ ಪ್ರದೇಶದಲ್ಲಿ ಕಾಂಗ್ರೆಸ್ ಪಕ್ಷವನ್ನು ಸಂಘಟಿಸುವ ಕೆಲಸವನ್ನು ಪರಿಶಿಷ್ಟ ವಿಭಾಗದ ಕಾಂಗ್ರೆಸ್ ಪದಾಧಿಕಾರಿಗಳು ಮಾಡಬೇಕು, ಇಂದು ದೇಶ ಹಾಗೂ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅನಿವಾರ್ಯವಾಗಿದ್ದು, ಬರುವ 2023ರ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯ 7 ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ಪಕ್ಷ ಅಧಿಕಾರಕ್ಕೆ ತರಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ. ಗಂಗಾಧರ್, ಮುಖಂಡರಾದ ಕೆ.ಹೆಚ್. ಲವ, ತಿಬ್ಬನಹಳ್ಳಿ ರಮೇಶ್, ದೀಪಕ್, ಮಂಡ್ಯ ಆನಂದ್, ಶಿವಯ್ಯ, ಚಂದ್ರಶೇಖರ್, ಜಯರಾಜು, ಗೀತಾ, ಶಿವಪ್ರಸಾದ್, ಶ್ರೀಧರ್, ಇತರರು ಭಾಗವಹಿಸಿದ್ದರು.

ಮೇಲುಕೋಟೆಯಲ್ಲಿ ರಾಮಾನುಜರ ರಥೋತ್ಸವ



ಮೇಲುಕೋಟೆ, ಮೇ 4– 1005 ನೇ ಜಯಂತ್ಯುತ್ಸವದ ಪ್ರಯುಕ್ತ ಬುಧವಾರ ಶ್ರೀ ರಾಮಾನುಜಾಚಾರ್ಯರ ಮಹಾ ರಥೋತ್ಸವ ವೈಭವದಿಂದ ನೆರವೇರಿತು.

ತಮಿಳುನಾಡು ಮತ್ತು ಆಂಧ್ರದಿಂದ ಆಗಮಿಸಿದ ನೂರಾರು ಭಕ್ತರು ಯತಿರಾಜರ ರಥ ಎಳೆದು ಪುನೀತಭಾವ ಅನುಭವಿಸಿದರು.

ಬೆಳಗ್ಗೆ 9 ಗಂಟೆಗೆ ರಾಮಾನುಜರಿಗೆ ಯಾತ್ರಾದಾನ ನೆರವೇರಿತು. ನಂತರ ಚೆಲ್ವತಿರುನಾರಾಯಣಸ್ವಾಮಿಯ ಮರ್ಯಾದೆ ಮಹಾ ಮಂಗಳಾರತಿ ನೆರವೇರಿತು. ವೇದಘೋಷ ಮತ್ತು ಮಂಗಳವಾದ್ಯದೊಂದಿಗೆ ರಥ ಮಂಟಪಕ್ಕೆ ಮೂರು ಪ್ರದಕ್ಷಿಣೆ ನೆರವೇರಿಸಿ ಜೋಯಿಸರ ಮುಹೂರ್ತ ಪಠಣದ ನಂತರ ರಥಾರೋಹಣ ನೆರವೇರಿಸಲಾಯಿತು. ರಥ ಮಂಟಪದಲ್ಲಿ ಎಲ್ಲಾ ಪೂಜಾ ಕೈಂಕರ್ಯಗಳನ್ನು ಪೂರ್ಣಗೊಳಿಸಿ 12 ಗಂಟೆಯ ವೇಳೆಗೆ ಮಹಾರಥಕ್ಕೆ ಚಾಲನೆ ನೀಡಲಾಯಿತು.

ರಥಬೀದಿ, ಮಾರೀಗುಡಿ ಬೀದಿ, ರಾಜಬೀದಿ ಹಾಗೂ ವಾನಮಾಮಲೆ ಮಠದ ಬೀದಿಯಲ್ಲಿ ಸಂಚರಿಸಿದ ರಥ 3 ಗಂಟೆಗೆ ಸ್ವಸ್ಥಾನ ಸೇರಿತು. ಮಹಿಳಾ ಭಕ್ತೇ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಸುಡು ಬಿಸಿಲನ್ನೂ ಲೆಕ್ಕಿಸದೆ ರಾಮಾನುಜ, ಯತಿರಾಜ ಎಂಬ ಜಯಘೋಷ ಮೊಳಗಿಸುತ್ತಾ ತೇರೆಳೆದರು. ಅಲ್ಲಲ್ಲಿ ಮಜ್ಜಿಗೆ, ಪಾನಕ ವಿತರಿಸಲಾಯಿತು. ರಾಮಾನುಜರ ಸನ್ನಿಧಿ ಅರ್ಚಕ ವಿದ್ವಾನ್ ಆನಂದಾಳ್ವಾರ್ ರಥಕ್ಕೆ ಹೂವಿನ ಅಲಂಕಾರ ಸೇರಿದಂತೆ ಎಲ್ಲಾ ವ್ಯವಸ್ಥೆ ಮಾಡಿದ್ದರು. ಮೇಲುಕೋಟೆ ಪೊಲೀಸ್ ಇನ್ಸ್‌ಪೆಕ್ಟರ್ ಸುಮಾರಾಣಿ ಮತ್ತು ಸಿಬ್ಬಂದಿ ಹಾಜರಿದ್ದು ಭದ್ರತೆ ಕಲ್ಪಿಸಿದ್ದರು. ದೇವಾಲಯದ ಇಒ ಮಂಗಳಮ್ಮ ಸೇರಿದಂತೆ ಹಲವು ಗಣ್ಯರು ಭಾಗಿಯಾಗಿದ್ದರು. ಸಂಜೆ ರಾಮಾನುಜರಿಗೆ ಯತಿರಾಜಮಠದಲ್ಲಿ ಏಕಾಂತ ಅಭಿಷೇಕ ನಡೆಯಿತು.

ಯದುಗಿರಿ ಯತಿರಾಜ ಶ್ರೀಮನ್ನಾರಾಯಣರಾಮಾನುಜ ಜೀಯರ್ ಆಚಾರ್ಯರಿಗೆ ಪರಂಪರೆಯಂತೆ ಕೈಂಕರ್ಯ ನೆರವೇರಿಸಿದರು.

ನಿಧನ

ಶ್ರೀಮತಿ ಯಶೋಧಮ್ಮ



ಕೆ.ಆರ್.ಪೇಟೆ, ಮೇ 4– ಕೆ.ಆರ್.ಪೇಟೆ ತಾಲೂಕಿನ ಬೂಕನಕೆರೆ ಗ್ರಾಮದ ಜವರಪ್ಪನ ರಾಮೇಗೌಡರ ಧರ್ಮಪತ್ನಿ ಶ್ರೀಮತಿ ಯಶೋಧಮ್ಮ (70) ಇಂದು ನಿಧನರಾದರು.

ಮೃತರು ಓರ್ವ ಪುತ್ರ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಬೂಕನಕೆರೆ ಗ್ರಾಮದಲ್ಲಿ ನೆರವೇರಿತು.

ಯಜಮಾನ್ ಚನ್ನೇಗೌಡ



ಭಾರತೀನಗರ, ಮೇ 4– ಮದ್ದೂರು ತಾಲೂಕಿನ ದೇವರಹಳ್ಳಿ ಗ್ರಾಮದ ಯಜಮಾನ್ ಚನ್ನೇಗೌಡ (95) ಇಂದು ಸಂಜೆ ನಿಧನರಾದರು.

ಮೃತರು ಪತ್ನಿ ಕೆಂಪಮ್ಮ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಗುರುವಾರ) ಬೆಳಗ್ಗೆ 11 ಗಂಟೆಗೆ ಮೃತರ ಜಮೀನಿನಲ್ಲಿ ನೆರವೇರಲಿದೆ.

ಬಿ.ಕೆ. ವಾಗೀಶ್



ಕೆ.ಆರ್.ಪೇಟೆ ಅಗ್ರಹಾರ ಬೀದಿ ನಿವಾಸಿ ಲೇಟ್ ಬಿ.ಕೆ.ಕೃಷ್ಣಪ್ಪರವರ ಪುತ್ರ ಬಿ.ಕೆ.ವಾಗೀಶ್(58) ಇಂದು ನಿಧನರಾದರು.

ಮೃತರು ಪತ್ನಿ, ಪುತ್ರಿ, ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಗುರುವಾರ) ಬೆಳಗ್ಗೆ 9 ಗಂಟೆಗೆ ನೆರವೇರಲಿದೆ.

ಸೀತಾಪುರ ಗ್ರಾಮದಲ್ಲಿ ಬನ್ನಾಂತಮ್ಮನ ಉತ್ಸವ



ಪಾಂಡವಪುರ, ಮೇ 4– ತಾಲೂಕಿನ ಸೀತಾಪುರ ಗ್ರಾಮದಲ್ಲಿ ಬನ್ನಾಂತಮ್ಮನ ಉತ್ಸವವು ವಿಜೃಂಭಣೆಯಿಂದ ಜರುಗಿತು.

ಕಳೆದ ಏ.26ರಂದು ಮೊದಲ ದಿನ ಸುಂಕದ ಮಾರಮ್ಮನ ಉತ್ಸವ ನಡೆಯಿತು. ಎರಡನೇ ದಿನ ದಂಡಮ್ಮನ ಉತ್ಸವ, ಮೂರನೇ ದಿನ ಪೂಜಾಕುಣಿತ, ರಂಗನಕುಣಿತ, ಬೆಳಕಿನ ಕುಣಿತ ನಡೆದವು. ಶುಕ್ರವಾರ ಏಳೂರಮ್ಮನ ಹಬ್ಬ ಹಾಗೂ ಕನ್ನಂಕಾಡಿ ಉತ್ಸವ ಜರುಗಿತು. ಭಾನುವಾರ ಮಾರಮ್ಮನ ಹಬ್ಬ, ಸೋಮವಾರ ಓಕಳಿ ಜರುಗಿತು, ಅದಾದ ಬಳಿಕ ಕೊನೆಯ ದಿನವಾದ ಮಂಗಳವಾರ ವಿಜೃಂಭಣೆಯಿಂದ ಬನ್ನಾಂತಮ್ಮ ದೇವಿಯ ಉತ್ಸವ ಜರುಗಿತು. ಕೊರೊನಾ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಹಬ್ಬ ನಡೆದಿರಲಿಲ್ಲ ಹಾಗಾಗಿ ಈ ವರ್ಷ ಬಹಳ ಸಂಭ್ರಮ ಸಡಗರದಿಂದ ಹಬ್ಬ ಆಚರಣೆ ಮಾಡಲಾಯಿತು.

ಬನ್ನಾಂತಮ್ಮನ ಹಬ್ಬದ ಅಂಗವಾಗಿ ಗ್ರಾಮದ ಹೊರವಲಯದ ನಾಲೆಯಲ್ಲಿ ದೇವರ ಪ್ರತಿಷ್ಠಾಪನೆ ಮಾಡಿ ಬಳಿಕ ವಿವಿಧ ಕಲಾತಂಡಗಳ ಮೂಲಕ ಗ್ರಾಮಕ್ಕೆ ಕರೆತಂದರು. ಬಳಿಕ ಗ್ರಾಮದಲ್ಲಿ ದೇವರ ಮೆರವಣಿಗೆ ನಡೆಸಲಾಯಿತು. ಗ್ರಾಮದ ಪ್ರತಿ ಮನೆಯ ಬಳಿಯೂ ಪೂಜೆ ಸಲ್ಲಿಸಲಾಯಿತು. ನಂತರ ರಾತ್ರಿ ಗ್ರಾಮದ ಹೊರವಲಯದ ಜಮೀನೊಂದಕ್ಕೆ ತೆರಳಿ ಅಲ್ಲಿ ದೇವರ ಮೂರ್ತಿಯನ್ನು ಇಟ್ಟು ಪೂಜೆ ಸಲ್ಲಿಸುವ ಮೂಲಕ ಒಂದು ವಾರಗಳ ಕಾಲ ನಡೆದ ಹಬ್ಬದ ಸಂಭ್ರಮಕ್ಕೆ ತೆರೆ ಎಳೆದರು.

ಉತ್ಸವದಲ್ಲಿ ಗ್ರಾಮದ ತೆಂಡೆಯ ಯಜಮಾನರಾದ ವೈರಮುಡಿ, ರಾಕೇಶ್, ಅರುಣ, ರಮೇಶ್, ಕುಮಾರ, ಪ್ರಮೋದ್, ಅನಿಲ್, ದೇವರಾಜು, ಸುಧಾ, ರಾಜೇಶ್, ಲಿಂಗರಾಜು ಹಾಗೂ ಗ್ರಾಮದ ಹಿರಿಯ ಮುಖಂಡ, ಮಾಜಿ ಎಂಎಲ್‌ಸಿ ಸಂದೇಶ್ ನಾಗರಾಜು, ಸಂದೇಶ್‌ಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ವಿಶ್ವನಾಥ್, ಸಣ್ಣನಿಂಗೇಗೌಡ, ಗ್ರಾಮದ ಯಜಮಾನರು, ಮುಖಂಡರು, ಯುವಕರು ಭಾಗವಹಿಸಿದ್ದರು.

ವಿದ್ಯಾರ್ಥಿಗಳಿಗೆ ವಿದ್ಯೆ, ಜ್ಞಾನ ಅಕ್ಷಯವಾಗಲಿ



ಭಾರತೀನಗರ, ಮೇ 4(ಅಣ್ಣೂರು ಸತೀಶ್)– ವಿದ್ಯಾರ್ಥಿಗಳಿಗೆ ವಿದ್ಯೆ ಮತ್ತು ಜ್ಞಾನ ಅಕ್ಷಯವಾಗಲಿ ಎಂದು ಶಾಸಕ ಡಿ.ಸಿ.ತಮ್ಮಣ್ಣ ಆಶಿಸಿದರು.

ಇಲ್ಲಿಗೆ ಸಮೀಪದ ದೊಡ್ಡರಸಿನಕೆರೆ ಶ್ರೀಕಾಳಿಕಾಂಬ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಬಸವ ಜಯಂತಿ ಹಾಗೂ ಅಕ್ಷಯ ತೃತೀಯ ಅಂಗವಾಗಿ ಪುಸ್ತಕ ಮತ್ತು ಲೇಖನ ಸಾಮಗ್ರಿಗಳನ್ನು ವಿತರಣೆ ಮಾಡಿ ಅವರು ಮಾತನಾಡಿದರು.

ಅಕ್ಷಯ ತೃತೀಯ ಅಂಗವಾಗಿ ನನ್ನ ಮಗಳು ಶೃತಿ ರಾಜೇಶ್‌ಗೌಡ ವಿದ್ಯಾರ್ಥಿಗಳ ಜ್ಞಾನವೃದ್ಧಿಗಾಗಿ ಮತ್ತು ಕಲಿಕೆಗೆ ಪ್ರೋತ್ಸಾಹ ನೀಡಲು ಲೇಖನಿ ಸಾಮಗ್ರಿಗಳನ್ನು ನೀಡಿದ್ದಾರೆ.

ಅಕ್ಷಯ ತೃತೀಯ ದಿನ ನೀಡಿದರೆ ವಿದ್ಯಾರ್ಥಿಗಳಿಗೆ ವಿದ್ಯೆ ಮತ್ತು ಜ್ಞಾನ ಅಕ್ಷಯವಾಗುತ್ತದೆ ಎಂಬ ಸದುದ್ದೇಶದಿಂದ ಇಂತಹ ಕಾರ್ಯಕ್ಕೆ ಮುಂದಾಗಿರುವುದು ಉತ್ತಮ ಬೆಳವಣಿಗೆ. ಇದೇ ರೀತಿ ಕೊಡುಗೈದಾನಿಗಳು ಮುಂದಾದರೆ ವಿದ್ಯಾರ್ಥಿಗಳ ಹಿತ ದೃಷ್ಟಿಯ ಜೊತೆಗೆ ಬಡ ಕುಟುಂಬಗಳ ಆರ್ಥಿಕ ಸಮಸ್ಯೆಯನ್ನು ನೀಗಿಸಬಹುದು ಎಂದರು.

ಇದೇ ವೇಳೆ ಮುಖ್ಯಶಿಕ್ಷಕ ಎಂ.ಎಸ್. ಶಶಿಧರ್, ಸಂಸ್ಥೆಯ ಕಾರ್ಯಾಧ್ಯಕ್ಷ ಎಂ.ಕೆ. ನಾರಾಯಣ್, ಕಾರ್ಯದರ್ಶಿ ಮಂಚೇಗೌಡ, ನಿರ್ದೇಶಕರಾದ ವೀರಯ್ಯ, ಡಿ.ಸಿ. ಮಹೇಂದ್ರ, ಶಿಕ್ಷಕರಾದ ಮೋಹನ್ ಕುಮಾರ್ ಆಚಾರ್ಯ, ಎಂ.ಎಸ್.ಸವಿತ, ಎಚ್.ಕೆ.ಲೋಹಿತ್, ಬೈರೇಶ್, ನಿಶಾಂತ್ ಗೌಡ ಸೇರಿದಂತೆ ಇತರರಿದ್ದರು.



ಕೆ.ಆರ್.ಪೇಟೆ ತಾಲೂಕಿನ ನಾರ್ಗೋನಹಳ್ಳಿ ಗ್ರಾಮದಲ್ಲಿ ಶ್ರೀ ಮಾರಮ್ಮ ದೇವಿಯ ದೇವಸ್ಥಾನ ನಿರ್ಮಾಣಕ್ಕೆ ಮಿತ್ರ ಫೌಂಡೇಷನ್ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ವಿಜಯ್ ರಾಮೇಗೌಡ 50 ಸಾವಿರ ರೂ. ದೇಣಿಗೆಯ ಚೆಕ್ ನೀಡಿದರು.

ಕೆಆರ್‌ಎಸ್ ಬಳಿ ಯುವಕನೋರ್ವನ ಅನುಮಾನಾಸ್ಪದ ಸಾವು



ಶ್ರೀರಂಗಪಟ್ಟಣ, ಮೇ 4 (ವಿನಯ್ ಕಾರೇಕುರ)– ತಾಲೂಕಿನ ಚಿಕ್ಕಾಯರಹಳ್ಳಿ ಗ್ರಾಮದ ಬಳಿ ಕಾವೇರಿ ನದಿಯಲ್ಲಿ ಮುಳುಗಿ ಯುವಕನೋರ್ವ ಅನುಮಾನಾಸ್ಪದವಾಗಿ ಮೃತಪಟ್ಟಿರುವ ಘಟನೆ ನಡೆದಿದೆ.

ಮೃತ ಯುವಕನ್ನನ್ನು ಪಾಂಡವಪುರ ತಾಲೂಕಿನ ಸೀತಾಪುರ ಗ್ರಾಮದ ನಾಗೇಂದ್ರ (26) ಎಂದು ಗುರುತಿಸಲಾಗಿದೆ. ಮೃತನ ತಂದೆ ಸುಬ್ಬೇಗೌಡ ಕೆ.ಆರ್.ಎಸ್. ಪೊಲೀಸ್ ಠಾಣೆಗೆ ದೂರು ನೀಡಿದ್ದು, ಕೊಲೆ ಶಂಕೆ ವ್ಯಕ್ತಪಡಿಸಿದ್ದಾರೆ. ಸ್ಥಳಕ್ಕೆ ಕೆ.ಆರ್.ಎಸ್. ಠಾಣೆಯ ಸಿಪಿಐ ಯೋಗೇಶ್, ಸಬ್‌ಇನ್ಸ್‌ಪೆಕ್ಟರ್ ಲಿಂಗರಾಜು ಹಾಗೂ ಸಿಬ್ಬಂದಿ ತೆರಳಿ ಪರಿಶೀಲನೆ ನಡೆಸಿದರು. ಶವವನ್ನು ನದಿ ನೀರಿನಿಂದ ಹೊರ ತೆಗೆದು ಮೈಸೂರು ಕೆಆರ್. ಆಸ್ಪತ್ರೆಗೆ ಕೊಂಡೊಯ್ದು ಶವ ಪರೀಕ್ಷೆ ನಡೆಸಿದ ನಂತರ ದೇಹವನ್ನು ವಾರಸುದಾರರಿಗೆ ನೀಡಲಾಯಿತು. ಈ ಬಗ್ಗೆ ಕೆ.ಆರ್. ಎಸ್. ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಕೈಗೊಳ್ಳಲಾಗಿದೆ.

ಸಮಾಜಮುಖಿ ಕೆಲಸ ಮಾಡುವವರು ರಾಜಕೀಯಕ್ಕೆ ಬರಬೇಕು

ನಾಗಮಂಗಲ, ಮೇ 4– ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೇ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡವರು ರಾಜಕೀಯಕ್ಕಿಳಿಯಬೇಕು ಎಂದು ಚಿತ್ರನಟ ಲವ್ಲಿ ಸ್ಟಾರ್ ಪ್ರೇಮ್ ಅಭಿಪ್ರಾಯಪಟ್ಟರು. ಅವರು ಟಿಬಿ ಬಡಾವಣೆಯ ಪ್ರವಾಸಿ ಮಂದಿರದಲ್ಲಿ ದಕ್ಷಿಣ ಪದವೀಧರ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ವಿನಯ್ ಪರ ನಡೆದ ಪ್ರಚಾರ ಸಭೆಯಲ್ಲಿ ಮಾತನಾಡುತ್ತಿದ್ದರು.

ಅಭ್ಯರ್ಥಿ ವಿನಯ್ ಹಲವಾರು ವರ್ಷಗಳಿಂದ ನನ್ನ ಒಡನಾಟದಲ್ಲಿದ್ದು, ಉತ್ತಮ ಸ್ನೇಹಿತರಾಗಿದ್ದಾರೆ, ಹಲವು ವರ್ಷಗಳಿಂದ ಬಡವರಿಗೆ ಆರ್ಥಿಕವಾಗಿ ಸಹಾಯ ಮಾಡುತ್ತಾ ಸಮಾಜ ಸೇವೆಗಾಗಿಯೇ ಸಮಯವನ್ನು ಮೀಸಲಿಟ್ಟಿದ್ದಾರೆ. ಅವರಾಗಿ ರಾಜಕೀಯ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿರಲಿಲ್ಲ, ನಾನೇ ಎಷ್ಟೋ ಬಾರಿ ರಾಜಕಾರಣಕ್ಕೆ ಬಾ ಎಂದು ಹೇಳಿದ್ದೆ. ಇವರಂತಹವರು ರಾಜಕಾರಣಕ್ಕಿಳಿದು ಕಲುಷಿತಗೊಂಡಿರುವ ವ್ಯವಸ್ಥೆಯನ್ನು ಸರಿಪಡಿಸುವ ಅವಶ್ಯಕತೆಯಿದೆ ಎಂದು ಹೇಳಿದರು.

ಅಭ್ಯರ್ಥಿ ವಿನಯ್ ಮಾತನಾಡಿ, ರಾಜ್ಯದಲ್ಲಿ ಸಾಕಷ್ಟು ನಿರುದ್ಯೋಗ ಸಮಸ್ಯೆ ಕಾಡುತ್ತಿರುವುದರ ಜೊತೆಗೆ ಶೈಕ್ಷಣಿಕವಾಗಿ ಹಲವಾರು ಸಮಸ್ಯೆಗಳಿವೆ, ಗೆದ್ದು ಹೋದವರು ಏನು ಮಾಡಬಹುದು, ನಾನೇನು ಮಾಡಬಲ್ಲೆ ಎಂಬುದನ್ನು ನೀವೇ ಪರಾಮರ್ಶಿಸಿ ಮತದಾನ ಮಾಡಿ. ನನಗೆ ಮೊದಲ ಪ್ರಾಶಸ್ತ್ಯದ ಮತ ನೀಡಿ ಗೆಲ್ಲಿಸಿ ಕೊಟ್ಟಲ್ಲಿ ಇನ್ನಷ್ಟು ಸೇವೆ ಮಾಡುವುದಾಗಿ ಭರವಸೆ ನೀಡಿದರು.

ನಂತರ ಹಾಜರಿದ್ದ ಹಲವಾರು ಪದವೀಧರರಿಗೆ ಸಾಂಕೇತಿಕವಾಗಿ ಅಪಘಾತ ವಿಮೆ ಬಾಂಡನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಸ್ಥಳೀಯ ವಕೀಲರ ಸಂಘದ ಉಪಾಧ್ಯಕ್ಷ ಪುರುಷೋತ್ತಮ್, ಮಂಜುನಾಥ್, ಉಪ್ಪರಹಳ್ಳಿ ಸುರೇಶ್, ವಕೀಲ ಧನಂಜಯ, ರಾಘವೇಂದ್ರ, ಅಶ್ವತ್ಥ ಮುಂತಾದವರಿದ್ದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ಮೈಸೂರು ಮಿತ್ರ ಗುರುವಾರ 05 ಮೇ 2022

ಪೊರುಕೊಂಡ ಕ್ರಿಕೆಟ್ ಕಪ್ ಪಂದ್ಯಾವಳಿ

ಮಚ್ಚಾರಂಡ, ಕೊಳುವಂಡ, ನಂದಿನೆರವಂಡ ಸೇರಿ 11 ತಂಡ ಮುನ್ನಡೆ

ಗೋಣಿಕೊಪ್ಪ, ಮೇ 4– ಕೊಡವ ಕ್ರಿಕೆಟ್ ಅಕಾಡೆಮಿ ಸಹಯೋಗದಲ್ಲಿ ಅಮ್ಮತ್ತಿ ಸರ್ಕಾರಿ ಪ್ರೌಢಶಾಲೆ ಮತ್ತು ಪ್ರಾಥಮಿಕ ಶಾಲಾ ಮೈದಾನದಲ್ಲಿ ನಡೆಯುತ್ತಿರುವ ಪೊರುಕೊಂಡ ಕ್ರಿಕೆಟ್ ಕಪ್‌ನಲ್ಲಿ ಮಚ್ಚಾರಂಡ ತಂಡವು ಜೋಡಿ ಗೆಲುವಿನ ಮಾಲೆ ಅಲಂಕರಿಸಿತು. ಪಟ್ಟಡ ಮತ್ತು ಪೊನ್ನಿಮಾಡ ತಂಡವನ್ನು ಮಣಿಸಿ ಈ ಸಾಧನೆ ಮಾಡಿತು.

ಕೊಳುವಂಡ, ಮೇಕೇರಿರ, ನಂದಿನೆರವಂಡ, ಕೊಟ್ಟಂಗಡ, ಚೆರ್‌ಮಂದಂಡ, ಮಾಳೇಟೀರ (ಕೆದಮುಳ್ಳೂರು), ಮಣವಟ್ಟೀರ, ಮಾಚಿಮಾಡ, ಚಾರಿಮಂಡ ಹಾಗೂ ಪುಟ್ಟಿಚಂಡ ತಂಡಗಳು ಗೆಲುವಿನ ಸಿಹಿ ಅನುಭವಿಸಿದವು.

ಕೊಳುವಂಡಕ್ಕೆ ತೀತೀರ (ಹರಿಹರ) ವಿರುದ್ಧ 32 ರನ್ ಜಯ ದೊರೆಯಿತು.

ಪಾಸುರ ತಂಡವು ಅಚ್ಚಾಂದೀರವನ್ನು 10 ವಿಕೆಟ್‌ಗಳಿಂದ ಮಣಿಸಿತು.

ಮೇಕೇರಿರ ತಂಡವು ಚೌರೀರ (ಹೊದ್ದೂರು) ತಂಡದ ವಿರುದ್ಧ 9 ವಿಕೆಟ್ ಗೆಲುವು ಪಡೆಯಿತು.

ನಂದಿನೆರವಂಡ ತಂಡವು ಬೊಳ್ಳೇರವನ್ನು 42 ರನ್‌ಗಳಿಂದ ಮಣಿಸಿತು.

ಕೊಟ್ಟಂಗಡಕ್ಕೆ ಚೆರುಮಂದಂಡ ವಿರುದ್ಧ 10 ವಿಕೆಟ್‌ಗಳ ಭರ್ಜರಿ ಜಯ ದೊರೆಯಿತು.

ಮಚ್ಚಾರಂಡವು ಪಟ್ಟಡವನ್ನು 23 ರನ್‌ಗಳಿಂದ ಮಣಿಸಿತು.

ಮಚ್ಚಾರಂಡ ತಂಡಕ್ಕೆ ಪೊನ್ನಿಮಾಡ ವಿರುದ್ಧ 19 ರನ್‌ಗಳ ಗೆಲುವು ದೊರೆಯಿತು.

ಚೆರ್‌ಮಂದಂಡ ತಂಡವು ನಾಪಂಡ ವಿರುದ್ಧ 1 ರನ್‌ಗಳ ರೋಚಕ ಗೆಲುವು ಪಡೆಯಿತು.

ಮಾಳೇಟೀರ (ಕೆದಮುಳ್ಳೂರು) ತಂಡಕ್ಕೆ ಕೊಳುವಂಡ ವಿರುದ್ಧ 10 ವಿಕೆಟ್‌ಗಳ ಜಯ ದೊರೆಯಿತು. ಮಣವಟ್ಟೀರಕ್ಕೆ ಪಾಸುರ ವಿರುದ್ಧ 14 ರನ್ ಗೆಲುವು ಲಭಿಸಿತು.

ಮಾಚಿಮಾಡ ತಂಡವು ಮಲ್ಲಂಡವನ್ನು 8 ವಿಕೆಟ್‌ಗಳಿಂದ ಸೋಲಿಸಿತು.

ಚಾರಿಮಂಡವು ನಾಟೋಳಂಡ ವಿರುದ್ಧ 1 ರನ್‌ಗಳ ರೋಚಕ ಗೆಲುವು ಪಡೆದುಕೊಂಡಿತು.

ಪುಟ್ಟಿಚಂಡ ತಂಡಕ್ಕೆ ತೀತೀರ (ಹರಿಹರ) ವಿರುದ್ಧ 7 ವಿಕೆಟ್ ಗೆಲುವು ಲಭಿಸಿತು.

ಪಂದ್ಯ ಶ್ರೇಷ್ಠರು: ತೀತಿರ ಸೊಹಾನ್ ನಾಣಯ್ಯ, ತೀತೀರ ನಾಣಯ್ಯ, ನಾಟೋಳಂಡ ರೋಹಿತ್, ಮಲ್ಲಂಡ ಮಧು, ಪಾಸುರ ಕಿಶೋರ್, ಕೊಳುವಂಡ ದರ್ಶನ್, ನಾಪಂಡ ದೀಪಕ್, ಪೊನ್ನಿಮಾಡ ರತನ್, ಪಟ್ಟಡ ಭರತ್, ಚೆರುಮಂದಂಡ ಪೂವಯ್ಯ, ಬೊಳ್ಳೇರ ಸುಹಾನ್, ಚೌರೀರ ಪೂವಣ್ಣ, ಅಚ್ಚಾಂದೀರ ಮನೋಜ್.



ಅಮ್ಮತ್ತಿ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ಬುಧವಾರ ನಡೆದ ಮಾಚಿಮಾಡ – ಮಲ್ಲಂಡ ತಂಡಗಳ ನಡುವಿನ ಪಂದ್ಯ

ಗುರುವಾರದ ಪಂದ್ಯಗಳು

ಮೈದಾನ 1 (ಪ್ರೌಢಶಾಲಾ ಮೈದಾನ)

7.30	ಐಚೆಟ್ಟೀರ – ಮತ್ತಾರಂಡ
8.30	ಕುಂಡಚ್ಚೀರ–ಕಲ್ಯಾಟಂಡ
9.30	ಕುಂಡ್ಯೋಳಂಡ–ಅಪ್ಪುಡ
10.30	ಉಡುವೇರ–ಕಾಯಪಂಡ
11.30	ಪೊರುಕೊಂಡ–ಅಯ್ಯಕುಟ್ಟೀರ
12.30	ಆಲೆಮಾಡ/ನಡಿಕೇರಿಯಂಡ –ಚೆಕ್ಕೇರ
1.30	ಅಜ್ಜಿಕುಟ್ಟೀರ–ಕೋಟ್ರಂಗಡ
2.00	ಐನಂಡ–ಮೇವಡ

ಮೈದಾನ 2 (ಪ್ರಾಥಮಿಕ ಶಾಲಾ ಮೈದಾನ)

8.00	ಆಲೆಮಾಡ–ನಡಿಕೇರಿಯಂಡ
9.00	ಪೊರಂಗಡ–ಕುಪ್ಪಂಡ (ನಾಂಗಾಲ)
10.00	ಮುಕ್ಕಾಟೀರ (ಹರಿಹರ) – ಚಿಟ್ಟೀರ
11.00	ಐಚೆಟ್ಟೀರ/ಮತ್ತಾರಂಡ – ಚೀಯಕ್‌ಪೂವಂಡ
12.00	ಕುಂಡಚ್ಚೀರ/ಕಲ್ಯಾಟಂಡ – ಬೊಳ್ಳಚೆಟ್ಟೀರ
1.00	ಕುಂಡ್ಯೋಳಂಡ/ಅಪ್ಪುಡ– ಬಲ್ಲಚಂಡ
2.00	ಪೋರಂಗಡ/ಕುಪ್ಪಂಡ (ನಾಂಗಾಲ) – ಮಂಡುವಂಡ

ವಿರಾಜಪೇಟೆಯಲ್ಲಿ ತಾಯಂದಿಯರ ದಿನಾಚರಣೆ



ವಿರಾಜಪೇಟೆ, ಮೇ 4– ಕುಟುಂಬದಲ್ಲಿ ತಾಯಿಯೇ ಮೊದಲ ಗುರು. ತಾಯಂದಿಯರು ಸಾಮಾಜಿಕ, ಅರ್ಥಿಕವಾಗಿ ಬೆಳೆದಾಗ ಅದು ದೇಶಕ್ಕೆ ಮಹತ್ವದ ಕೊಡುಗೆಯಾಗಲಿದ್ದು, ಸ್ತ್ರೀ ಶಕ್ತಿ, ಸ್ವ-ಸಹಾಯ ಸಂಘಟನೆಗಳ ಪಾತ್ರವು ಪ್ರಮುಖವಾದದ್ದು ಎಂದು ಶಾಸಕ ಕೆ.ಜಿ. ಬೋಪಯ್ಯ ಅಭಿಪ್ರಾಯಪಟ್ಟರು.

ಕೊಡಗು ಹಿಂದೂ ಮಲಯಾಳಿ ಮಹಿಳಾ ಅಸೋಸಿಯೇಷನ್‌ನಿಂದ ವಿರಾಜಪೇಟೆ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಆಯೋಜಿಸಿದ್ದ 'ತಾಯಂದಿಯರ ದಿನಾಚರಣೆ' ಸಮಾರಂಭದಲ್ಲಿ ಅವರು ಮಾತನಾಡಿದರು.

ಸ್ವಾವಲಂಬಿ, ಸ್ವಾಭಿಮಾನಿ ಎಂಬ ಪರಿಕಲ್ಪನೆಯೊಂದಿಗೆ ಹಿಂದೆ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಸ್ತ್ರೀ ಶಕ್ತಿ ಹಾಗೂ ಸ್ವ-ಸಾಹಯ ಸಂಘಗಳ ಒಕ್ಕೂಟ ರಚನೆಗೆ ನಾಂದಿ ಹಾಡಿದ ಬಳಿಕ ಮಹಿಳೆಯರು ಅರ್ಥಿಕವಾಗಿ ಬೆಳೆಯಲು ಅವಕಾಶ ನೀಡಲಾಯಿತು ಎಂದ ಬೋಪಯ್ಯ, ತಮ್ಮ ಅಚಾರ–ವಿಚಾರ, ಸಂಸ್ಕೃತಿಯನ್ನು ಉಳಿಸಿ–ಬೆಳೆಸಲು ತಾಯಂದಿರಿಂದ ಮಾತ್ರ ಸಾಧ್ಯ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಕೆಪಿಸಿಸಿ ಸದಸ್ಯ ಕದ್ದಣಿಯಂಡ ಹರೀಶ್ ಬೋಪಣ್ಣ ಮಾತನಾಡಿ, ತಾಯಿಯೇ ದೇವರು ಮನೆಯೇ ಮೊದಲ ಪಾಠಶಾಲೆ. ತಾಯಿ ಎಂಬ ಪದಕ್ಕೆ ವಿಶಿಷ್ಠ ಮಹತ್ವರವಾದ ಸ್ಥಾನವಿದ್ದು ಎಲ್ಲಾ ದೇವರಿಗಿಂತ ಮನೆಯಲ್ಲಿರುವ ತಾಯಿಗೆ ನಾವು ಶಿರ ಬಾಗಬೇಕು. ಹಿರಿಯರಿಗೆ ವಯಸ್ಸಾದ ನಂತರ ಮಕ್ಕಳಂತೆ ಹಠ ಹಿಡಿಯುತ್ತಾರೆ. ತೋಚಿದನ್ನು ಮಾತನಾಡುತ್ತಾರೆ. ನಾವು ಅದನ್ನು ಮನ್ನಿಸಿ ಅವರನ್ನು ಪೋಷಿಸಬೇಕು ಹಾಗೂ ಪ್ರತಿಯೊಬ್ಬರೂ ಹಿರಿಯರ ಆರೋಗ್ಯವನ್ನು ವಿಚಾರಿಸಿಕೊಳ್ಳುವಂತಾಗಬೇಕು ಎಂದರಲ್ಲದೆ. ತಾಯಂದಿಯರು ನಿತ್ಯ ಮಕ್ಕಳಿಗೆ ಒಳಿತಿನ ಹಾದಿ ತೋರಿದರೆ ಮಕ್ಕಳು ತಮ್ಮ ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದರು.

ಸಮಾರಂಭದಲ್ಲಿ 27 ಮಂದಿ ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನಿಸಿ ಗೌರವಿಸಲಾಯಿತು. ಮಹಿಳಾ ಒಕ್ಕೂಟದ ಅಧ್ಯಕ್ಷೆ ಶೀಬಾ ಪ್ರಥ್ವಿನಾಥ್ ಅಧ್ಯಕ್ಷತೆ ವಹಿಸಿದ್ದರು. ಅತಿಥಿಗಳಾಗಿ ಮಡಿಕೇರಿ ನಗರಸಭಾ ಸದಸ್ಯ ಕೊಡಗು ಹಿಂದೂ ಮಲಯಾಳಿ ಸಂಘದ ಅಧ್ಯಕ್ಷ ರಮೇಶ್, ಜಿಲ್ಲಾ ಎಸ್‌ಎನ್‌ಡಿಪಿ ಅಧ್ಯಕ್ಷ ಲೋಕೇಶ್, ಅಂತಾರಾಷ್ಟ್ರೀಯ ರಗ್ಬಿ ಆಟಗಾರ ಮಾದಂಡ ತಿಮ್ಮಯ್ಯ, ಅರ್ಜಿ ಗ್ರಾಪಂ ಸದಸ್ಯೆ ಸುನಿತಾ ಹರಿದಾಸ್, ಜಿಪಂ ಮಾಜಿ ಸದಸ್ಯೆ ಸುನಿತಾ, ಚೈತನ್ಯ ಮಠಪುರ ಮುತ್ತಪ್ಪ ದೇವಸ್ಥಾನ ಅಧ್ಯಕ್ಷ ಟಿ.ಕೆ.ರಾಜನ್, ಓಣಂ ಸಮಿತಿ ಅಧ್ಯಕ್ಷ ಟಿ.ಕೆ ಪದ್ಮನಾಭ, ಪಪಂ ಸದಸ್ಯ ಸಿ.ಕೆ ಪ್ರಥ್ವಿನಾಥ್ ಉಪಸ್ಥಿತರಿದ್ದರು.

ಪ್ಲಾಸ್ಟಿಕ್ ನಿಯಂತ್ರಣ ಜಾಗೃತಿಗಾಗಿ ಸೈಕ್ಲೋಥಾನ್

ಸ್ವತಃ ಸೈಕಲ್ ತುಳಿದ ಜಿಲ್ಲಾಧಿಕಾರಿ ಡಾ. ಬಿ.ಸಿ. ಸತೀಶ್



ಮಡಿಕೇರಿ, ಮೇ 4– ಪ್ಲಾಸ್ಟಿಕ್ ಬಳಕೆ ನಿಯಂತ್ರಣ ಸಂಬಂಧ ಜಾಗೃತಿ ಮೂಡಿಸಲು ಮಡಿಕೇರಿ ನಗರಸಭೆ, ಗ್ರೀನ್ ಸಿಟಿ ಫೋರಮ್ ಜಂಟಿ ಆಶ್ರಯದಲ್ಲಿ ನಗರದಲ್ಲಿ ಸೈಕ್ಲೋಥಾನ್ ಜಾಗೃತಿ ಜಾಥಾ ನಡೆಯಿತು. ಸ್ವತಃ ಜಿಲ್ಲಾಧಿಕಾರಿ ಡಾ. ಬಿ.ಸಿ. ಸತೀಶ್ ಅವರು ಸೈಕಲ್ ತುಳಿಯುವ ಮೂಲಕ ಜಾಥಾದಲ್ಲಿ ಭಾಗವಹಿಸಿದ್ದರು.

ನಗರದ ಫೀಲ್ಡ್ ಮಾರ್ಷಲ್ ವೃತ್ತದಿಂದ ಆರಂಭಗೊಂಡ ಸೈಕಲ್ ಜಾಥಾ, ಜನರಲ್ ತಿಮ್ಮಯ್ಯ ವೃತ್ತದಿಂದ ರಾಜಾಸೀಟು, ವಿಜಯ ವಿನಾಯಕ ದೇವಸ್ಥಾನ ಮಾರ್ಗದಲ್ಲಿ ಸಾಗಿ ಬಂದು ಹಳೆಯ ಖಾಸಗಿ ಬಸ್ ನಿಲ್ದಾಣದಲ್ಲಿ ಸಮಾವೇಶಗೊಂಡಿತು.

ನಗರದ ಬಹಳಷ್ಟು ಮಂದಿ ಸೈಕ್ಲಿಸ್ಟ್‌ಗಳು ಜಾಥಾದಲ್ಲಿ ಪಾಲ್ಗೊಂಡಿದ್ದರು. ಕ್ಲೀನ್ ಕೂರ್ಗ್ ಇನಿಶಿಯೇಟಿವ್ ಸದಸ್ಯರು ಮೂರ್ನಾಡಿನಿಂದ ಮಡಿಕೇರಿಗೆ ಸೈಕಲ್‌ನಲ್ಲಿಯೇ ಆಗಮಿಸಿ ಜಾಥಾದಲ್ಲಿ ಪಾಲ್ಗೊಂಡರು. ಪ್ಲಾಸ್ಟಿಕ್ ಬಳಕೆಯ ದುಷ್ಪರಿಣಾಮ ಸೇರಿದಂತೆ ನಗರದ ಸ್ವಚ್ಛತೆಯ ಕುರಿತು ಹಳೆಯ ಖಾಸಗಿ ಬಸ್ ನಿಲ್ದಾಣದಲ್ಲಿ ಜಾಗೃತಿ ಮೂಡಿಸಿದರು.

ಈ ಸಂದರ್ಭ ಜಿಲ್ಲಾಧಿಕಾರಿ ಡಾ.ಬಿ.ಸಿ. ಸತೀಶ್, ನಗರಸಭಾ ಅಧ್ಯಕ್ಷೆ ಅನಿತಾ ಪೂವಯ್ಯ, ಪೌರಾಯುಕ್ತ ರಾಮದಾಸ್, ಗ್ರೀನ್ ಸಿಟಿ ಫೋರಂನ ಚೇಯಂಡ, ಸತ್ಯ, ಮಾದೇಟಿರ ತಿಮ್ಮಯ್ಯ, ಚಿಣ್ಣಪ್ಪ, ಅಂಬೇಕಲ್ ನವೀನ್, ಕ್ಲೀನ್ ಕೂರ್ಗ್‌ನ ಅರುಣ್ ಅಪ್ಪಚ್ಚು ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ಇಂದು ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನಾಚರಣೆ

ಮಡಿಕೇರಿ, ಮೇ 4– ಮಡಿಕೇರಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಕನ್ನಡ ಸಾಹಿತ್ಯ ಪರಿಷತ್ತಿನ 107 ನೇ ಸಂಸ್ಥಾಪನಾ ದಿನಾಚರಣೆಯು ಮೇ 5 ರಂದು ಬೆಳಗ್ಗೆ 11 ಗಂಟೆಗೆ ನಗರದ ಕನ್ನಡ ಸಾಹಿತ್ಯ ಪರಿಷತ್ತಿನ ಕಚೇರಿಯಲ್ಲಿ ನಡೆಯಲಿದೆ.

ಕಾಫಿ ಬೆಳೆಗಾರನ ಮನೆಯಲ್ಲಿ ಕಳವು

ಸೋಮವಾರಪೇಟೆ, ಮೇ 4– ಇಲ್ಲಿನ ಬಾಣಾವಾರ ರಸ್ತೆಯ ನಿವಾಸಿ ಕಾಫಿ ಬೆಳೆಗಾರರೋರ್ವರ ಮನೆಯ ಕಿಟಕಿ ಸರಳು ಮುರಿದು ಒಳ ನುಗ್ಗಿ ಚಿನ್ನದ ಆಭರಣಗಳು ಮತ್ತು ನಗದು ಹಣವನ್ನು ಕಳವು ಮಾಡಿರುವ ಘಟನೆ ನಡೆದಿದೆ.

ಇಲ್ಲಿನ ನಿವಾಸಿ ಕಾಫಿ ಬೆಳೆಗಾರ ಎನ್.ಎನ್. ರಮೇಶ್ ಮತ್ತು ಕುಟುಂಬದವರು ಕಳೆದ ಏಪ್ರಿಲ್ 26 ರಂದು ಬೆಂಗಳೂರಿನಲ್ಲಿರುವ ತಮ್ಮ ಸಂಬಂಧಿಕರ ಮನೆಗೆ ತೆರಳಿದ್ದರು. ಮಂಗಳವಾರ ರಮೇಶ್ ಮನೆಗೆ ಬಂದು ನೋಡಿದಾಗ ಪ್ರಕರಣ ಬೆಳಕಿಗೆ ಬಂದಿದೆ.

ಮನೆಯ ಮಲಗುವ ಕೋಣೆಯ ಕಿಟಕಿಯ ಸರಳುಗಳನ್ನು ಮುರಿದ ಕಳ್ಳರು ಕಪಾಟಿನಲ್ಲಿಟ್ಟಿದ್ದ ಚಿನ್ನದ ಓಲೆ, ಒಂದು ಜೊತೆ ಮುತ್ತಿನ ಓಲೆ, ನಗದು ಹಣ ಅಪಹರಿಸಿದ್ದಾರೆ. ಈ ಕುರಿತು ಎನ್.ಎನ್. ರಮೇಶ್ ಕೊಟ್ಟ ದೂರಿನ ಅನ್ವಯ ಸೋಮವಾರಪೇಟೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಸಂಸ್ಕೃತಿ ಉಳಿಯಲು ಕ್ರೀಡೆ ಅತ್ಯಂತ ಸಹಕಾರಿ

ಕಾಫಿ ಬೆಳೆಗಾರ ಶ್ಯಾಮ್ ಪೂಣಚ್ಚ ಅಭಿಮತ



ಗೋಣಿಕೊಪ್ಪ, ಮೇ 4– ಸಂಸ್ಕೃತಿ ಉಳಿಯಲು ಕ್ರೀಡೆ ಅತ್ಯಂತ ಸಹಕಾರಿ ಎಂದು ಕಾಫಿ ಬೆಳೆಗಾರರಾದ ಚೋಡುಮಾಡ ಶ್ಯಾಮ್ ಪೂಣಚ್ಚ ಹೇಳಿದರು. ತಿತಿಮತಿ ಶಾಲಾ ಮೈದಾನದಲ್ಲಿ ಯರವ ಸಮಾಜದ ವತಿಯಿಂದ ಆಯೋಜನೆಗೊಂಡಿದ್ದ ಎವಲ್ಲಾತ್ಲೇರಂಡ ಕ್ರಿಕೆಟ್ ಕ್ರೀಡಾಕೂಟಕ್ಕೆ ವಿದ್ಯುಕ್ತವಾಗಿ ಚಾಲನೆ ನೀಡಿ ಅವರು ಮಾತನಾಡಿದರು.

ಯರವ ಸಮುದಾಯದವರು ಆಚಾರ ವಿಚಾರ ಸಂಸ್ಕೃತಿ ಎಂದಿಗೂ ಮರೆಯಬಾರದು. ಇದನ್ನು ಉಳಿಸುವ ನಿಟ್ಟಿನಲ್ಲಿ ಯುವ ಸಮುದಾಯ ಕಟಿಬದ್ಧರಾಗಿರಬೇಕು, ಸಂಸ್ಕೃತಿ ಉಳಿದರಷ್ಟೆ ಜನಾಂಗ ಉಳಿಯಲು ಸಾಧ್ಯ ಎಂದು ಹೇಳಿದರು.

ನಿಟ್ಟೂರು ಗ್ರಾಪಂ ಅಧ್ಯಕ್ಷ ಚಕ್ಕೇರ ಸೂರ್ಯ ಅಯ್ಯಪ್ಪ ಮಾತನಾಡಿ,'ಯುವಕರು ಜಾಗೃತಗೊಂಡು ಯರವ ಸಮುದಾಯವನ್ನು ಉಳಿಸುವ ಜವಾಬ್ದಾರಿ ನಿಭಾಯಿಸಬೇಕು ಎಂದು ಸಲಹೆ ನೀಡಿದರು.

10ನೇ ವರ್ಷದ ಕ್ರೀಡಾಕೂಟದ ಸವಿನೆನಪಿನಲ್ಲಿ ಶಾಲಾ ಆವರಣದಲ್ಲಿ ಸಸಿ ನೆಟ್ಟು ಮಾತನಾಡಿದ ಕರ್ನಾಟಕ ರೈತ ಸಂಘದ ಜಿಲ್ಲಾಧ್ಯಕ್ಷ ಕಾಡ್ಯಮಾಡ ಮನುಸೋಮಯ್ಯ, ವರ್ಷದಿಂದ ವರ್ಷಕ್ಕೆ ಯರವ ಕ್ರೀಡೋತ್ಸವ ಅದ್ಧೂರಿಯಾಗಿ ನಡೆಯುತ್ತಿದೆ. ನಾಡಿನ ಜನತೆ ಕ್ರೀಡೋತ್ಸವಕ್ಕೆ ಸಹಕಾರ ನೀಡಬೇಕು ಎಂದರು.

ಜಿಪಂ ಸದಸ್ಯೆ ಪಿ.ಆರ್.ಪಂಕಜ, ಜಿಪಂ ಮಾಜಿ ಸದಸ್ಯ' ವಿಜು ಸುಬ್ರಮಣಿ, ತಾಪಂ ಮಾಜಿ ಸದಸ್ಯ ಕುಟ್ಟಂಡ ಅಜಿತ್ ಕರುಂಬಯ್ಯ ಮಾತನಾಡಿದರು.

ಯರವ ಸಮಾಜದ ಅಧ್ಯಕ್ಷ ವೈ.ಎಂ. ರವಿ ಅಧ್ಯಕ್ಷತೆ ವಹಿಸಿದ್ದರು. ಚೆನ್ನಂಗಿ ಗ್ರಾಪಂ ಅಧ್ಯಕ್ಷ ವಿ.ವಿ.ವೇಣುಕುಮಾರ್, ಯರವ ಸಂಘದ ಪದಾಧಿಕಾರಿಗಳಾದ ಸಿದ್ದಪ್ಪ, ಪ್ರವೀಣ್, ನಿತೀನ್, ಅಶೋಕ್, ವಿನು, ಸಂಜು, ರಘು, ಕಾಳ, ಸೋಮ, ಮಲ್ಲಪ್ಪ, ಪವಿ, ಶಶಿ, ಗಣೇಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಜಿಲ್ಲೆಯ ವಿವಿಧೆಡೆ ಕೋಟ್ಪಾ ದಾಳಿ: 28,600 ರೂ. ದಂಡ ವಸೂಲಿ

ಚಾಮರಾಜನಗರ, ಮೇ 4– ಜಿಲ್ಲಾ ತಂಬಾಕು ನಿಯಂತ್ರಣಾ ಕೋಶ, ಜಿಲ್ಲಾ ಕಣ್ಗಾವಲು ಘಟಕ ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಸಿಗರೇಟು ಮತ್ತು ಇತರೆ ತಂಬಾಕು ಉತ್ಪನ್ನಗಳ ಕಾಯ್ದೆಯನ್ನು ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ಕೋಟ್ಪಾ ತನಿಖಾ ತಂಡದ ಸಹಯೋಗದೊಂದಿಗೆ ಏಪ್ರಿಲ್ ತಿಂಗಳಲ್ಲಿ ಕೋಟ್ಪಾ ದಾಳಿಯನ್ನು ಜಿಲ್ಲೆಯ ವಿವಿಧ ಭಾಗಗಳಲ್ಲಿ ನಡೆಸಲಾಗಿದೆ.

ಕೋಟ್ಪಾ ದಾಳಿಯ ವೇಳೆ ನಿಯಮ ಉಲ್ಲಂಘನೆ ಮಾಡಿ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದ ಅಂಗಡಿಗಳು, ಕೋಟ್ಪಾ ಸೆಕ್ಷನ್–4 ಎಚ್ಚರಿಕೆ ನಾಮ ಫಲಕವನ್ನು ಪ್ರದರ್ಶಿಸದ ಹೋಟೆಲ್, ಬಾರ್ ಅಂಡ್ ರೆಸ್ಟೋರೆಂಟ್‌ಗಳು, ಟೀ ಸ್ಟಾಲ್, ಚಿಲ್ಲರೆ ಅಂಗಡಿಗಳು ಹಾಗೂ ಇತರೆ ಅಂಗಡಿಗಳು, ಕೋಟ್ಪಾ ಸೆಕ್ಷನ್–6(ಎ) ನಾಮಫಲಕ ಪ್ರದರ್ಶಿಸದ ತಂಬಾಕು ಮಾರಾಟವಿರುವ ಅಂಗಡಿಗಳು, ಶಿಕ್ಷಣ ಸಂಸ್ಥೆಯ 100 ಗಜಗಳ ಅಂತರದ ಒಳಗೆ ತಂಬಾಕು ಪದಾರ್ಥಗಳನ್ನು ಮಾರಾಟ ಮತ್ತು ಸೇವನೆಗೆ ಉತ್ತೇಜನ ನೀಡುವ ಅಂಗಡಿಗಳಿಗೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುತ್ತಿದ್ದ ವ್ಯಕ್ತಿಗಳಿಗೆ ಸ್ಥಳದಲ್ಲೇ ಕೋಟ್ಪಾ–2003ರಡಿ ಪ್ರಕರಣ ದಾಖಲಿಸಿ ದಂಡ ವಿಧಿಸಲಾಯಿತು.

ಕರಪತ್ರ ವಿತರಿಸಿ ತಂಬಾಕು ಸೇವನೆಯಿಂದ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮಗಳು ಮತ್ತು ತಂಬಾಕು ನಿಯಂತ್ರಣ ಕಾಯ್ದೆ ಕೋಟ್ಪಾ–2003ರ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು.

ಕೊಳ್ಳೇಗಾಲ ತಾಲೂಕಿನ ಜಕ್ಕಳಿ, ಗುಂಡ್ಲುಪೇಟೆ ತಾಲೂಕಿನ ಕೂತನೂರು, ಕನ್ನೇಗಾಲ ಮತ್ತು ಭೀಮನಬೀಡು, ಯಳಂದೂರು ಮತ್ತು ಹನೂರು ಪಟ್ಟಣ ವ್ಯಾಪ್ತಿಯಲ್ಲಿ ದಾಳಿ ನಡೆಸಿದ ವೇಳೆ ಕೋಟ್ಪಾ–2003 ರಡಿ ಒಟ್ಟು 169 ಪ್ರಕರಣ ದಾಖಲಿಸಲಾಗಿದ್ದು, 28,600 ರೂ.ಗಳ ದಂಡ ವಿಧಿಸಲಾಗಿದೆ. ಮುಂದಿನ ದಿನಗಳಲ್ಲಿ ಜಿಲ್ಲೆಯಾದ್ಯಂತ ದಾಳಿ ನಡೆಸಲಾಗುವುದು. ಜಿಲ್ಲೆಯಲ್ಲಿರುವ ಎಲ್ಲಾ ಸಾರ್ವಜನಿಕ ಸ್ಥಳದ ಮಾಲೀಕರು, ಮುಖ್ಯಸ್ಥರು ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ಕೋಟ್ಪಾ ಕಾಯ್ದೆ ಉಲ್ಲಂಘನೆಯಾಗದಂತೆ ಕಟ್ಟೆಚ್ಚರ ವಹಿಸಬೇಕು ಎಂದು ಜಿಲ್ಲಾ ತಂಬಾಕು ನಿಯಂತ್ರಣ ಘಟಕ ಕಾರ್ಯಕ್ರಮಾಧಿಕಾರಿ ತಿಳಿಸಿದ್ದಾರೆ.

ಸ್ಮಾರಕವಾಯ್ತು ಡಿಸಿಎಫ್ ಪಿ.ಶ್ರೀನಿವಾಸ್ ಬಳಸುತ್ತಿದ್ದ ಜೀಪ್...!

ಹುತಾತ್ಮ ಅಧಿಕಾರಿಗೆ ಅರಣ್ಯ ಇಲಾಖೆಯಿಂದ ವಿಶಿಷ್ಟ ಗೌರವ



ಚಾಮರಾಜನಗರ, ಮೇ 4– ಕಾಡುಗಳ್ಳ ವೀರಪ್ಪನ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡು ಆತನ ಮೋಸಕ್ಕೆ ಬಲಿಯಾದ ಐಎಫ್‌ಎಸ್ ಅಧಿಕಾರಿ ಪಿ.ಶ್ರೀನಿವಾಸ್ ಬಳಸಿದ್ದ ಜೀಪು ಇದೀಗ ಕೊಳ್ಳೇಗಾಲದಲ್ಲಿರುವ ಮಲೆಮಹದೇಶ್ವರ ವನ್ಯಜೀವಿಧಾಮ ಕಚೇರಿ ಆವರಣದಲ್ಲಿ ಸ್ಮಾರಕ ರೂಪ ಪಡೆದಿದೆ.

ಪಾಲಾರ್ ಆರ್‌ಎಫ್‌ಒ ಕಚೇರಿ ಸಮೀಪ ಹತ್ತಾರು ವರ್ಷಗಳಿಂದ ಅನಾಥವಾಗಿ ನಿಂತಿದ್ದ ಜೀಪ್‌ಗೆ ಎಂಎಂಹಿಲ್ಸ್ ಡಿಸಿಎಫ್ ಏಡುಕೊಂಡಲು ಮರುಜೀವ ಕೊಟ್ಟಿದ್ದಾರೆ. ಜೀಪನ್ನು ರಿಪೇರಿ ಮಾಡಿಸಿ ಮತ್ತೆ ಸುಸ್ಥಿತಿಗೆ ತಂದು ಅದನ್ನು ಸಂರಕ್ಷಿಸಿಡಲಾಗಿದೆ. ಜೊತೆಗೆ ಶ್ರೀನಿವಾಸ್ ಅವರಿಗೆ ಸಂಬಂಧಿಸಿದ ಎಲ್ಲಾ ಮಾಹಿತಿಗಳು ದೊರೆಯಬೇಕೆಂಬ ದೃಷ್ಟಿಯಿಂದ ಅತಿಥಿ ಗೃಹದ ಮೊದಲ ಮಹಡಿಯಲ್ಲಿ ಅವರ ಹೆಸರಿನಲ್ಲಿ ಗ್ರಂಥಾಲಯ ತೆರೆದಿದ್ದಾರೆ.

ಶ್ರೀನಿವಾಸ್ ಅವರು ವಿವಿಧ ಕಡೆ ಸೇವೆ ಸಲ್ಲಿಸಿದ ಫೋಟೋಗಳು, ಕಾಡುಗಳ್ಳ ವೀರಪ್ಪನ್ ಹುಟ್ಟೂರು ಗೋಪಿನಾಥಂನಲ್ಲಿ ಬಡವರಿಗಾಗಿ ನಿರ್ಮಿಸಿಕೊಟ್ಟ ಮನೆಗಳು, ದೇವಾಲಯ, ಎಸ್‌ಟಿಎಫ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದು... ಹೀಗೆ ಎಲ್ಲಾ ರೀತಿಯ ಭಾವಚಿತ್ರಗಳು ಹಾಗೂ ಅವರಿಗೆ ಸಂಬಂಧಿಸಿದ ಸಾಹಿತ್ಯ, ಬರಹಗಳ ದಾಖಲೆಗಳನ್ನು ಇಲ್ಲಿ ಸಂಗ್ರಹಿಸಿಡಲಾಗಿದೆ.

ವೀರಪ್ಪನ್ ಮರೆಯಾದರೂ ಶ್ರೀನಿವಾಸನ್ ಅಮರ: ಪಿ. ಶ್ರೀನಿವಾಸನ್ ಮಹಾತ್ಮ ಗಾಂಧೀಜಿ, ವಿನೋಬಾ ಭಾವೆಯಿಂದ ಪ್ರಭಾವಿತರಾಗಿ ಕಾಡುಗಳ್ಳನನ್ನು ಅಹಿಂಸೆಯಿಂದ ಬದಲಾಯಿಸುತ್ತೇನೆ ಎಂದು ವೀರಪ್ಪನ್ ಕಾರ್ಯಾಚರಣೆಗೆ ಸ್ವಯಂ ಪ್ರೇರಣೆಯಿಂದ ಬಂದಿದ್ದ ಐಎಫ್‌ಎಸ್ ಅಧಿಕಾರಿ. ದಂತಚೋರ ವೀರಪ್ಪನ್ ಕೇವಲ ಒಂದು ಬಾರಿ ಮಾತ್ರ ಪೊಲೀಸರಿಗೆ ಸೆರೆಸಿಕ್ಕಿದ್ದ. 1980 ರಲ್ಲಿ ಬೆಂಗಳೂರು ಸಾರ್ಕ್ ಸಮ್ಮೇಳನ ನಡೆಯುವ ವೇಳೆ ವೀರಪ್ಪನ್‌ನನ್ನು ಬಂಧಿಸಿ ಅರಣ್ಯ ಇಲಾಖೆಗೆ ಬೆಂಗಳೂರಿನ ಅಧಿಕಾರಿಗಳು ಡಿಎಫ್‌ಒ ಶ್ರೀನಿವಾಸನ್‌ಗೆ ಒಪ್ಪಿಸಿದ್ದರು. ಚಾಮರಾಜನಗರದ ಬೂದಿಪಡಗ ಗೆಸ್ಟ್ ಹೌಸ್‌ನಲ್ಲಿ 3 ದಿನ ವಿಚಾರಣೆಗಿಡಲಾಗಿತ್ತು. ಶ್ರೀನಿವಾಸನ್ ರೌಂಡ್ಸ್‌ಗೆ ಹೋದ ವೇಳೆ ಗೆಸ್ಟ್‌ಹೌಸ್‌ನಿಂದ ಪರಾರಿಯಾದ ವೀರಪ್ಪನ್, ಇನ್ನೆಂದು ಪೊಲೀಸರಿಗಾಗಲಿ, ಅರಣ್ಯಾಧಿಕಾರಿಗಳಿಗಾಗಲಿ ಜೀವಂತವಾಗಿ ಸಿಗಲಿಲ್ಲ.

ಶರಣಾಗುತ್ತೇನೆಂದು ಸಂಚು: ಶರಣಾಗುತ್ತೇನೆಂದು ಸಂಚು ರೂಪಿಸಿದ ವೀರಪ್ಪನ್, ಡಿಸಿಎಫ್ ಶ್ರೀನಿವಾಸನ್ ಅವರನ್ನು 1991 ನ.10ರಂದು ಗೋಪಿನಾಥಂನಿಂದ ಅಣತಿ ದೂರದ ನಲ್ಲೂರು ಬಳಿ ತಲೆ ಕತ್ತರಿಸಿ ಬರ್ಬರವಾಗಿ ಕೊಂದು ಹಾಕಿದ್ದ. ಈ ಮೂಲಕ ಕಾಡುಗಳ್ಳನನ್ನು ಬದಲಿಸುತ್ತೇನೆಂಬ ವಿಶ್ವಾಸವೇ ಶ್ರೀನಿವಾಸನ್ ಅವರಿಗೆ ಮುಳುವಾಗಿತ್ತು.

ಅಪ್ಪಟ ಗಾಂಧಿವಾದಿಯಾಗಿದ್ದ ಪಿ.ಶ್ರೀನಿವಾಸ್, ವೀರಪ್ಪನ್ ಊರಾದ ಗೋಪಿನಾಥಂನಲ್ಲಿ ಜನರಿಗೆ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಮಾರಿಯಮ್ಮ ದೇಗುಲ ನಿರ್ಮಿಸಿ ಕೊಟ್ಟಿದ್ದು, ಇಂದಿಗೂ ಅವರ ಫೋಟೋ ಗ್ರಾಮದ ಪ್ರತಿಯೊಬ್ಬರ ಮನೆಗಳಲ್ಲೂ ಇದೆ. ಮಾರಿಯಮ್ಮ ದೇವಾಲಯದಲ್ಲಿ ಶ್ರೀನಿವಾಸ್ ಅವರಿಗೇ ಪ್ರಥಮ ಪೂಜೆ ನಡೆಯುತ್ತಿದೆ. ಸರ್ಕಾರಿ ಅಧಿಕಾರಿ ಯೊಬ್ಬರು ಉತ್ತಮವಾಗಿ ಕರ್ತವ್ಯ ನಿರ್ವಹಿಸಿದರೆ ಜನ ಹಾಗೂ ಇಲಾಖೆ ಎಂದಿಗೂ ಮರೆಯುವುದಿಲ್ಲ ಎಂಬುದಕ್ಕೆ ಶ್ರೀನಿವಾಸ್ ಉತ್ತಮ ಉದಾಹರಣೆ.

ಸೂರ್ಯನ ಸುತ್ತ ಉಂಗುರ



ಚಾಮರಾಜನಗರ, ಮೇ 4(ಎಸ್‌ಎಸ್) – ಜಿಲ್ಲೆಯ ವಿವಿಧ ಭಾಗಗಳಲ್ಲಿ ಬುಧವಾರ ಆಗಸದಲ್ಲಿ ಸೂರ್ಯನ ಸುತ್ತ ಬಣ್ಣಗಳಿಂದ ಕೂಡಿದ ವೃತ್ತಾಕಾರದ ರಚನೆ ಗೋಚರಿಸಿದೆ. ಬೆಳಗ್ಗೆ 11ರಿಂದ 11.45ರವರೆಗೆ ಈ ಕೌತುಕ ವಿದ್ಯಮಾನ ಕಂಡುಬಂತು. ಇದನ್ನು ಕಂಡ ಜನರು ಅಚ್ಚರಿ ವ್ಯಕ್ತಪಡಿಸಿದರಲ್ಲದೇ ತಮ್ಮ ಮೊಬೈಲ್‌ನಲ್ಲಿ ಸೆರೆ ಹಿಡಿದರು. ಸೂರ್ಯನ ಸುತ್ತಲೂ ಆವರಿಸಿರುವ ಮೋಡದಲ್ಲಿರುವ ಮಂಜಿನ ಹರಳುಗಳ ಮೇಲೆ ಬೆಳಕು ಬಿದ್ದು, ವಕ್ರೀಭವನಗೊಂಡಾಗ ಕಾಮನ ಬಿಲ್ಲಿನ ಮಾದರಿಯಲ್ಲಿ ಬಣ್ಣಗಳನ್ನು ಹೊಂದಿರುವ ವೃತ್ತ ಗೋಚರಿಸಿದೆ. ಕಳೆದ ವರ್ಷ ಮೇನಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ ಇದೇ ರೀತಿಯ ಕೌತುಕ ಗೋಚರಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಗ್ರಾಪಂ ನಿರ್ಲಕ್ಷ್ಯ: ಕಬ್ಬಳ್ಳಿಯಲ್ಲಿ ಸ್ವಚ್ಛತೆ ಮರೀಚಿಕೆ



ಗುಂಡ್ಲುಪೇಟೆ, ಮೇ 4(ಸೋಮ್.ಜಿ)– ತಾಲೂಕಿನ ಕಬ್ಬಳ್ಳಿ ಗ್ರಾಪಂ ನಿರ್ಲಕ್ಷ್ಯದಿಂದ ಗ್ರಾಮದ ಎಲ್ಲಾ ಚರಂಡಿಗಳು ತುಂಬಿದ್ದು, ಗಬ್ಬೆದ್ದು ನಾರುತ್ತಿವೆ. ಮಳೆಗಾಲಕ್ಕೂ ಮೊದಲು ಚರಂಡಿಯಲ್ಲಿನ ತ್ಯಾಜ್ಯ ತೆರವುಗೊಳಿಸಿ ಗ್ರಾಮದ ನೈರ್ಮಲ್ಯ ಕಾಪಾಡುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ. ಗ್ರಾಪಂ ಆಡಳಿತದ ನಿರ್ಲಕ್ಷ್ಯ ಹಾಗೂ ನಿರ್ವಹಣೆ ಕೊರತೆಯಿಂದ ಗ್ರಾಮದ ಚರಂಡಿ ಗಳು ತ್ಯಾಜ್ಯ ತುಂಬಿ ಅಶುಚಿತ್ವ ತಾಂಡ ವಾಡುತ್ತಿದೆ. ಸೊಳ್ಳೆ ಕಾಟ, ದುರ್ವಾಸನೆಯಿಂದ ಗ್ರಾಮದ ನಿವಾಸಿಗಳು ಸಾಂಕ್ರಾಮಿಕ ಕಾಯಿಲೆ ಹರಡುವ ಭೀತಿಯಲ್ಲಿದ್ದಾರೆ.

ಚರಂಡಿ ಸ್ವಚ್ಛತೆ ಮಾಡುವ ಕುರಿತು ಗ್ರಾಮ ಪಂಚಾಯಿತಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಿಗೆ ಎಷ್ಟೇ ಮನವಿ ಮಾಡಿದರೂ ಪ್ರಯೋಜನವಾಗದ ಕಾರಣ ಶ್ರೀಕಾಳಿಕಾಂಬ ದೇವಸ್ಥಾನ ಬೀದಿಯ ನಿವಾಸಿಗಳೇ ತಮ್ಮ ಬೀದಿಯ ಚರಂಡಿಗಳಲ್ಲಿನ ತ್ಯಾಜ್ಯ ತೆರವುಗೊಳಿಸಿ ಸರಾಗವಾಗಿ ನೀರು ಹರಿದು ಹೋಗುವಂತೆ ಮಾಡಿದರು. ಇದೇ ರೀತಿ ಗ್ರಾಮದ ಮುಖ್ಯ ಬೀದಿ ಗಳಲ್ಲೂ ಅಸಮರ್ಪಕ ನಿರ್ವಹಣೆಯಿಂದ ಚರಂಡಿಗಳು ತುಂಬಿ ಕೊಂಡಿದ್ದು, ಕೂಡಲೇ ಗ್ರಾಪಂ ಆಡಳಿತ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ರಾಮಸಮುದ್ರ, ಬದನಗುಪ್ಪೆ, ಆಲೂರಲ್ಲಿ ಬಸವ ಜಯಂತಿ



ಚಾಮರಾಜನಗರ, ಮೇ 4(ಎಸ್‌ಎಸ್)– ನಗರದ ಅಲ್ಲಲ್ಲಿ ಹಾಗೂ ತಾಲೂಕಿನ ಅನೇಕ ಗ್ರಾಮಗಳಲ್ಲಿ ಬಸವ ಜಯಂತಿಯನ್ನು ಆಚರಿಸಲಾಯಿತು.

ರಾಮಸಮುದ್ರ: ನಗರದ ರಾಮಸಮುದ್ರದಲ್ಲಿ ಬಸವ ಜಯಂತಿ ಅಂಗವಾಗಿ ಶ್ರೀ ಬಸವೇಶ್ವರರ ಭಾವಚಿತ್ರದ ಮೆರವಣಿಗೆಯು ಅದ್ಧೂರಿಯಾಗಿ ಮಂಗಳವಾರ ರಾತ್ರಿ ನಡೆಯಿತು. ಶ್ರೀಬಸವ ಮಂದಿರದಿಂದ ಆರಂಭವಾದ ಮೆರವಣಿಗೆಯು ಪ್ರಮುಖ ಬೀದಿಗಳಲ್ಲಿ ಜರುಗಿತು. ಈ ವೇಳೆ ಸಾರ್ವಜನಿಕರು ಬಸವೇಶ್ವರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ವೀರಗಾಸೆ, ಬ್ಯಾಂಡ್‌ಸೆಟ್, ಮಂಗಳವಾದ್ಯ ಕಲಾ ತಂಡಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವು. ಶ್ರೀಗುರುಕಂಬಳೇಶ್ವರ ವಿರಕ್ತ ಮಠದ ಮಠಾಧ್ಯಕ್ಷರಾದ ಶ್ರೀಮಹದೇವ ಸ್ವಾಮೀಜಿ ಅವರ ಅಧ್ಯಕ್ಷತೆಯಲ್ಲಿ ಬಸವ ಜಯಂತಿ ನಡೆಯಿತು.

ಬದನಗುಪ್ಪೆ: ಚಾಮರಾಜನಗರ ತಾಲೂಕಿನ ಬದನಗುಪ್ಪೆ ಗ್ರಾಮದಲ್ಲಿ ಬಸವ ಜಯಂತಿ ಅಂಗವಾಗಿ ಶ್ರೀಬಸವೇಶ್ವರರು ಹಾಗೂ ಸಿದ್ಧಗಂಗಾ ಮಠದ ಡಾ.ಶ್ರೀ ಶಿವಕುಮಾರ ಸ್ವಾಮೀಜಿ ಅವರ ಭಾವಚಿತ್ರದ ಮೆರವಣಿಗೆಯನ್ನು ಅದ್ಧೂರಿಯಾಗಿ ನೆರವೇರಿಸಲಾಯಿತು.

ಹಬ್ಬದ ಅಂಗವಾಗಿ ಗ್ರಾಮದ ಮುಖ್ಯ ರಸ್ತೆ ಹಾಗೂ ಪ್ರಮುಖ ಬೀದಿಗಳಲ್ಲಿ ಹಸಿರು ತೋರಣ ಕಟ್ಟಿ ಶೃಂಗರಿಸಲಾಗಿತ್ತು. ನಂದಿ ಧ್ವಜ, ವೀರಗಾಸೆ, ಬ್ಯಾಂಡ್‌ಸೆಟ್, ತಮಟೆ, ಮಂಗಳವಾದ್ಯ ಹಾಗೂ ಗ್ರಾಮದ ಬಸಪ್ಪ ದೇವರು ಸೇರಿದಂತೆ ವಿವಿಧ ಕಲಾ ತಂಡಗಳು ಪಾಲ್ಗೊಂಡಿದ್ದವು.

ಮೆಡಿಕಲ್ ಕಾಲೇಜು: ನಗರದ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧನಾ ಆಸ್ಪತ್ರೆಯಲ್ಲಿ ಬಸವೇಶ್ವರರ ಜಯಂತಿ ಆಚರಿಸಲಾಯಿತು. ಸಂಸ್ಥೆಯ ಮುಖ್ಯಸ್ಥ ಡಾ.ಜಿ.ಎಂ.ಸಂಜೀವ್ ಅವರು ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ನಂತರ ಸಾರ್ವಜನಿಕರಿಗೆ ಅನ್ನ ಸಂತರ್ಪಣೆ ನಡೆಯಿತು.

ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ಶ್ರೀನಿವಾಸ, ನಿವಾಸಿ ವೈದ್ಯರಾದ ಡಾ.ಕೃಷ್ಣಪ್ರಸಾದ, ಅರವಳಿಕೆ ತಜ್ಞ ಡಾ.ಮಹೇಶ್, ವೈದ್ಯರಾದ ಡಾ.ನವೀನ್‌ಚಂದ್ರ, ಡಾ.ಅಜಯ್, ಡಾ.ಶರತ್‌ಕುಮಾರ್ ಇತರರು ಇದ್ದರು.

ಆಲೂರು: ಚಾಮರಾಜನಗರ ತಾಲೂಕಿನ ಆಲೂರು ಗ್ರಾಮದಲ್ಲಿ ಶ್ರೀಬಸವೇಶ್ವರರ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಗ್ರಾಮದ ಬಸವ ಭವನದಲ್ಲಿ ಶ್ರೀಬಸವೇಶ್ವರರ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಲಾಯಿತು. ಈ ವೇಳೆ ಮುಖಂಡ ಎ.ಎಸ್.ನಾಗರಾಜು, ಶ್ರೀಬಸವೇಶ್ವರರ ಯುವಕ ಸಂಘದ ಸದಸ್ಯರು ಹಾಜರಿದ್ದರು.

ಭಾವೈಕ್ಯತೆ ಸಂಕೇತವಾದ ಬಸವ ಜಯಂತಿ



ಬಸವೇಶ್ವರರ ಭಾವಚಿತ್ರದ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವರಿಗೆ ಮುಸ್ಲಿಂ ಮುಖಂಡರು ನೀರು, ಜ್ಯೂಸ್ ಬಾಟಲ್ ಅನ್ನು ವಿತರಿಸಿದರು.

ಯಳಂದೂರು, ಮೇ 4(ವಿ.ನಾಗರಾಜು)– ಬಸವ ಜಯಂತಿಯ ಅಂಗವಾಗಿ ಪಟ್ಟಣದಲ್ಲಿ ಮಂಗಳವಾರ ನಡೆದ ಬಸವೇಶ್ವರರ ಭಾವಚಿತ್ರದ ಮೆರಣಿಗೆಯಲ್ಲಿ ಹಿಂದೂ–ಮುಸ್ಲಿಂ ಬಾಂಧವರು ಪಾಲ್ಗೊಂಡು ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು. ಈ ಮೂಲಕ ಪಟ್ಟಣದಲ್ಲಿ ಜಗಜ್ಯೋತಿ ಬಸವೇಶ್ವರರ ಜಯಂತಿ ಭಾವೈಕ್ಯತೆ ಸಂಕೇತಕ್ಕೆ ಸಾಕ್ಷಿಯಾಯಿತು.

ರಂಜಾನ್ ಹಾಗೂ ಬಸವ ಜಯಂತಿ ಒಂದೇ ದಿನ ಆಚರಿಸುತ್ತಿರುವುದರಿಂದ ಪಟ್ಟಣದೆಲ್ಲೆಡೆ ಸಂಭ್ರಮ ಮನೆ ಮಾಡಿತ್ತು. ಮುಸ್ಲಿಂ ಮುಖಂಡರು ಈದ್ಗಾ ಮೈದಾನ ಹಾಗೂ ಪ್ರಾರ್ಥನೆ ಸಲ್ಲಿಸಿ ಸಡಗರದಿಂದ ಹಬ್ಬ ಆಚರಿಸಿದರು. ಬಳಿಕ, ಪಟ್ಟಣದ ಮಸೀದಿಯ ಸಮೀಪ ಬಸವೇಶ್ವರರ ಭಾವಚಿತ್ರದ ಮೆರವಣಿಗೆ ಬರುತ್ತಿದ್ದಂತೆ ಮುಸ್ಲಿಂ ಸಮುದಾಯದ ಧರ್ಮಗುರುಗಳು ಹಾಗೂ ಸಮುದಾಯದವರು ಬಸವ ಜಯಂತಿಯ ಮೆರವಣಿಗೆಯಲ್ಲಿ ಪಾಲ್ಗೊಂಡು ಮೆರವಣಿಗೆಗೆ ಮೆರಗು ತಂದರು. ಈ ವೇಳೆ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಹಿಂದೂ ಬಾಂಧವರಿಗೆ ನೀರು, ಜ್ಯೂಸ್ ಬಾಟಲ್ ವಿತರಿಸಿದರು.

ನಂತರ ಹಿಂದೂ ಹಾಗೂ ಮುಸ್ಲಿಂ ಸಮುದಾಯದ ಮುಖಂಡರು ಪರಸ್ಪರ ಬಸವ ಜಯಂತಿ ಹಾಗೂ ರಂಜಾನ್ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡು ಭಾವೈಕ್ಯತೆ ಮೆರೆದರು.

ಬಸವೇಶ್ವರರ ಭಾವಚಿತ್ರದ ಅದ್ಧೂರಿ ಮೆರವಣಿಗೆ: ಪಟ್ಟಣದಲ್ಲಿ ತಾಲೂಕು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಬಸವ ಜಯಂತಿ ಅಂಗವಾಗಿ ಶ್ರೀ ಬಸವೇಶ್ವರರ ಭಾವಚಿತ್ರವನ್ನು ಬೆಳ್ಳಿ ರಥದಲ್ಲಿರಿಸಿ ಪಟ್ಟದ ಪ್ರಮುಖ ರಸ್ತೆಗಳಲ್ಲಿ ವಿವಿಧ ಜನಪದ ಕಲಾ ತಂಡಗಳೊಂದಿಗೆ ಅದ್ಧೂರಿಯಾಗಿ ಮೆರವಣಿಗೆ ನೆರವೇರಿಸಲಾಯಿತು.

ಶಾಸಕ ಎನ್.ಮಹೇಶ್ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ನಂದಿ ಕಂಬಕ್ಕೆ ಪೂಜೆ ಸಲ್ಲಿಸಿ ಮೆರವಣಿಗೆಗೆ ಚಾಲನೆ ನೀಡಿದರು. ವಿವಿಧ ಗ್ರಾಮಗಳಿಂದ ಆಗಮಿಸಿದ ನೂರಾರು ಜನರು ಎತ್ತುಗಳಿಗೆ ಹೂಗಳಿಂದ ಸಿಂಗರಿಸಿದ ಎತ್ತುಗಾಡಿ ಕಟ್ಟಿಕೊಂಡು ಮೆರವಣಿಗೆಯಲ್ಲಿ ಪಾಲ್ಗೊಂಡರು.

ಈ ಸಂದರ್ಭದಲ್ಲಿ ಪಪಂ ಅಧ್ಯಕ್ಷೆ ಪ್ರಭಾವತಿ ರಾಜಶೇಖರ್, ಉಪಾಧ್ಯಕ್ಷೆ ಲಕ್ಷ್ಮೀ ಮಲ್ಲು ತಹಸೀಲ್ದಾರ್ ಆನಂದಪ್ಪ ನಾಯಕ್, ಇಓ ಉಮೇಶ್, ಬಿಇಓ ಕೆ.ಕಾಂತರಾಜು, ಬಿಸಿಓ ಮಲ್ಲಿಕಾರ್ಜುನ, ಮುಖ್ಯಾಧಿಕಾರಿ ಮಲ್ಲೇಶ್, ಸದಸ್ಯರಾದ ಮಹೇಶ್, ರಂಗನಾಥ್, ನಾಮನಿರ್ದೇಶನ ಸದಸ್ಯರಾದ ಮಹೇಶ್, ರಘುನಾಯಕ್, ನಿಂಗಣ್ಣ, ತಾಲೂಕು ಕರ್ನಾಟಕ ರಾಜ್ಯ ಸರ್ಕಾರಿ ನೌಕರ ಸಂಘ ಅಧ್ಯಕ್ಷ ಮಂಜುನಾಥ್, ಮುಖಂಡ ಪುಟ್ಟಸುಬ್ಬಪ್ಪ, ವಿವಿಧ ಗ್ರಾಮ ವೀರಶೈವ ಸಮಾಜದ ಯಜಮಾನರು, ಯುವಕರು, ಗ್ರಾಮಸ್ಥರು ಮೆರವಣಿಗೆಯಲ್ಲಿದ್ದರು.

ಒಂದನೇ ಪುಟದಿಂದ

ಹೈಕಮಾಂಡ್ ನಿರ್ಧಾರ

ಕರ್ತವ್ಯವನ್ನು ನಾನು ಎಂದಿಗೂ ಮರೆಯುವುದಿಲ್ಲ. ಒಂದು ವರ್ಷದಲ್ಲಿ, ಸಮಗ್ರ ಬೆಳವಣಿಗೆಂಯೊಂದಿಗೆ ನವ ಕರ್ನಾಟಕಕ್ಕೆ ನಾವು ಬಲವಾದ ಅಡಿಪಾಯವನ್ನು ಹಾಕುತ್ತಿದ್ದೇವೆ. ನಾವು ಅಭಿವೃದ್ಧಿ ಕಾರ್ಯಗಳ ಮಾಡುತ್ತೇವೆ. ಈ ಅಭಿವೃದ್ಧಿಗಳ ರಿಪೋರ್ಟ್ ಕಾರ್ಡ್ ಗಳೊಂದಿಗೆ ಮತ ಕೇಳಲು ಜನರ ಬಳಿಹೋಗುತ್ತೇನೆಂದು ಹೇಳಿದ್ದಾರೆ.

ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ಪಿಎಸ್‌ಐ) ನೇಮಕಾತಿಯಲ್ಲಿನ ಅಕ್ರಮಗಳು ಮತ್ತು ಅನುದಾನ ಬಿಡುಗಡೆ ಮಾಡಲು "ಶೇ 40 ಕಮಿಷನ್" ಎಂಬ ಗುತ್ತಿಗೆದಾರರ ಸಂಘದ ಆರೋಪಗಳು ಸೇರಿದಂತೆ ಹಲವು ವಿಚಾರಗಳ ಕುರಿತು ಬೊಮ್ಮಾಯಿ ಸರ್ಕಾರದ ವಿರುದ್ಧ ಪ್ರತಿಪಕ್ಷಗಳು ಟೀಕೆ ಮಾಡುತ್ತಿವೆ. ಅಭಿವೃದ್ಧಿ ಕಾರ್ಯಗಳು ಹಾಗೂ ಸರ್ಕಾರಿ ಕಾರ್ಯಕ್ರಮಗಳ ಅನುಷ್ಠಾನದತ್ತ ಗಮನ ಹರಿಸುವಂತೆ ಕೇಂದ್ರ ನಾಯಕತ್ವವು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರಿಗೆ ಸೂಚನೆ ನೀಡಿದ್ದು, ಈ ನಿಟ್ಟಿನಲ್ಲಿ ಬಜೆಟ್ ನಲ್ಲಿ ಘೋಷಿಸಲಾದ ವಿವಿಧ ಕಾಮಗಾರಿಗಳನ್ನು ಪ್ರಾರಂಭಿಸಲು ಸಿಎಂ ಬೊಮ್ಮಾಯಿಯವರು ರಾಜ್ಯದಾದ್ಯಂತ ಪ್ರವಾಸ ಆರಂಭಿಸಿದ್ದಾರೆಂದು ತಿಳಿದುಬಂದಿದೆ.

ಸೂಚನೆಯಂತೆಯೇ ಈಗಾಗಲೇ ಕಾರ್ಯವನ್ನು ಮುಖ್ಯಮಂತ್ರಿಗಳು ಆರಂಭಿಸಿದ್ದು, ಏಪ್ರಿಲ್‌ನಲ್ಲಿ ಮುಖ್ಯಮಂತ್ರಿಗಳು 23,587 ಕಿ.ಮೀ ಪ್ರಯಾಣಿಸಿದ್ದಾರೆ. ಏಪ್ರಿಲ್ ಮೊದಲ ಮತ್ತು ಕೊನೆಯ ವಾರದಲ್ಲಿ ನವದೆಹಲಿಗೂ ಭೇಟಿ ನೀಡಿದ್ದರು.

ಸಭೆ ಹಠಾತ್ ಮುಂದೂಡಿಕೆ

ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಮಾತ್ರ ಸಮಯಾವಕಾಶ ನೋಡಿ ಮುಖ್ಯಮಂತ್ರಿ ಪರವಾಗಿ ಬ್ಯಾಟಿಂಗ್ ಮಾಡಿದ್ದಾರೆ. ಸಂಪುಟ ಪುನಾರಚನೆ ಇಲ್ಲವೆ ವಿಸ್ತರಣೆಗೆ ಅನುಮತಿ ಕೋರಿದ್ದಾರೆ. ಪುನಾರಚನೆ ಸಾಧ್ಯವಾಗದಿದ್ದರೆ, ಖಾತೆಗಳ ಮರು ಹಂಚಿಕೆಗೆ ಅವಕಾಶ ನೀಡುವಂತೆ ಮುಖ್ಯಮಂತ್ರಿ ಪರವಾಗಿ ಮನವಿ ಮಾಡಿಕೊಂಡರು. ಇದಕ್ಕೂ ಪ್ರಧಾನಿ ಪ್ರವಾಸದಿಂದ ಹಿಂದಿರುಗಿದ ನಂತರ ಚರ್ಚಿಸಿ ಮಾಹಿತಿ ನೀಡುವುದಾಗಿ ಹೇಳಿದ್ದಾರೆ. ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಅವರು, ಸಂಪುಟ ವಿಸ್ತರಣೆ ಇಲ್ಲವೆ, ಪುನಾರಚನೆಗೆ ಗೃಹ ಸಚಿವರ ಬಳಿ ಪ್ರಸ್ತಾಪ ಮಾಡಿದ್ದೆ. ಅವರು, ದೆಹಲಿಗೆ ತೆರಳಿದ ನಂತರ ನಿಮಗೆ ಮಾಹಿತಿ ನೀಡುತ್ತೇನೆ ಎಂದು ತಿಳಿಸಿದ್ದರು.

ಆರೋಪಿಗಳ ಪತ್ತೆಗೆ ತಂಡ ರಚನೆ

ಜಿಲ್ಲಾ ಘಟಕದ ಪೊಲೀಸ್ ಮೂಲಗಳು ತಿಳಿಸಿವೆ. ಆರೋಪಿಗಳೆನ್ನಲಾದವರು ಮೊಬೈಲ್‌ಗಳ ಸ್ವಿಚ್ ಆಫ್ ಮಾಡಿಕೊಂಡಿದ್ದು, ಟವರ್ ಲೊಕೇಷನ್ ಆಧಾರದ ಮೇಲೆ ಕಾರ್ಯ ಪ್ರವೃತ್ತರಾಗಿರುವ ಪೊಲೀಸರು, ತಲೆಮರೆಸಿಕೊಂಡಿರುವವರು ಸಂಪರ್ಕಿಸಬಹುದಾದವರ ಮೇಲೆ ನಿಗಾ ಇರಿಸಿ ಬಲೆ ಬೀಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಹಣಕಾಸು ವ್ಯವಹಾರದ ಹಿನ್ನೆಲೆಯಲ್ಲಿ ರವಿಯನ್ನು ಮಾರಕಾಸ್ತ್ರಗಳಿಂದ ದಾಳಿ ನಡೆಸಿ ಹತ್ಯೈದಿರುವವರೊಂದಿಗೆ ಸಂಪರ್ಕ ಸಾಧಿಸುವವರ ಮೇಲೂ ನಿಗಾ ಇರಿಸಿರುವ ಪೊಲೀಸರಿಗೆ ಅಗತ್ಯ ಮಾಹಿತಿ ಲಭ್ಯವಾಗಿದ್ದು, ಸದ್ಯ ಆರೋಪಿಗಳು ಬೆಂಗೂರಿನ ಹೊರವಲಯದಲ್ಲಿ ಅಡಗಿದ್ದಾರೆಂಬ ಸುಳಿವು ದೊರೆತಿದೆ ಎಂದು ಹೇಳಲಾಗಿದೆ. ಇಂದು ಬೆಳಗ್ಗೆ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ರವಿ ದೇಹವನ್ನು ವಾರಸುದಾರರಿಗೆ ಒಪ್ಪಿಸಲಾಯಿತು.

ಸದರಿ ಭೂಮಿ 30 ವರ್ಷಕ್ಕೆ ಗುತ್ತಿಗೆ

ಹಾಗೂ ದೊಡ್ಡ ಹಿಡುವಳಿದಾರರು ಎಕರೆಗೆ ಇಂತಿಷ್ಟು ಎಂದು ವಾರ್ಷಿಕ ಬಾಡಿಗೆ ಪಾವತಿಸಬೇಕು ಎಂದರು. ನೂರಾರು ವರ್ಷಗಳಿಂದ ಇದ್ದ ವಿವಾದಕ್ಕೆ ತೆರೆ ಎಳೆದಿರುವುದಲ್ಲದೆ, ಸರ್ಕಾರಿ ಆಸ್ತಿಯನ್ನು ಗಟ್ಟಿ ಮಾಡಿಕೊಂಡಿದ್ದೇವೆ. ಮೈಸೂರು, ಚಾಮರಾಜನಗರ,ಶಿವಮೊಗ್ಗ ಸೇರಿದಂತೆ ರಾಜ್ಯಾದ್ಯಂತ ಇರುವ ಬಗರ್‌ಹುಕುಂ ಸಮಸ್ಯೆಗೆ ಶಾಶ್ವತ ತೆರೆ ಬೀಳಲಿದೆ. ಅರಣ್ಯ ಇಲಾಖೆಯ ವಶದಲ್ಲಿ ಆರು ಲಕ್ಷ ಹೆಕ್ಟೇರ್‌ನಷ್ಟು ಭೂಮಿ ಡೀಮ್ಡ್ ಅರಣ್ಯ ಪ್ರದೇಶವೆಂದು ಗುರುತಿಸಲಾಗಿದ್ದು ಮೂಲತಃ ಇದು ಕಂದಾಯ ಇಲಾಖೆಗೆ ಸೇರಿದ್ದು ಎಂದರು. ಉಳುಮೆದಾರರು 15 ವರ್ಷಕ್ಕಿಂತ ಹೆಚ್ಚು ಕಾಲದಿಂದ ಉಳುಮೆ ಮಾಡುತ್ತಿದ್ದರೆ ಅಂಥವರಿಗೆ ಹಕ್ಕುಪತ್ರ ನೀಡಲು 79ಎಗೆ ಭೂಕಂದಾಯ ಕಾಯ್ದೆಗೆ ತಿದ್ದುಪಡಿ ತರಲಾಗುವುದು ಎಂದರು.

ಅಶ್ವಥ್ ನಾರಾಯಣ್ ಕಡು ಭ್ರಷ್ಟ

ಕೊಡುವುದು. ಇದೊಂದೇ ಇಲಾಖೆ ಅಲ್ಲ, ಶಿಕ್ಷಣ ಇಲಾಖೆ, ಕೆಪಿಎಸ್ಸಿಯಲ್ಲೂ ಅಕ್ರಮ ಆಗಿದೆ. ಇದರ ಬಗ್ಗೆ ಬೊಮ್ಮಾಯಿಯವರು ಎಸಿಬಿಗೆ ದೂರು ನೀಡಿ ಎಫ್‌ಐಆರ್ ದಾಖಲು ಮಾಡಬೇಕಿತ್ತು. ಪ್ರಕರಣ ಕುರಿತು ವಿಚಾರಣೆ ಮಾಡಬೇಕಿತ್ತು, ಯಾಕೆ ಮಾಡಿಲ್ಲ. ಕೆಪಿಎಸ್ಸಿಯಲ್ಲಿ ಅಕ್ರಮ ಆಗಿದೆ. ಈ ಬಗ್ಗೆ ಮಾಹಿತಿ ಇದ್ದರೂ ಸಿಎಂ ಬಸವರಾಜ ಬೊಮ್ಮಾಯಿ ಯಾಕೆ ಸುಮ್ಮನಿದ್ದಾರೆ. ರಾಜ್ಯಪಾಲರು, ಮುಖ್ಯ ಕಾರ್ಯದರ್ಶಿ ಯಾಕೆ ಸುಮ್ಮನಿದ್ದಾರೆ ಎಂದು ಪ್ರಶ್ನಿಸಿದರು.

ರಾಮನಗರದ ಮೂರು ನಾಲ್ಕು ಮಂದಿ ಒಳಗೆ ಇದ್ದಾರೆ: ಇನ್ನು ಜೆಡಿಎಸ್ ನಾಯಕ ಕುಮಾರಸ್ವಾಮಿ ಆರೋಪ ವಿಚಾರ ಕುರಿತು ಮಾತನಾಡಿದ ಅವರು, ನನಗೆ ಆಂತರಿಕ ವಿಚಾರದ ಬಗ್ಗೆ ಮಾಹಿತಿ ಇಲ್ಲ. ಕುಮಾರಸ್ವಾಮಿಯವರು ಪ್ರಮುಖ ಸ್ಥಾನದಲ್ಲಿದ್ದರು, ಅಧಿಕಾರಿಗಳು ಪರಿಚಯ ಇದ್ದರು ತಿಳಿಸಿರಬಹುದು. ಆದರೆ ನಡೆದ ಹಗರಣ ಯಾರು ಮುಚ್ಚಿಹಾಕಲು ಸಾಧ್ಯಾವಾ? ಸರ್ಕಾರದ ಪ್ರಭಾವದಿಂದ ಇದನ್ನ ಮುಚ್ಚಿಹಾಕಬಹುದು. ನಮ್ಮ ಜಿಲ್ಲೆಯವರೇ ಮೂರ್ನಾಲ್ಕು ಜನ ಮೊದಲನೇ ರ್‍ಯಾಂಕ್ ಪಡೆದಿದ್ದಾರೆ. ನಮ್ಮ ಪೈಕಿಯವರೇ ಅದರಲ್ಲಿ ಇದ್ದಾರೆ, ಈಗ ಅವರು ಒಳಗಡೆ ಇದ್ದಾರೆ. ನೌಕರಿ ಆಸೆಗೆ ಸಾಲ ಮಾಡಿ ಹಣ ನೀಡಿ ಸಿಕ್ಕಿಹಾಕಿಕೊಂಡಿರಬಹುದು ಎಂದು ಹೇಳಿದರು.

ಆರೋಪ ಮಾಡಲು ನೈತಿಕತೆ ಇಲ್ಲ

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅಶ್ವಥ್ ನಾರಾಯಣ್, ಕಾಂಗ್ರೆಸ್ ನಾಯಕರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುವ ಜೊತೆಗೆ ಮಾನನಷ್ಟ ಮೊಕದ್ದಮೆಯನ್ನೂ ಹೂಡುವ ಯೋಚನೆ ಮಾಡುತ್ತಿದ್ದೇನೆ ಎಂದು ಹೇಳಿದರು. ಪಿಎಸ್‌ಐ ನೇಮಕಾತಿ ಹಗರಣದಲ್ಲಿ ಪಾಲುದಾರನಾಗಲು ನಾನೇನು ಆ ಖಾತೆಯ ಸಚಿವನೇ? ಪ್ರಗತಿಪರ ಧೋರಣೆಗಳ ನನ್ನ ಸಾರ್ವಜನಿಕ ಬದುಕು ಪಾರದರ್ಶಕವಾಗಿದೆ. ನನ್ನ ರಾಜಕೀಯ ಬದುಕು ಒಂದು ತೆರೆದ ಪುಸ್ತಕ. ರಾಜಕೀಯ ಕ್ಷೇತ್ರಕ್ಕೆ ಕಾಲಿಟ್ಟಾಗಿನಿಂದ ಉತ್ತಮವಾದ ರೀತಿಯಲ್ಲಿ, ಕಳಂಕರಹಿತವಾಗಿ ಸಮಾಜದ ಕಟ್ಟಕಡೆಯ ವ್ಯಕ್ತಿಗೆ ನ್ಯಾಯ ದೊರಕಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ಹೇಳಿದರು.

ಜೈಲಿಗೆ ಹೋಗಿ ಬಂದಿರುವ ಕೆಪಿಸಿಸಿ ಅಧ್ಯಕ್ಷರಿಗೆ ನನ್ನ ವಿರುದ್ಧ ಅರೋಪ ಮಾಡಲು ನೈತಿಕತೆ ಅನ್ನೋದೇ ಇಲ್ಲ. ಅಸಲಿಗೆ ಅವರ ಪಕ್ಷವೇ ನಿರ್ನಾಮವಾಗುವ ಹಂತದಲ್ಲಿದೆ. ಬೇರೆಯವರ ವಿರುದ್ಧ ಸುಳ್ಳು ಅರೋಪಗಳನ್ನು ಮಾಡುವ ಮೊದಲು ಅವರು ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಅಶ್ವಥ್ ನಾರಾಯಣ ಎಚ್ಚರಿಸಿದರು.

ಪಿಎಸ್‌ಐ ಅಕ್ರಮ ಬಯಲು

ಪರೀಕ್ಷೆ ಅಕ್ರಮ ಬಯಲಾಗುವುದಕ್ಕೂ ಲಿಂಕ್ ಇದೆ ಎಂದರು.

ಚಂದ್ರು ಎಂಬ ಯುವಕನ ಕೊಲೆ ಪ್ರಕರಣದ ವಿಚಾರವಾಗಿ ನಡೆದ ಬೆಳವಣಿಗೆಗಳೇ ಪರೀಕ್ಷೆ ಅಕ್ರಮವನ್ನು ಬಯಲಿಗೆಳೆದಿವೆ. ಬಿಜೆಪಿಯ ವಕ್ತಾರರೊಬ್ಬರು ಪೊಲೀಸ್ ಆಯುಕ್ತ ಕಮಲ್ ಪಂಥ್ ವಿರುದ್ಧವೇ ಆರೋಪ ಮಾಡಿದ್ದರು. ಆ ಕೊಲೆಯ ವಿಚಾರವಾಗಿ ಆಯುಕ್ತರು ಸುಳ್ಳು ಹೇಳುತ್ತಿದ್ದಾರೆಂದು ಅವರು ದೂರಿದ್ದರು. ಪರ ಸ್ಪರ ದ್ವಿಚಕ್ರ ವಾಹನ ಡಿಕ್ಕಿ ಕಾರಣಕ್ಕೆ ಗಲಾಟೆ ನಡೆದು ಯುವಕನ ಕೊಲೆಯಾಗಿತ್ತು ಎಂದು ಪೊಲೀಸರು ಹೇಳಿದ್ದರು. ಆದರೆ, ಬಿಜೆಪಿ ನಾಯಕರು ಹಠಕ್ಕೆ ಬಿದ್ದವರಂತೆ ಉರ್ದು ಭಾಷೆ ಮಾತನಾಡಲು ಬರಲಿಲ್ಲ ಎನ್ನುವ ಕಾರಣಕ್ಕೆ ಗಲಾಟೆಯಾಗಿ ಯುವಕನ ಕೊಲೆಯಾಯಿತು ಎಂದು ಕಥೆ ಕಟ್ಟಿದ್ದರು. ಅದು ಅಲ್ಲಿಂದ ಪಿಎಸ್‌ಐ ಪರೀಕ್ಷೆ ಅಕ್ರಮದವರೆಗೂ ಬಂದು ನಿಂತಿದೆ ಎಂದು ಅವರು ಹೇಳಿದರು.

ನಿಷ್ಠಾವಂತ, ಪ್ರಾಮಾಣಿಕ ಪೊಲೀಸ್ ಅಧಿಕಾರಿಯ ಮೇಲೆ ಆರೋಪ ಮಾಡಿದ್ದ ಬಿಜೆಪಿಯ ನಾಯಕನಿಗೆ ಪರೀಕ್ಷೆ ಅಕ್ರಮದಲ್ಲಿ ಈಗ ಬಂಧನಕ್ಕೊಳಗಾಗಿರುವ ಕಿಂಗ್ ಪಿನ್ ಲಿಂಕ್ ಇತ್ತು. ಪೊಲೀಸರು ಅದರ ಜಾಡು ಹಿಡಿದು ಎಲ್ಲವನ್ನೂ ಹೊರಗೆಳೆದು ಜನರ ಮುಂದೆ ಇಟ್ಟಿದ್ದಾರೆ. ಹೇಳುತ್ತಾ ಹೋದರೆ ಇದೇ ದೊಡ್ಡ ಕಥೆ ಆಗುತ್ತದೆ ಎಂದು ಕುಮಾರಸ್ವಾಮಿ ಅವರು ಪ್ರಶ್ನೆಯೊಂದಕ್ಕೆ ಉತ್ತರ ನೀಡಿದರು. ಎಲ್ಲಾ ಅಭ್ಯರ್ಥಿಗಳು ದುಡ್ಡು ಕೊಟ್ಟು ಆಯ್ಕೆ ಆಗಿದ್ದಾರೆ ಎನ್ನಲು ಆಗುವುದಿಲ್ಲ. 30% ಅಭ್ಯರ್ಥಿಗಳು ಹಣದಿಂದ ಹುದ್ದೆ ಗಿಟ್ಟಿಸಿರಬಹುದು. ಹಾಗೆಯೇ 30–40% ಅಭ್ಯರ್ಥಿಗಳು ಪ್ರಾಮಾಣಿಕವಾಗಿ ಪರೀಕ್ಷೆ ಬರೆದಿರಬಹುದು, ನ್ಯಾಯಯುತವಾಗಿ ಆಯ್ಕೆಯಾದವರಿಗೆ ಅನ್ಯಾಯ ಆಗ ಬಾರದು ಎಂದಷ್ಟೇ ನಾನು ಹೇಳಿದ್ದೆ ಎಂದರು.


ಸಚಿವ ಡಾ.ಸಿಎನ್.ಅಶ್ವತ್ಥನಾರಾಯಣ ಅವರ ಬಗ್ಗೆ ಕಾಂಗ್ರೆಸ್ ನಾಯಕರು ಆರೋಪ ಮಾಡುತ್ತಿದ್ದಾರೆ. ಆದರೆ, ಅವರ ಬಳಿ ಸಚಿವರ ವಿರುದ್ಧ ದಾಖಲೆ ಇದೆಯಾ? ಅವರ ವಿರುದ್ಧ ಎಲ್ಲಿದೆ ದಾಖಲೆ? ಎಂದು ಪ್ರಶ್ನಿಸಿದ ಮಾಜಿ ಮುಖ್ಯ ಮಂತ್ರಿಗಳು; ಸಚಿವರ ವಿರುದ್ಧ ಅವರ ಸಹೋ ದ್ಯೋಗಿಗಳೇ ಮಾಧ್ಯಮಗಳಿಗೆ ಮಾಹಿತಿ ನೀಡಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬೆಂಗಳೂರಿಗೆ ಬರುತ್ತಿದ್ದಂತೆಯೇ ಅದೆಲ್ಲ ಮಾಧ್ಯಮಗಳಲ್ಲಿ ಬರುವಂತೆ ನೋಡಿಕೊಂಡಿದ್ದಾರೆ. ಇದೆಲ್ಲ ಅಮಿತ್ ಶಾ ತಲೆಗೆ ಹೋಗಲಿ ಎಂದೇ ಸಚಿವರ ವಿರುದ್ಧ ಮಾಹಿತಿ ನೀಡಿದ್ದಾರೆ ಎಂದರು.

ಅಶ್ವತ್ಥನಾರಾಯಣ ವಿಕೆಟ್ ಉರುಳಿಸಲು ಬಿಜೆಪಿಯಲ್ಲಿಯೇ ಸಂಚು ನಡೆದಿದೆ. ರಾಜ್ಯದಲ್ಲಿ ಬಿಜೆಪಿಯವರು ತಮ್ಮ ಮನೆಗೆ ತಾವೇ ಬೆಂಕಿ ಹಚ್ಚಿಕೊಳ್ಳುತ್ತಿದ್ದಾರೆ, ನಾವು ಹಚ್ಚಬೇಕಿಲ್ಲ. ನಾನು ಮತ್ತೆ ಪೆಟ್ರೋಲ್ ತೆಗೆದುಕೊಂಡು ಹೋಗ್ಲಾ ಸುರಿಯೋಕೆ? ಕಾಂಗ್ರೆಸ್ ನಾಯಕರಿಗೆ ನೈಜ ವಿಷಯಗಳ ಮೇಲೆ ಹೋರಾಟ ನಡೆಸುವ ಶಕ್ತಿ ಇಲ್ಲ. ಯಾರೋ ಹೇಳಿದ್ದನ್ನು ಹೇಳ್ಕೋತಾರೆ ಅಷ್ಟೇ ಎಂದು ಮಾಜಿ ಸಿಎಂ ತಿಳಿಸಿದರು.

ಲ್ಯಾಪ್‌ಟಾಪ್ ವಿತರಣೆ ನಂತರ ಸಂಶೋಧನಾ ವಿದ್ಯಾರ್ಥಿಗಳಿಗೆ ಸಂಸದ ಪ್ರತಾಪ್‌ಸಿಂಹ ಕಿವಿಮಾತು

ಜಾತಿ ಮನಸ್ಥಿತಿಯಿಂದ ಹೊರಬನ್ನಿ, ಉತ್ತಮ ಶೈಕ್ಷಣಿಕ ವಾತಾವರಣ ಕಾಪಾಡಿ





ಹೆಚ್.ಜಿ.ದೀಪಾ ಬುದ್ಧೆಗೆ ಮೈವಿವಿಯಿಂದ ಲ್ಯಾಪ್‌ಟಾಪ್ ವಿತರಣೆ. ಬಲಚಿತ್ರದಲ್ಲಿ ಹಿಂದುಳಿದ ವರ್ಗಗಳ 30 ಸಂಶೋಧನಾ ವಿದ್ಯಾರ್ಥಿಗಳಿಗೆ ಡೆಲ್ ಕಂಪನಿಯ ಲ್ಯಾಪ್‌ಟಾಪ್‌ಗಳನ್ನು ಸಂಸದ ಪ್ರತಾಪ್ ಸಿಂಹ ವಿತರಿಸಿದರು.

ಮೈಸೂರು,ಮೇ4(ಆರ್‌ಕೆ) ಜಾತಿ ರಾಜಕಾರಣದ ಮನಸ್ಥಿತಿಯಿಂದ ಹೊರ ಬಂದು ವಿಶ್ವವಿದ್ಯಾನಿಲಯಗಳಲ್ಲಿ ಉತ್ತಮ ಶೈಕ್ಷಣಿಕ ವಾತಾವರಣ ಕಾಪಾಡಿಕೊಳ್ಳಿ ಎಂದು ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರಿಗೆ ಸಂಸದ ಪ್ರತಾಪ್ ಸಿಂಹ ಕಿವಿಮಾತು ಹೇಳಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಹಿಂದುಳಿದ ವರ್ಗಗಳ ಸಂಶೋಧನಾ ವಿದ್ಯಾರ್ಥಿಗಳ ವೇದಿಕೆ ಹಾಗೂ ಐಟಿಸಿ ಕಂಪನಿ ವತಿಯಿಂದ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಹಿಂದುಳಿದ ವರ್ಗಗಳ 30 ಸಂಶೋಧನಾ ವಿದ್ಯಾರ್ಥಿಗಳಿಗೆ ಡೆಲ್ ಕಂಪನಿಯ ಲ್ಯಾಪ್‌ಟಾಪ್ ವಿತರಿಸಿ ಮಾತನಾಡಿದರು.

ತಮ್ಮ ಮನವಿಗೆ ಸ್ಪಂದಿಸಿ ಹಿಂದುಳಿದ ವರ್ಗಗಳ ಸಂಶೋಧನಾ ವಿದ್ಯಾರ್ಥಿಗಳಿಗೆ ಸಿಎಸ್‌ಆರ್ (ಕಾರ್ಪೋರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ) ಯೋಜನೆ ಯಡಿ 30 ಲ್ಯಾಪ್‌ಟಾಪ್ ನೀಡಿರುವ ಐಟಿಸಿ ಕಂಪನಿಗೆ ಧನ್ಯವಾದ ಹೇಳಿದ ಅವರು, ವಿಶ್ವವಿದ್ಯಾನಿಲಯಗಳಲ್ಲಿ ಜಾತಿ ಮನಸ್ಥಿತಿ ದಟ್ಟವಾಗುತ್ತಿರುವುದು, ಸದಾ ಜಗಳ, ಜಟಾಪಟಿ ನಡೆಯುವುದು ಒಳ್ಳೆಯ ಬೆಳವಣಿಗೆಯಲ್ಲ. ಜಾತಿ ಮನಸ್ಥಿತಿ ಯಿಂದ ಹೊರಬಂದು ನಾನೊಬ್ಬ ವಿದ್ಯಾರ್ಥಿ ಎಂಬ ಮನೋಭಾವ ಬೆಳೆಸಿಕೊಳ್ಳಿ ಎಂದರು.

ಚೆನ್ನಾಗಿ ಓದಿ ಒಳ್ಳೆಯದಕ್ಕೆ ಸುದ್ದಿಯಾಗಿ ಜನ ನಿಮ್ಮನ್ನು ಗುರುತಿಸುವಂತಹಾ ಕೆಲಸ ಮಾಡಬೇಕೇ ಹೊರತು, ನಾನು, ನಮ್ಮ ಜಾತಿಯವ ಎಂಬ ಸ್ವಾರ್ಥ ನಮ್ಮನ್ನು

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇದೇ ಮೊದಲ ಬಾರಿ ಸಂಶೋಧನೆಗೆ ಆಯ್ಕೆಯಾಗಿರುವ

ಮಂಗಳಮುಖಿ ವಿದ್ಯಾರ್ಥಿ ದೀಪಾ ಬುದ್ಧೆ; ಲ್ಯಾಪ್‌ಟಾಪ್ ಕೊಡುಗೆ

ಮೈಸೂರು: ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸದಲ್ಲೇ ಇದೇ ಮೊದಲ ಬಾರಿ ಮಂಗಳ ಮುಖಿ ವಿದ್ಯಾರ್ಥಿ ಸಂಶೋಧನೆಗೆ ದಾಖಲಾಗಿದ್ದಾರೆ.

ಹೆಚ್.ಜಿ.ದೀಪಾ ಬುದ್ಧೆ ಮಂಗಳ ಮುಖಿ ಸಂಶೋಧನಾ ವಿದ್ಯಾರ್ಥಿಯಾಗಿದ್ದು, ಇವರು ಹಿಂದುಳಿದ ವರ್ಗಗಳ ಕೋಟಾದಡಿ ಸಂಶೋಧನಾ ವಿದ್ಯಾರ್ಥಿಯಾಗಿದ್ದು, ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ನಡೆದ ಸಮಾರಂಭದಲ್ಲಿ ಅವರಿಗೆ ಐಟಿಸಿ ಕಂಪನಿ ವತಿಯಿಂದ ಲ್ಯಾಪ್‌ಟಾಪ್ ವಿತರಿಸಲಾಯಿತು.

ಈ ವೇಳೆ ಮಾತನಾಡಿದ ದೀಪಾ ಬುದ್ಧೆ, ಬುದ್ಧ, ಬಸವ, ಅಂಬೇಡ್ಕರ್ ಅವರಿಂದ ಪ್ರೇರಿತವಾಗಿದ್ದೇನೆ. ಸಂಶೋಧನೆ ನಡೆಸಿ ಪಿಹೆಚ್‌ಡಿ ಪದವಿ ಪಡೆಯುವ ಉದ್ದೇಶ ಹೊಂದಿದ್ದೇನೆ. ಸಂವಿಧಾನದಲ್ಲಿ ಎಲ್ಲರೂ ಒಂದೇ ಎಂಬ ಸಮಾನತೆ ಸಂದೇಶ ಸಾರಲಾಗಿದೆ. ನಾವೆಲ್ಲರೂ ಜಾತಿ, ಧರ್ಮ, ಬಡವ-ಶ್ರೀಮಂತ ಹೀಗೆ ನಾನಾ ರೀತಿಯ ಭೇದ ಭಾವ ಬಿಟ್ಟು ಒಗ್ಗಟ್ಟಾಗಿರಬೇಕು ಎಂದರು.

ಕಾರ್ಯಕ್ರಮದ ಬಳಿಕ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ ಹೆಚ್.ಜಿ.ದೀಪಾ ಬುದ್ಧೆ, ಚಾಮರಾಜನಗರ ಜಿಲ್ಲೆ ಸಂತೆಮರಹಳ್ಳಿ ಹೋಬಳಿ ಹೆಗ್ಗವಾಡಿಪುರ ಗ್ರಾಮದ ಬಡ ಕುಟುಂಬದಲ್ಲಿ ಗಂಡು ಮಗುವಾಗಿ ಜನಿಸಿದ ನಾನು ಹುಟ್ಟೂರಲ್ಲಿ ಪ್ರಾಥಮಿಕ ಶಿಕ್ಷಣ ಪಡೆದ ನಂತರ ಚಾಮರಾಜನಗರದಲ್ಲಿ ಪ್ರೌಢ ಮತ್ತು ಪಿಯುಸಿ ವ್ಯಾಸಂಗ ಮಾಡಿದ್ದಾಗಿ ತಿಳಿಸಿದರು.

ಕುದೇರುವಿನಲ್ಲಿ ಬಿಎ ಪದವಿ ವ್ಯಾಸಂ ಗದ ನಂತರ ಶಿಕ್ಷಣ ಮೊಟಕುಗೊಂಡಿತು. ಸಮರ್ಥ ಸೊಸೈಟಿ ಎಂಬ ಸಂಸ್ಥೆ ಮಾಡಿಕೊಂಡು ಸಮಾಜಸೇವಾ ಚಟುವಟಿಕೆ ಮಾಡುತ್ತಿದ್ದೆ. 2018ರಲ್ಲಿ ಎಂಎ ವ್ಯಾಸಂಗ ಮಾಡಿದೆ. ನಂತರ ಪ್ರವೇಶ ಪರೀಕ್ಷೆ ಬರೆದು, ಪಿಹೆಚ್‌ಡಿಗೆ ಆಯ್ಕೆಯಾದೆ. ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಅಧ್ಯಯನ ಕೇಂದ್ರದ ಮುಖ್ಯಸ್ಥರಾದ ಪ್ರೊ.ಜೆ.ಸೋಮಶೇಖರ್ ಅವರ ಮಾರ್ಗದರ್ಶನದಲ್ಲಿ 'ಮೈಸೂರು -ಚಾಮರಾಜನಗರ ಲಿಂಗತ್ವ ಅಲ್ಪ ಸಂಖ್ಯಾತರ ಜೀವಂತ ಹೋರಾಟಗಳು: ಒಂದು ವಿಶ್ಲೇಷಣೆ' ವಿಷಯದ ಮೇಲೆ ಸಂಶೋಧನೆ ನಡೆಸಿ, ಮಹಾ ಪ್ರಬಂಧ ಮಂಡಿಸಲು ಉದ್ದೇಶಿಸಿರುವುದಾಗಿ ಹೇಳಿದರು.

ತಂದೆ ಗುರುಲಿಂಗಯ್ಯ, ತಾಯಿ ಮಹ ದೇವಮ್ಮರ ನಾಲ್ವರು ಹೆಣ್ಣು ಮಕ್ಕಳು, ಓರ್ವ ಗಂಡು ಪೈಕಿ ನಾನೂ ಒಬ್ಬನಾಗಿದ್ದೆ, ನನ್ನ ಶಿಕ್ಷಣ, ಬದುಕಿಗೆ ನೆರವಾದವರು ನನ್ನ ಗುರುಗಳು ಹಾಗೂ ಸ್ನೇಹಿತರು. ಈಗ ನಾನು ನಿತ್ಯ ಊರಿಗೆ ಓಡಾಡಿಕೊಂಡು ಪಿಹೆಚ್‌ಡಿ ಮಾಡುತ್ತಿದ್ದೇನೆ. ನನಗೆ ಉಳಿದುಕೊಳ್ಳಲು ಪ್ರತ್ಯೇಕ ಕೊಠಡಿ ಅಗತ್ಯವಿದೆ. ನನ್ನಂತಹ ಮಂಗಳಮುಖಿ ವಿದ್ಯಾರ್ಥಿಗಳಿಗಾಗಿ ಮೈಸೂರು ವಿಶ್ವವಿದ್ಯಾ ನಿಲಯದಲ್ಲಿ ಪ್ರತ್ಯೇಕ ಹಾಸ್ಟೆಲ್ ಬೇಕು ಎಂದರು.

ಪಿಹೆಚ್‌ಡಿ ಮುಗಿಯುತ್ತಿದ್ದಂತೆಯೇ ಬೋಧನಾ ಕ್ಷೇತ್ರದಲ್ಲಿ ಸಹಾಯಕ ಪ್ರಾಧ್ಯಾಪಕ, ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಬೇಕೆಂಬ ಹಂಬಲ ನನ್ನದು ಎಂದು ದೀಪಾ ಬುದ್ಧೆ ನುಡಿದರು.

ಹಾಳು ಮಾಡುತ್ತದೆ. ತಾವು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಆದ ಕೆಟ್ಟ ಅನುಭವಗಳನ್ನು ಇದೇ ವೇಳೆ ಹಂಚಿಕೊಂಡರು.

ವಿದ್ಯಾರ್ಥಿದೆಸೆಯಲ್ಲಿ ಕಲಿಯದೇ ರಾಜಕೀಯ ಮಾಡಿ ಕೊಂಡಿದ್ದರೆ ಜೀವನ ಪೂರ್ತಿ ನರಕ ಅನುಭವಿಸಬೇಕಾಗು ತ್ತದೆ. ಉತ್ತಮ ಶೈಕ್ಷಣಿಕ ವಾತಾವರಣದಲ್ಲಿ ಪರಿಪಕ್ವ ಜ್ಞಾನ ಗಳಿಸಿಕೊಳ್ಳಬೇಕು. ವಿಶ್ವವಿದ್ಯಾ ನಿಲಯ ನನ್ನದು ಎಂಬ ಭಾವನೆಯಿಂದ ಓದಿ ಒಳ್ಳೆಯ ಪ್ರಬಂಧ ಬರೆಯಿರಿ. ಅದರಿಂದ ನಿಮ್ಮ ಜೀವನವೂ ಉತ್ತಮ ವಾಗುತ್ತದೆ. ನಿಮ್ಮಿಂದ ಮತ್ತಷ್ಟು ವಿದ್ಯಾರ್ಥಿಗಳಿಗೂ ಜ್ಞಾನ ದೊರೆಯುತ್ತದೆ ಎಂದು ಪ್ರತಾಪ್‌ಸಿಂಹ ನುಡಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಮಾತನಾಡಿ, ಐಟಿಸಿಯಂತಹ ಇನ್ನೂ ಹಲವು ಕಂಪನಿಗಳು ನೆರವಿಗೆ ಮುಂದೆ ಬಂದರೆ, ಸರ್ಕಾರದ ಸಹಾಯ, ಅನುದಾನವಿಲ್ಲದೇ ವಿಶ್ವವಿದ್ಯಾನಿಲಯವನ್ನು ನಡೆಸಬಹುದು. ಅದಕ್ಕೆ ಬೇರೆ ರಾಷ್ಟ್ರಗಳಲ್ಲಿ ಹಲವು ನಿದರ್ಶನಗಳಿವೆ ಎಂದರು. ಇಂದು ಕಂಪ್ಯೂಟರ್, ಮೊಬೈಲ್ ಇಲ್ಲದೇ ಜೀವನವೇ ಇಲ್ಲ ಎಂಬಂತಾಗಿದೆ. ತಂತ್ರ ಜ್ಞಾನ ವೇಗವಾಗಿ ಬೆಳೆಯುತ್ತಿರುವಂತೆಯೇ ನಾವೂ ಅದಕ್ಕೆ ತಕ್ಕಂತೆ ಜ್ಞಾನವೃದ್ಧಿಸಿಕೊಳ್ಳ ಬೇಕಾಗಿದೆ. ಅದನ್ನು ಬಳಸಿಕೊಂಡು ವಿದ್ಯಾರ್ಥಿಗಳು ಮುಂದೆ ಬರಬೇಕು ಎಂದರು. ಮೈವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಅಧ್ಯಕ್ಷತೆ ವಹಿಸಿದ್ದ ಸಮಾರಂಭದಲ್ಲಿ ಐಟಿಸಿ ಕಂಪನಿ ಅಸಿಸ್ಟೆಂಟ್ ಮ್ಯಾನೇಜರ್ ಪೂರ್ಣೇಶ್, ಮೈವಿವಿ ಸಿಂಡಿಕೇಟ್ ಸದಸ್ಯರಾದ ಚೈತ್ರಾ ನಾರಾಯಣ್, ಡಾ.ನಿಂಗರಾಜಗೌಡ, ಗಗನ ಕುಪ್ಪಣ್ಣ, ಕುಲಸಚಿವ ಪ್ರೊ.ಆರ್.ಶಿವಪ್ಪ, ಓಬಿಸಿ ಸೆಲ್ ಸಂಯೋಜಕ ಪ್ರೊ. ಬಿ.ವಿ. ಸುರೇಶ್‌ಕುಮಾರ್ ಭಾಗವಹಿಸಿದ್ದರು.



ಬುಧವಾರ ವರ್ಗಾವಣೆಗೊಂಡ ಮುಡಾ ಆಯುಕ್ತ ಡಾ.ಡಿ.ಬಿ.ನಟೇಶ್ ಅವರನ್ನು ಪ್ರಾಧಿಕಾರದ ವತಿಯಿಂದ ಆತ್ಮೀಯವಾಗಿ ಬೀಳ್ಕೊಡಲಾಯಿತು. ಈ ವೇಳೆ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಕಾರ್ಯದರ್ಶಿ ವೆಂಕಟರಾಜು, ನಗರ ಯೋಜನ ಸದಸ್ಯ ಜಯಸಿಂಹ, ಅಧೀಕ್ಷಕ ಅಭಿಯಂತರ ಶಂಕರ್, ಮುಡಾ ಸದಸ್ಯೆ ಶ್ರೀಮತಿ ಲಕ್ಷ್ಮೀದೇವಿ, ಲಿಂಗಯ್ಯ, ಮುಡಾ ನೌಕರರ ಸಂಘದ ಕಾರ್ಯದರ್ಶಿ ಬಸವರಾಜು ಹಾಗೂ ಮುಡಾ ಕಚೇರಿ ಅಧಿಕಾರಿಗಳು ಮತ್ತು ನೌಕರರು ಉಪಸ್ಥಿತರಿದ್ದರು.



ರಾಜ್ಯಮಟ್ಟದ ಖೋಖೋ ಪಂದ್ಯಾವಳಿಯಲ್ಲಿ ಭಾಗವಹಿಸಲು ಬೆಳಗಾವಿಗೆ ತೆರಳುತ್ತಿರುವ ಕುಂಬಾರಕೊಪ್ಪಲಿನ ಕೆ.ಪುಟ್ಟಸ್ವಾಮಿ ಶಾಲೆ ವಿದ್ಯಾರ್ಥಿನಿಯರಿಗೆ ಕುಂಬಾರಕೊಪ್ಪಲು ಅಭ್ಯುದಯ ಸಂಘ, ಕ್ರೀಡಾ ಪ್ರಾಧಿಕಾರ ವತಿಯಿಂದ ಸಮವಸ್ತ್ರ ವಿತರಿಸಿ, ಶುಭ ಕೋರಲಾಯಿತು. ಈ ವೇಳೆ ಪಾಲಿಕೆ ಮಾಜಿ ಸದಸ್ಯ ಕೆ.ಟಿ.ಚೆಲುವೇಗೌಡ, ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಲಿಂಗರಾಜು, ಭೈರಪ್ಪ, ಶಿವಪ್ಪ, ರಾಜೇಂದ್ರ, ಸತೀಶ್, ಚೇತನ್, ಕುಮಾರ್‌ಗೌಡ, ದಿನೇಶ್‌ಚಂದ್ರ, ಪಟ್ಟಾಭಿ, ಮಂಜುಗೌಡ, ಆದರ್ಶ್ ಇತರರಿದ್ದರು.

ಬಸವ ಪ್ರತಿಮೆಗೆ ಮಾಲಾರ್ಪಣೆ



ಮೈಸೂರು, ಮೇ 4 (ಆರ್‌ಕೆಬಿ)–ಮೈಸೂರು ಜಿಲ್ಲಾ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹೋಮದೇವ ಕೆಎಸ್‌ಎಲ್‌ಯು ಡೆವಲಪರ್ ಹಾಗೂ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಂಸ್ಥೆಯ ಅಧ್ಯಕ್ಷ ಪಿ.ರಾಜಪ್ಪ ನೇತೃತ್ವದಲ್ಲಿ ವಿಶ್ವಗುರು ಬಸವಣ್ಣನವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು

ಈ ಸಂದರ್ಭದಲ್ಲಿ ಸಂಘದ ಪದಾಧಿಕಾರಿಗಳಾದ ಈಶ್ವರ ಪ್ರಸಾದ್, ಶ್ರೀಕಾಂತ, ಸಿ.ಶಿವಣ್ಣ, ಸಿ.ಡಿ.ಹರೀಶ್, ಎಂ.ಎನ್.ಆರ್.ಸಿ.ಆರ್.ದತ್ತಾತ್ರೇಯ, ನಂಜುಂಡಯ್ಯ, ಎಲ್.ರಮೇಶ್, ಗೋವಿಂದ, ಹರಿರಾವ್ ಇನ್ನಿತರರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಪಿ.ರಾಜಪ್ಪ, ಅಸಂಘಟಿತ ಕಾರ್ಮಿಕರರ ವಲಯಕ್ಕೆ ಸೇರ್ಪಡೆಯಾಗಿರುವ ಪತ್ರಿಕಾ ವಿತರಕರು ಸರ್ಕಾರದ ಫಲಾನುಭವಿ ಕಾರ್ಡುಗಳನ್ನು ಪಡೆದುಕೊಳ್ಳಬೇಕು. ಸರ್ಕಾರಿ ಸವಲತ್ತುಗಳನ್ನು ಪಡೆಯಬೇಕು. ಮಕ್ಕಳ ವಿದ್ಯಾಭ್ಯಾಸ ಮತ್ತು ಮದುವೆಗೆ ಹಾಗೂ 60 ವರ್ಷವಾದ ನಂತರದ ಪಿಂಚಣಿ ಪಡೆಯಬೇಕು ಎಂದರು.

ಮೈಸೂರಲ್ಲಿ ಬಿಸಿಲ ಧಗೆ: ಜನತೆ ಕಂಗಾಲು

- ಒಂದೆಡೆ ಭಾರೀ ಬಿರುಗಾಳಿ, ಗುಡುಗು ಮಿಂಚಿನೊಂದಿಗೆ ಮಳೆ; ಇನ್ನೊಂದೆಡೆ ಹೆಚ್ಚಾದ ಧಗೆ
- ಎಸಿ, ಕೂಲರ್, ರೆಫ್ರಿಜೆರೇಟರ್, ಫ್ಯಾನ್‌ಗಳ ಮೊರೆ ಹೋದ ಜನ

ಮೈಸೂರು,ಮೇ 4(ಆರ್‌ಕೆಬಿ)– ಹವಾಮಾನ ವೈಪರೀತ್ಯದಿಂದಾಗಿ ದಿನೇ ದಿನೇ ಬಿಸಿಲಿನ ತಾಪ ಹೆಚ್ಚುತ್ತಿದ್ದು, ಉಷ್ಣಾಂಶದಲ್ಲಿಯೂ ಏರಿಕೆ ಕಂಡು ಬರುತ್ತಿದೆ. ಹಗಲಿನಲ್ಲಿ ಬಿಸಿಲಿನ ತಾಪಮಾನವಾದರೆ, ರಾತ್ರಿಯ ಹೊತ್ತಿನಲ್ಲೂ ಅಸಾಧ್ಯ ಸೆಖೆ. ಬಿಸಿಲು ಮತ್ತು ಧಗೆಯಿಂದ ಮೈಸೂರಿನ ಜನ ಕಂಗಾಲಾಗಿದ್ದಾರೆ. ಏತನ್ಮಧ್ಯೆ ಕಳೆದ ವಾರದಿಂದ ನಡು ನಡುವೆ ಮೈಸೂರಿನಲ್ಲಿ ಭಾರೀ ಗಾಳಿ, ಸಿಡಿಲು ಮಿಂಚಿನಿಂದ ಕೂಡಿದ ಮಳೆಯಾಗುತ್ತಿದೆ. ಹೀಗಿದ್ದೂ ಧಗೆ ಪ್ರಮಾಣ ಕಡಿಮೆಯಾಗುತ್ತಿಲ್ಲ.

ಹವಾಮಾನ ಇಲಾಖೆ ಅಂಕಿ ಅಂಶಗಳ ಪ್ರಕಾರ ಏಪ್ರಿಲ್ ತಿಂಗಳಲ್ಲಿ ತಾಪಮಾನದಲ್ಲಿ ಭಾರೀ ಏರಿಕೆಯಾಗಿತ್ತು. ಏ.8ರಿಂದ 14ರವರೆಗೆ ಗರಿಷ್ಠ ತಾಪಮಾನ 34ರಿಂದ 35 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು. ಏ.17ರಂದು 34 ಡಿಗ್ರಿ ಸೆಲ್ಸಿಯಸ್‌ಗೆ ಇಳಿದ ತಾಪಮಾನ, ನಂತರದ ದಿನಗಳಲ್ಲಿ 25ರಿಂದ 27 ಡಿಗ್ರಿ ಸೆಲ್ಸಿಯಸ್‌ನಷ್ಟು ದಾಖಲಾಯಿತು. ಏ.23ರಿಂದ 26ರ ಅವಧಿಯಲ್ಲಿ 36ರಿಂದ 37 ಡಿಗ್ರಿಯಷ್ಟು ದಾಖಲಾಗಿತ್ತು. ನಂತರದ ದಿನಗಳಲ್ಲಿ 36–37 ಡಿಗ್ರಿ ಸೆಲ್ಸಿಯಸ್‌ನಲ್ಲೇ ಗಿರಕಿ ಹೊಡೆಯುತ್ತಿರುವ ಉಷ್ಣಾಂಶ ಜನರನ್ನು ಬಿಸಿಲ ಧಗೆಯಿಂದ ಕಂಗಾಲಾಗುವಂತೆ ಮಾಡಿದೆ. ಈ ಅವಧಿಯಲ್ಲಿ ಕನಿಷ್ಠ ತಾಪಮಾನ 22ರಿಂದ 23 ಡಿಗ್ರಿ ಸೆಲ್ಸಿಯಸ್‌ನಷ್ಟಿದೆ. ಬಿಸಿಲ ಬೇಗೆಯಿಂದ ಬಸವಳಿದಿರುವ ಜನರು ಎಸಿ, ಏರ್ ಕೂಲರ್, ಫ್ಯಾನ್, ಫ್ರಿಡ್ಜ್‌ಗಳ ಮೊರೆ ಹೋಗುವಂತಾಗಿದೆ.

ನಾಗನಹಳ್ಳಿ ಕೃಷಿ ಹವಾಮಾನ ಕ್ಷೇತ್ರ ವಿಭಾಗ ಮೇ 3ರಂದು ನೀಡಿರುವ ಮಾಹಿತಿ ಪ್ರಕಾರ ಮೇ 4ರಿಂದ 8ರವರೆಗೆ ಗರಿಷ್ಠ ತಾಪಮಾನ 35 ಡಿಗ್ರಿ ಸೆಲ್ಸಿಯಸ್ ಇರಲಿದೆ ಎಂದು ಅಂದಾಜಿಸಿದೆ. ಈ ನಡುವೆ ಮೈಸೂರು ಜಿಲ್ಲೆಯಲ್ಲಿ ಮಳೆಯಾಗುವ ಸಾಧ್ಯತೆ ಬಗ್ಗೆಯೂ ತಿಳಿಸಿದೆ. ಕಳೆದ 2016ರ ಏಪ್ರಿಲ್ ತಿಂಗಳ 22ರಂದು ಮೈಸೂರಿನಲ್ಲಿ ಅತೀ ಹೆಚ್ಚಿನ ಉಷ್ಣಾಂಶ 39.9 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು.

ಎಸಿ, ಕೂಲರ್, ರೆಫ್ರಿಜೆರೇಟರ್, ಫ್ಯಾನ್ ಭರ್ಜರಿ ಮಾರಾಟ





ಮೈಸೂರಿನ ವಿವಿಧ ಎಲೆಕ್ಟ್ರಾನಿಕ್ ಮಳಿಗೆಗಳಲ್ಲಿ ಎಸಿ, ಕೂಲರ್‌ಗಳನ್ನು ಖರೀದಿಸುತ್ತಿರುವ ಗ್ರಾಹಕರು.

ಕಳೆದ ಹಲವು ದಿನಗಳಿಂದ ದಿನೇ ದಿನೇ ಬಿಸಿಲಿನ ತಾಪಮಾನ ಹೆಚ್ಚುತ್ತಿದೆ. ರಣ ಬಿಸಿಲು ಮತ್ತು ಧಗೆಯಿಂದ ಜನರು ತತ್ತರಿಸಿದ್ದಾರೆ. ಹಗಲು ಹೊತ್ತಿನಲ್ಲಿ ಬಿಸಿಲಿನ ಝಳ, ರಾತ್ರಿ ಸೆಖೆಯ ತೀವ್ರತೆಯಿಂದ ನೆಮ್ಮದಿಯ ನಿದ್ದೆಯೂ ಇಲ್ಲದೆ ಕಂಗೆಟ್ಟಿದ್ದಾರೆ. ಹೀಗಾಗಿ ಜನರು ಎಸಿ, ಏರ್ ಕೂಲರ್, ಫ್ಯಾನ್, ಫ್ರಿಡ್ಜ್‌ಗಳ ಮೊರೆ ಹೋಗುತ್ತಿದ್ದಾರೆ. ಇವುಗಳ ಖರೀದಿಗೆ ಶೋರೂಂಗಳತ್ತ ಧಾವಿಸುತ್ತಿದ್ದಾರೆ. ಹೀಗಾಗಿ ಇವುಗಳ ಬೇಡಿಕೆಯೂ ಹೆಚ್ಚುತ್ತಿದೆ.

ಮೈಸೂರಿನ ಪ್ರಮುಖ ಎಲೆಕ್ಟ್ರಾನಿಕ್ ಶೋ ರೂಂಗಳಿಗೆ 'ಮೈಸೂರು ಮಿತ್ರ' ಭೇಟಿ ನೀಡಿದಾಗ ಜನರು ಏಸಿ (ಏರ್ ಕಂಡೀಷನರ್), ಏರ್‌ಕೂಲರ್‌ಗಳನ್ನು ಅಧಿಕ ಪ್ರಮಾಣದಲ್ಲಿ ಖರೀದಿಸುತ್ತಿದ್ದುದು ಕಂಡು ಬಂದಿತು.


ಮೈಸೂರು ನಗರದ ಪ್ರಮುಖ ಎಲೆಕ್ಟ್ರಾನಿಕ್ ಶೋ ರೂಂ ಶುಭಂ ಎಲೆಕ್ಟ್ರಾನಿಕ್ಸ್‌ನಲ್ಲಿ ಪ್ರತಿದಿನ ಏರ್ ಕಂಡಿಷನ್, ಕೂಲರ್‌ಗಳಿಗೆ ಭಾರೀ ಬೇಡಿಕೆ ಬಂದಿದೆ. ಪ್ರತಿಯೊಂದು ಶಾಖೆಯಲ್ಲೂ ಪ್ರತಿದಿನ ಕನಿಷ್ಠ 10ರಿಂದ 15 ಎಸಿ, ಏರ್ ಕೂಲರ್‌ಗಳ ಮಾರಾಟವಾಗುತ್ತಿದೆ. ಅಂಕಿ ಅಂಶಗಳ ಪ್ರಕಾರ ಕಳೆದ ಏಪ್ರಿಲ್‌ನಲ್ಲಿ 150 ಏರ್ ಕಂಡಿಷನ್, 400 ಏರ್‌ಕೂಲರ್, 400 ಫ್ಯಾನ್‌ಗಳು ಹಾಗೂ 300 ರೆಫ್ರಿಜಿರೇಟರ್‌ಗಳ ಮಾರಾಟವಾಗಿದೆ ಎನ್ನುತ್ತಾರೆ ಶುಭಂ ಎಲೆಕ್ಟ್ರಾನಿಕ್ಸ್‌ನ ಉಪ ಪ್ರಧಾನ ವ್ಯವಸ್ಥಾಪಕ ಎಂ.ಆರ್.ಲೋಹಿತ್.

ಕೇವಲ ಏಸಿ, ಏರ್ ಕೂಲರ್ ಅಷ್ಟೇ ಅಲ್ಲ, ಫ್ಯಾನ್‌ಗಳು, ರೆಫ್ರಿಜಿರೇಟರ್‌ಗಳಿಗೂ ಭಾರೀ ಬೇಡಿಕೆ ಬಂದಿದೆ. ಗ್ರಾಹಕರಿಗೆ ಬೇಸಿಗೆ ಆಫರ್ ಸಹ ನೀಡುತ್ತಿದ್ದೇವೆ ಎಂದು ಅವರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮೈಸೂರಿನ ಮತ್ತೊಂದು ಪ್ರಮುಖ ಶೋ ರೂಂ ಶ್ರೀಕಂಠೇಶ್ವರ ಎಲೆಕ್ಟ್ರಾನಿಕ್ಸ್‌ನಲ್ಲಿಯೂ ಎಸಿ, ಏರ್ ಕೂಲರ್, ಫ್ಯಾನ್, ರೆಫ್ರಿಜಿರೇಟರ್‌ಗಳಿಗೆ ಭಾರೀ ಬೇಡಿಕೆ ಹೆಚ್ಚಿದೆ. ಒಟ್ಟಾರೆ ತಮ್ಮ ಶಾಖೆಗಳಲ್ಲಿ ಪ್ರತಿನಿತ್ಯ ಕನಿಷ್ಠ 15 ಎಸಿ, ಏರ್ ಕೂಲರ್‌ಗಳು, ಹೆಚ್ಚಿನ ಫ್ಯಾನ್‌ಗಳು ಮಾರಾಟವಾಗುತ್ತಿದೆ ಎಂದು ಪ್ರದೇಶ ಮಾರಾಟ ವ್ಯವಸ್ಥಾಪಕ ಸಾದಿಕ್ ಪಾಷಾ 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ಮಳೆ ಸಾಧ್ಯತೆ



ಮೇ 4ರಿಂದ 8ರವರೆಗಿನ ಐದು ದಿನಗಳ ಅವಧಿಯಲ್ಲಿ ಒಟ್ಟು 41 ಮಿ.ಮೀ., ಮಂಡ್ಯ ಜಿಲ್ಲೆಯಲ್ಲಿ 27 ಮಿ.ಮೀ., ಕೊಡಗು ಜಿಲ್ಲೆಯಲ್ಲಿ 42 ಮಿ.ಮೀ., ಚಾ.ನಗರ ಜಿಲ್ಲೆಯಲ್ಲಿ 43 ಮಿ.ಮೀ.ನಷ್ಟು ಮಳೆಯಾಗುವ ಸಾಧ್ಯತೆ ಇದೆ. ಒಟ್ಟಾರೆ ಈ ಅವಧಿಯಲ್ಲಿ ತುಂತುರುವಿನಿಂದ ಸಾಧಾರಣ ಮಳೆ ಬೀಳುವ ಮುನ್ಸೂಚನೆ ನೀಡಿದೆ.

ಗೋದ್ರೆಜ್, ಎಲ್‌ಜಿ, ಲಾಯ್ಡ್, ಬ್ಲೂ ಸ್ಟಾರ್, ವೋಲ್ಟಾಸ್ ಇನ್ನಿತರ ಕಂಪನಿಗಳ ಏರ್ ಕಂಡಿಷನ್‌ಗಳು, ಸಿಂಫೋನಿ, ವೋಲ್ಟಾಸ್, ಹನಿವೆಲ್ ಇನ್ನಿತರ ಕಂಪನಿಗಳ ಏರ್ ಕೂಲರ್‌ಗಳು ಗ್ರಾಹಕರನ್ನು ಸೆಳೆಯುತ್ತಿವೆ. ಇವುಗಳ ಮೇಲೆ ಭಾರೀ ರಿಯಾಯಿತಿಯ ಆಫರ್‌ಗಳನ್ನು ಶೋ ರೂಂಗಳು ನೀಡುವ ಮೂಲಕ ಗ್ರಾಹಕರಿಗೆ ತಂಪು ನೀಡುತ್ತಿವೆ.

ಜನನಿಬಿಡ ಪ್ರದೇಶದಲ್ಲಿನ ಬಾರ್ ಅಂಡ್ ರೆಸ್ಟೋರೆಂಟ್ ಸ್ಥಳಾಂತರಿಸದಿದ್ದರೆ

ಜಿಲ್ಲಾಧಿಕಾರಿ ಕಚೇರಿ ಮುಂದೆ ಅಹೋರಾತ್ರಿ ಧರಣಿ

ಪುರಸಭಾ ಸದಸ್ಯ ಆರ್.ಅರ್ಜುನ್ ರಮೇಶ್ ಎಚ್ಚರಿಕೆ



ತಿ.ನರಸೀಪುರದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಪುರಸಭಾ ಸದಸ್ಯ ಅರ್ಜುನ್ ರಮೇಶ್ ಮಾತನಾಡಿದರು.

ತಿ.ನರಸೀಪುರ, ಮೇ 4(ಎಸ್‌ಕೆ)– ಸರ್ಕಾರಿ ಶಾಲೆ, ದೇವಸ್ಥಾನ, ಹಾಸ್ಟೆಲ್ ಹಾಗೂ ಜನವಸತಿ ಪ್ರದೇಶದಲ್ಲಿ ತೆರೆಯಲಾಗಿರುವ ವಿವಾದಿತ ಬಾರ್ ಅಂಡ್ ರೆಸ್ಟೋರೆಂಟ್ ಕೂಡಲೇ ತೆರವುಗೊಳಿಸದಿದ್ದರೆ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಅಹೋರಾತ್ರಿ ಧರಣಿ ನಡೆಸಲಾಗುತ್ತದೆ ಎಂದು ಪುರಸಭಾ ಸದಸ್ಯ ಆರ್. ಅರ್ಜುನ್ ರಮೇಶ್ ಎಚ್ಚರಿಸಿದರು.

ಪಟ್ಟಣದ ಪುರಸಭೆಯಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪುರಸಭೆಯಲ್ಲಿ ಅಕ್ರಮ ತಾಂಡವವಾಡುತ್ತಿದೆ. ಆಡಳಿತ ಸದಸ್ಯರ ಸಮಿತಿ ಗಮನಕ್ಕೆ ತಾರದೇ ಅಕ್ರಮವಾಗಿ ಬಾರ್ ಅಂಡ್ ರೆಸ್ಟೋರೆಂಟ್ ತೆರೆಯಲು ಅನುಮತಿ ನೀಡಲಾಗಿದೆ. ರಾಷ್ಟ್ರೀಯ ಹೆದ್ದಾರಿಯಲ್ಲಿ ಬಾರ್ ಅಂಡ್ ರೆಸ್ಟೋರೆಂಟ್ ತೆರೆದಿದ್ದು, ದೇವಸ್ಥಾನ ಹಾಗೂ ಶಾಲೆಯಿಂದ 30 ಮೀಟರ್ ಅಂತರ ವಿಲ್ಲದಿದ್ದರೂ ಅಬಕಾರಿ ಇಲಾಖೆ ಅಧಿಕಾರಿಗಳು ಪರವಾನಗಿ ನೀಡಿದ್ದಾರೆ. ಅದನ್ನು ಪ್ರಶ್ನಿಸಿದರೆ ನಿಮ್ಮ ಪುರಸಭೆಯಿಂದಲೇ ಎನ್‌ಓಸಿ ಬಂದಿದೆ. ಹಾಗಾಗಿ ಲೈಸೆನ್ಸ್ ಕೊಟ್ಟಿರುವುದಾಗಿ ಅಧಿಕಾರಿಗಳು ಸಮರ್ಥಿಸಿಕೊಳ್ಳುತ್ತಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪುರಸಭೆಯವರು ನೀಡಿರುವ ಎನ್‌ಓಸಿಯಲ್ಲಿ ಲಾಡ್ಜಿಂಗ್ ಮತ್ತು ರೆಸ್ಟೋರೆಂಟ್ ತೆರೆಯಲು ಮತ್ತು 2021ರ ನ.6ರಲ್ಲಿ ಈಗಿನ ಮುಖ್ಯಾಧಿಕಾರಿ ಬಸವರಾಜು ಉದ್ದಿಮೆ ಪರವಾನಗಿ ನೀಡಿದ್ದು, ಲೈಸೆನ್ಸ್ ನೀಡಿರುವ ಉದ್ದೇಶ ಬಿಟ್ಟು ಬಾರ್ ತೆರೆಯಲಾಗಿದೆ. ಲಾಡ್ಜಿಂಗ್ ಅಂಡ್ ರೆಸ್ಟೋರೆಂಟ್ ಎಂದು ಲೈಸೆನ್ಸ್ ಪಡೆದು ಬಾರ್ ಅಂಡ್ ರೆಸ್ಟೋರೆಂಟ್ ನಡೆಸಬಹುದು ಎಂದು ಅಬಕಾರಿಯವರು ಉತ್ತರಿಸುತ್ತಿದ್ದು, ಇದಕ್ಕೆ ಮುಂದೆ ಅವರೇ ದಾಖಲೆ ನೀಡಬೇಕಾಗುತ್ತದೆ ಎಂದರು.

ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅಬಕಾರಿ ಇಲಾಖೆಯವರು ಬಾರ್ ಅಂಡ್ ರೆಸ್ಟೋರೆಂಟ್ ತೆರೆಯಲು ಪುರಸಭೆಯವರ ಅನುಮತಿ ಬೇಕಾಗಿಲ್ಲ ಎನ್ನುವ ಉಡಾಫೆಯ ಉತ್ತರ ನೀಡುತ್ತಿದ್ದಾರೆ ಎಂದು ಆರೋಪಿಸಿದ ಅರ್ಜುನ್, ಉದ್ದೇಶಿತ ವ್ಯಾಪಾರಕ್ಕೆ ಮೊದಲು ಸ್ಥಳೀಯ ಮುಖ್ಯಸ್ಥರಿಂದ ಸ್ಥಳ ಪರಿಶೀಲನೆಯಾಗಬೇಕು, ನಂತರ ಎನ್‌ಓಸಿ ನೀಡಬೇಕು. ಆದರೆ ಯಾವುದೇ ಪರಿಶೀಲನೆಯಾಗದೇ ಎಲ್ಲಾ ದಾಖಲೆಗಳು ಸರಿ ಇವೆ ಎಂದು ಹೇಳುತ್ತಿರುವ ಅಬಕಾರಿ ಇಲಾಖೆ ಇದರಲ್ಲಿ ಶಾಮೀಲಾಗಿವೆ ಎಂದು ದೂರಿದರು.

ಮುಖ್ಯಾಧಿಕಾರಿ ಎಡವಟ್ಟು: ಪುರಸಭೆ ಮುಖ್ಯಾಧಿಕಾರಿ ಬಸವರಾಜು, ಲಾಡ್ಜಿಂಗ್ ಮತ್ತು ರೆಸ್ಟೋರೆಂಟ್ ನಡೆಸಲು ಸಿದ್ದಪ್ಪ ಅವರ ಪುತ್ರ ದಿನಕರ ನಾಯ್ಕ್ ಅವರಿಗೆ 2021ರ ನ.6ರಲ್ಲಿ ಉದ್ದಿಮೆ ಪರವಾನಗಿ ಪತ್ರ ನೀಡಿದ್ದು, ಈಗ ಯೂಟರ್ನ್ ಹೊಡೆದಿದ್ದಾರೆ. ಬಾರ್ ಅಂಡ್ ರೆಸ್ಟೋರೆಂಟ್‌ಗೆ ಲೈಸೆನ್ಸ್ ನೀಡೇ ಇಲ್ಲ ಎಂದು ತಮ್ಮನ್ನು ಸಮರ್ಥಿಸಿಕೊಳ್ಳಲು ಹೊರಟಿರುವ ಅವರು ಕೊಳ್ಳೇಗಾಲ ಮುಖ್ಯರಸ್ತೆಯಲ್ಲಿ ತೆರೆಯಲಾಗಿರುವ ಬಾರ್ ಅಂಡ್ ರೆಸ್ಟೋರೆಂಟ್ ಆಸುಪಾಸಿನಲ್ಲಿ ಸರ್ಕಾರಿ ಶಾಲೆ, ಹಾಸ್ಟೆಲ್, ದೇವಸ್ಥಾನ ವಸತಿ ಪ್ರದೇಶವಿದ್ದು, ನಮ್ಮ ಕಚೇರಿಯಿಂದ ಯಾವುದೇ ಅನುಮತಿ ಪಡೆದಿಲ್ಲವಾದ್ದರಿಂದ ಕೂಡಲೇ ಬೇರೆಡೆಗೆ ಸ್ಥಳಾಂತರಿಸುವಂತೆ ಅಬಕಾರಿ ನಿರೀಕ್ಷಕರಿಗೆ ಪತ್ರ ಬರೆದಿರುವುದು ಕುತೂಹಲ ಮೂಡಿಸಿದೆ. ಈ ಕುರಿತಂತೆ ಪ್ರಸ್ತಾಪಿಸಿದ ಅರ್ಜುನ್ ಮುಖ್ಯಾಧಿಕಾರಿಯವರೇ ಲೈಸೆನ್ಸ್ ನೀಡಿ, ಈಗ ಅವರೇ ನಮ್ಮ ಕಚೇರಿಯಿಂದ ಅನುಮತಿ ಪಡೆದಿಲ್ಲ ಎಂದು ಉಲ್ಟಾ ಹೊಡೆದಿದ್ದಾರೆ ಎಂದು ದೂರಿದರು.

ಪಟ್ಟಣ ಪುರಸಭೆಯಲ್ಲಿ ನಡೆಯುತ್ತಿರುವ ಅಕ್ರಮದ ಬಗ್ಗೆ ಜಿಲ್ಲಾಧಿಕಾರಿಗಳು ಭೇಟಿ ನೀಡಿ, ಕಡತಗಳನ್ನು ಪರಿಶೀಲಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ ಅರ್ಜುನ್, ಪಟ್ಟಣದಲ್ಲಿ ಅಕ್ರಮವಾಗಿ ನಿರ್ಮಾಣವಾಗಿರುವ ಬಾರ್ ಅಂಡ್ ರೆಸ್ಟೋರೆಂಟ್ ಅನ್ನು ಸೋಮವಾರದೊಳಗೆ ಸ್ಥಳಾಂತರಗೊಳಿಸದಿದ್ದರೆ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಅಹೋರಾತ್ರಿ ಧರಣಿ ನಡೆಸಬೇಕಾಗುತ್ತದೆ ಎಂದು ಮನದಟ್ಟಿಸಿದರು.

ಪುರಸಭಾ ಸದಸ್ಯ ಶಿವಣ್ಣ, ಬಾಬು ಜಗಜೀವನರಾಮ್ ಸಂಘದ ಅಧ್ಯಕ್ಷ ಮಲಿಯೂರು ಡಿ.ಶಂಕರ್, ಕಾರ್ಯದರ್ಶಿ ಗೋವಿಂದರಾಜು, ಎಸ್‌ಸಿ ಮೋರ್ಚಾ ಮಾಜಿ ಅಧ್ಯಕ್ಷ ಸಿದ್ದರಾಜು, ಮುಖಂಡರಾದ ಸಿ.ಡಿ.ವೆಂಕಟೇಶ್, ಮಹದೇವ ಮತ್ತಿತರರಿದ್ದರು.

ಬಾರ್ ಮಾಲೀಕರ ದರ್ಪ...

ಪಟ್ಟಣದ ವಿವಿಧೆಡೆ ಸರ್ಕಾರಿ ಮಳಿಗೆಯಲ್ಲಿ ಟ್ರೇಡಿಂಗ್ ಲೈಸೆನ್ಸ್ ಪಡೆಯದೇ ಅಕ್ರಮವಾಗಿ ಬಾರ್ ಅಂಡ್ ರೆಸ್ಟೋರೆಂಟ್ ನಡೆಸುವ ಮೂಲಕ ಬಾರ್ ಮಾಲೀಕರು ದರ್ಪ ಪ್ರದರ್ಶಿಸುತ್ತಿದ್ದಾರೆ. ಲಿಂಕ್ ರಸ್ತೆಯಲ್ಲಿರುವ ಬಾರ್ ಮಾಲೀಕರು ಸರ್ಕಾರಿ ಕಟ್ಟಡದ ಮೇಲೆ ಮತ್ತೊಂದು ಕಟ್ಟಡ ನಿರ್ಮಾಣ ಮಾಡಿಕೊಂಡು ಉದ್ದಿಮೆ ಮಾಡುತ್ತಿದ್ದಾರೆ. ಸರ್ಕಾರಿ ಕಟ್ಟಡ ಇವರ ಸ್ವಂತ ಆಸ್ತಿ ಎಂಬಂತೆ ವರ್ತಿಸುತ್ತಿದ್ದು, ಕ್ರಮ ಕೈಗೊಳ್ಳಬೇಕಾದ ಮುಖ್ಯಾಧಿಕಾರಿಗಳು ಕಾನೂನು ಮೀರಿ, ತಮಗಿಷ್ಟ ಬಂದಂತೆ ವರ್ತಿಸುತ್ತಿದ್ದಾರೆ. ಪುರಸಭೆ ಕಚೇರಿಯ 50 ಮೀಟರ್ ಅಂತರದಲ್ಲಿ ಸರ್ಕಾರಿ ಕಟ್ಟಡದಲ್ಲಿ ಮತ್ತೊಂದು ಬಾರ್ ನಡೆಯುತ್ತಿದೆ. ಈ ಹಿಂದೆ ಬಾರ್‌ನವರಿಗೆ ಲೈಸೆನ್ಸ್ ನೀಡಲು ಪುರಸಭೆಯ ಪ್ರವೇಶ ದ್ವಾರವನ್ನೇ ಬೇರೆಡೆಗೆ ವರ್ಗಾಯಿಸಿದ ಕೀರ್ತಿ ಪುರಸಭೆ ಅಧಿಕಾರಿಗಳಿಗೆ ಸಲ್ಲುತ್ತದೆ ಎಂದು ಅರ್ಜುನ್ ವ್ಯಂಗ್ಯವಾಡಿದರು.



ತಿ.ನರಸೀಪುರದಲ್ಲಿ ತಾಲೂಕು ಆಡಳಿತ ಹಾಗೂ ಅಖಿಲ ಭಾರತ ವೀರಶೈವ ಮಹಾಸಭಾದಿಂದ ಆಯೋಜಿಸಿದ್ದ 'ಬಸವ ಜಯಂತ್ಯೋತ್ಸವ' ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಸುತ್ತೂರು ಜೆಎಸ್‌ಎಸ್ ಸಂಸ್ಥೆಗಳ ಸಂಯೋಜನಾಧಿಕಾರಿ ಜಿ.ಎಲ್.ತ್ರಿಪುರಾಂತಕ ಅವರನ್ನು ವರುಣಾ ಕ್ಷೇತ್ರದ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ ಸನ್ಮಾನಿಸಿದರು. ಚಿತ್ರದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ ಹಾಗೂ ಇತರರನ್ನು ಕಾಣಬಹುದು.

ಹುಣಸೂರಿನಲ್ಲಿ ವಿಶ್ವ ಕಾರ್ಮಿಕರ ದಿನಾಚರಣೆ

ಹುಣಸೂರು, ಮೇ 4(ಕೆಕೆ)–ಕಾರ್ಮಿಕ ಹಕ್ಕುಗಳನ್ನು ರಕ್ಷಿಸಬೇಕಾದ ಸರ್ಕಾರಗಳೇ ಕಾರ್ಮಿಕರ ಹಕ್ಕುಗಳನ್ನು ವಂಚಿಸುವ ಕೆಲಸ ಮಾಡುತ್ತಿವೆ ಎಂದು ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಸಂವಿಧಾನ ಸರ್ಕಲ್‌ನಲ್ಲಿ ಸಿಐಟಿಯುನಿಂದ ಹಮ್ಮಿಕೊಂಡಿದ್ದ ವಿಶ್ವ ಕಾರ್ಮಿಕ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕಾರ್ಮಿಕರನ್ನು ರಕ್ಷಿಸಬೇಕಿದ್ದ ಸರ್ಕಾರಗಳು ಗುತ್ತಿಗೆ ಪದ್ಧತಿ ಜಾರಿ ಮಾಡುತ್ತಿವೆ ಎಂದು ಆರೋಪಿಸಿದರು.

ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕಿದ್ದ ಸರ್ಕಾರಗಳು ಬಂಡವಾಳಶಾಹಿಗಳ ಪರವಾಗಿ ಕಾನೂನು ಜಾರಿಗೊಳಿಸಿ ಕಾರ್ಮಿಕರನ್ನು ಶೋಷಿಸುವ ಪ್ರಯತ್ನ ಮಾಡುತ್ತಿವೆ ಎಂದು ದೂರಿದರು. ಸಿಐಟಿಯು ಮುಖಂಡ ಬಸವರಾಜು. ವಿ.ಕಲ್ಲುಣಿಕೆ, ಪ್ರಗತಿಪರ ಚಿಂತಕ ಎಚ್.ಕೆ ಗೋವಿಂದರಾಜು ಹೈರಿಗೆ ಮಾತನಾಡಿದರು. ಸಿಪಿಎಂ ತಾಲೂಕು ಕಾರ್ಯದರ್ಶಿ ಬೆಳ್ತೂರು ವೆಂಕಟೇಶ್, ಕೆಪಿಆರ್‌ಎಸ್‌ನ ಚಿಕ್ಕಣ್ಣೇಗೌಡ, ಸಿದ್ದಯ್ಯ, ಚಂದ್ರಶೇಖರ್, ಅಭಿಮನ್ಯು, ಮುಖಂಡರಾದ ಶಿವರಾಮು, ರಾಜೇಶ್, ಮಲ್ಲೇಶ್, ಆದಿಜಾಂಬವ ಸಂಘದ ಅಧ್ಯಕ್ಷ ಜೆ ಮಹದೇವ್ರ, ಪೀಸ್ ಕಮಿಟಿಯ ಸೈಯದ್ ರಿಜ್ವಾನ್, ಹೆಚ್.ಜೆ. ಜಗದೀಶ್, ಮುಳ್ಳೂರು ಮಹದೇವ ಮತ್ತಿತರರಿದ್ದರು.



ಕೃಷಿ ಅಭಿಯಾನ ರಥಕ್ಕೆ ಶಾಸಕ ಹರ್ಷವರ್ಧನ್ ಚಾಲನೆ



ನಂಜನಗೂಡು, ಮೇ 4– ಕೃಷಿ ಕ್ಷೇತ್ರವನ್ನು ಉತ್ತೇಜಿಸಿ ರೈತರ ಆದಾಯ ದ್ವಿಗುಣಗೊಳಿಸುವ ಸಲುವಾಗಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಅನೇಕ ಯೋಜನೆಗಳನ್ನು ಜಾರಿಗೊಳಿಸಿವೆ. ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಶಾಸಕ ಬಿ.ಹರ್ಷವರ್ಧನ್ ಹೇಳಿದರು.

ನಗರದ ಕೃಷಿ ಇಲಾಖೆ ಕಚೇರಿ ಆವರಣದಲ್ಲಿ ಇಲಾಖೆಗಳ ನಡಿಗೆ–ರೈತರ ಮನೆ ಬಾಗಿಲಿಗೆ ಎಂಬ ಕೃಷಿ ಅಭಿಯಾನ ರಥಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಕೃಷಿ ಲಾಭದಾಯಕ ಕ್ಷೇತ್ರವಲ್ಲ ಎಂದು ಇತ್ತೀಚಿನ ದಿನಗಳಲ್ಲಿ ಕೃಷಿಯಿಂದ ವಿಮುಖರಾಗುವ ಪ್ರವೃತ್ತಿ ಹೆಚ್ಚಾಗುತ್ತಿದೆ. ಕೃಷಿ ವೆಚ್ಚವನ್ನು ಕಡಿಮೆ ಮಾಡಿ ಆದಾಯ ಹೆಚ್ಚಿಸಲು ಸರ್ಕಾರಗಳು ಅನೇಕ ಯೋಜನೆಗಳನ್ನು ಜಾರಿಗೊಳಿಸಿದೆ. ಬಿತ್ತನೆ ಬೀಜ ಯೋಜನೆಯಡಿ ಶೇ.50 ರಿಂದ ಶೇ75 ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಿಸಲಾಗುತ್ತಿದೆ. ಲಘು ನೀರಾವರಿ ಯೋಜನೆಯಡಿ ತುಂತುರು ನೀರಾವರಿ ಉಪಕರಣಗಳನ್ನು ಹಾಗೂ ಆಧುನಿಕ ಯಂತ್ರೋಪಕರಣಗಳು ಸಬ್ಸಿಡಿ ದರದಲ್ಲಿ ವಿತರಿಸಲಾಗುತ್ತಿದೆ. ಫಸಲ್ ಬೀಮಾ, ಕೃಷಿ ಸಿಂಚಾಯ್, ಕಿಸಾನ್ ಸಮ್ಮಾನ್ ಯೋಜನೆಗಳು ರೈತರಿಗೆ ವರದಾನವಾಗಿವೆ ಎಂದ ಅವರು ಈ ಬಾರಿ ಉತ್ತಮ ಮಳೆಯಾಗುವ ನಿರೀಕ್ಷೆಯಿದ್ದು ರೈತರಿಗೆ ಕೊರತೆಯಾಗದಂತೆ ಬಿತ್ತನೆ ಬೀಜ ಪೂರೈಕೆಗೆ ಕ್ರಮ ವಹಿಸಲಾಗಿದೆ ಎಂದರು.

ಕೃಷಿ ಸಹಾಯಕ ನಿರ್ದೇಶಕ ದೀಪಕ್ ಮಾತನಾಡಿದರು. ನಗರಸಭಾಧ್ಯಕ್ಷ ಎಚ್.ಎಸ್. ಮಹದೇವಸ್ವಾಮಿ, ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗ ನಾಯಕ, ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಕುಂಬ್ರಳ್ಳಿಸುಬ್ಬಣ್ಣ, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ ಮುಖಂಡರಾದ ಸಿದ್ದರಾಜು, ಎಪಿಎಂಸಿ ಮಾಜಿ ಅಧ್ಯಕ್ಷ ಮುದ್ದು ಮಾದ ಶೆಟ್ಟಿ, ಚೆನ್ನಪ್ಪ, ಕೃಷಿ ಇಲಾಖೆ ಅಧಿಕಾರಿಗಳಾದ ತೇಜಸ್ವಿ, ವಿರೂಪಾಕ್ಷ, ಸೋಮ ಸುಂದರ್ ಇದ್ದರು.



ಟೊಬ್ಯಾಕೋ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ವತಿಯಿಂದ ಹುಣಸೂರಿನಲ್ಲಿ ನಡೆದ ತಂಬಾಕು ಬೆಳೆಗಾರರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಿರಿಯಾಪಟ್ಟಣ ತಾಲೂಕು ಹರಿಲಾಪುರ ರೈತ ಹೆಚ್.ಎಂ.ಪರಮೇಶ್ ಅವರಿಗೆ 'ಅತ್ಯುತ್ತಮ ತಂಬಾಕು ಬೆಳೆಗಾರ' ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಸಂಸದ ಪ್ರತಾಪ್ ಸಿಂಹ, ಶಾಸಕ ಹೆಚ್.ಪಿ.ಮಂಜುನಾಥ್, ಕೆ.ಮಹದೇವ್, ಟೊಬ್ಯಾಕೋ ಬೋರ್ಡ್ ಛೇರ್ಮನ್ ರಘುನಾಥ್ ಬಾಬು, ಇ.ಡಿ.ಶ್ರೀಧರ್ ಬಾಬು, ಸಿಟಿಆರ್‌ಐನ ದಾಮೋಧರ್ ರೆಡ್ಡಿ, ನಿರ್ದೇಶಕ ಬಿ.ವಿ.ಜವರೇಗೌಡ, ಐಟಿಸಿ ಕಂಪನಿ ಪೂರ್ಣೇಶ್ ಮತ್ತಿತರರಿದ್ದರು.

ದಕ್ಷಿಣ ಪದವೀಧರ ಕ್ಷೇತ್ರ ಚುನಾವಣೆ: ಪ್ರಸನ್ನ ಎನ್.ಗೌಡ ಪರ ಪ್ರಚಾರ



ಕೆ.ಆರ್.ನಗರ, ಮೇ 4 (ಕೆಟಿಆರ್)– ದಲಿತ ಸಂಘರ್ಷ ಸಮಿತಿ ಪ್ರತ್ಯೇಕವಾದರೂ ಒಕ್ಕೂಟ ಮಾಡಿಕೊಂಡು ರೈತ ಸಂಘದ ಬೆಂಬಲಿತ ಅಭ್ಯರ್ಥಿ ಪ್ರಸನ್ನ ಎನ್.ಗೌಡ ಅವರಿಗೆ ಬೆಂಬಲ ಸೂಚಿಸಿರುವುದಕ್ಕೆ ಕೃತಜ್ಞತೆ ಸಲ್ಲಿಸುವುದರ ಜತೆಗೆ ಸಿಪಿಐ, ಜನಶಕ್ತಿ, ಆದಿವಾಸಿಗಳ ಸಂಘವು ಬೆಂಬಲ ನೀಡಿದ್ದು ಜೂನ್ ತಿಂಗಳಲ್ಲಿ ನಡೆಯುವ ಪದವೀಧರರ ಚುನಾವಣೆಯಲ್ಲಿ ಪ್ರಸನ್ನ.ಎನ್.ಗೌಡ ಜಯಗಳಿಸಲಿದ್ದಾರೆ ಎಂದು ರೈತ ಮುಖಂಡ ಬಡಗಲಪುರ ನಾಗೇಂದ್ರ ಹೇಳಿದರು.

ಪಟ್ಟಣದ ಪಿಎಲ್‌ಡಿ ಬ್ಯಾಂಕ್ ರೈತ ಸಮುದಾಯ ಭವನದಲ್ಲಿ ನಡೆದ ರೈತ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಪದವೀಧರರ ಚುನಾವಣೆಯಲ್ಲಿ ಈವರೆಗೆ ಇತರ ಪಕ್ಷಗಳಿಗೆ ರೈತ ಸಂಘಟನೆಗಳ ಒಕ್ಕೂಟ ಬೆಂಬಲ ನೀಡುತ್ತಾ ಬಂದಿತ್ತು ಆದರೆ ಈ ಬಾರಿ ರೈತರ ಬಗ್ಗೆ ಸದಾ ಕಾಳಜಿ ವಹಿಸುವ ಅಭ್ಯರ್ಥಿ ಚುನಾವಣೆಗೆ ಸ್ಪರ್ಧೆ ಮಾಡಿದ್ದು ಪ್ರಸನ್ನ ಅವರ ಗೆಲುವಿಗೆ ನಾವೆಲ್ಲರೂ ದುಡಿಯಬೇಕು ಎಂದರು.

ಸಭೆಯಲ್ಲಿ ರೈತ ಸಂಘದ ವಿಭಾಗೀಯ ಕಾರ್ಯದರ್ಶಿ ಸರಗೂರು ನಟರಾಜ್, ಮರಂಕಯ್ಯ, ಗುರುಪ್ರಸಾದ್, ದಲಿತ ಮುಖಂಡರಾದ ಡಿ.ಕೆ.ಕೊಪ್ಪಲು ರಾಜಯ್ಯ, ಚೆಲುವರಾಜು, ಕಳ್ಳಿಮುದನಹಳ್ಳಿ ಚಂದ್ರು, ರೈತ ಮುಖಂಡ ರಾದ ಗರುಡಗಂಭಸ್ವಾಮಿ, ನಟರಾಜು, ಎಂ.ಜೆ. ಮಲ್ಲೇಶ್, ಚೀರ್ನಹಳ್ಳಿಶ್ರೀನಿವಾಸ್, ಸಾಲಿಗ್ರಾಮ ಶೇಖರ್, ಶಿವಶಂಕರ್, ಕುಬೇರ, ಜಗದೀಶ್, ಗುರುಮೂರ್ತಿ, ಕಾರ್ತಿಕ್, ಸೋಮೇಗೌಡ, ಬಲರಾಮು ಇದ್ದರು.

ಭಾರೀ ಮಳೆ–ಗಾಳಿಗೆ ಅಪಾರ ಹಾನಿ



ತಾಂಡವಪುರ, ಮೇ 4– ನಂಜನಗೂಡು ತಾಲೂಕಿನ ತಾಂಡವಪುರ ಸೇರಿದಂತೆ ಸುತ್ತಮುತ್ತ ಮಂಗಳವಾರ ರಾತ್ರಿ ಸುರಿದ ಭಾರೀ ಮಳೆ ಗಾಳಿಗೆ ಅಪಾರ ಹಾನಿ ಸಂಭವಿಸಿದೆ.

ತಾಲೂಕು ವರುಣಾ ಕ್ಷೇತ್ರದ ಬಂಚಹಳ್ಳಿ ಹುಂಡಿ ಗ್ರಾಮದ ಕಾಂಗ್ರೆಸ್ ಮುಖಂಡ ಮನ್ನೇಗೌಡರ ನಿವೇಶನದಲ್ಲಿದ್ದ ಭಾರೀ ಗೊಬ್ಬಳಿಮರ ಕೆಂಪಶೆಟ್ಟಿ ಅವರ ಮನೆ ಮೇಲೆ ಬಿದ್ದು, ಮನೆ ಹಾನಿಯಾಗಿದೆ. ಸದ್ಯ ಮನೆಯಲ್ಲಿದ್ದ ನಿವಾಸಿಗಳು ಆಶ್ಚರ್ಯಕರ ರೀತಿಯಲ್ಲಿ ಪಾರಾಗಿದ್ದಾರೆ. ಅಲ್ಲದೇ ಇದೇ ಗ್ರಾಮದ ಗ್ರಾಮಪಂಚಾಯಿತಿ ಮಾಜಿ ಉಪಾಧ್ಯಕ್ಷ ಬಿ.ಪಿ.ಮಹದೇವು ಅವರು ತಮ್ಮ ಜಮೀನಿನಲ್ಲಿ ನಿರ್ಮಿಸಿಕೊಂಡಿದ್ದ ಮನೆಯ ಮೇಲ್ಛಾವಣಿ ಹಾರಿಹೋಗಿದೆ. ಲಕ್ಷಾಂತರ ರೂ ನಷ್ಟ ಸಂಭವಿಸಿದೆ.

ಇಂದಿನಿಂದ ವಿದ್ಯುತ್ ವ್ಯತ್ಯಯ

ಬನ್ನೂರು, ಮೇ 4(ಪ್ರಭು)– ಸೆಸ್ಕ್‌ನ ಬನ್ನೂರು ಉಪ ವಿಭಾಗ ವ್ಯಾಪ್ತಿಯಲ್ಲಿನ ಬನ್ನೂರು ಪಟ್ಟಣ, ಚಾಮನಹಳ್ಳಿ, ಕೇತುಪುರ, ಮಾದಿಗಹಳ್ಳಿ, ತುಂಬಲ ಶಾಖೆಯಲ್ಲಿ ವಿದ್ಯುತ್ ಪರಿವರ್ತಕ ಕೇಂದ್ರದ ನಿರ್ವಹಣಾ ಕಾಮಗಾರಿ ನಿಮಿತ್ತ ಮೇ 5ರಿಂದ 15ರ ವರೆಗೆ ಬೆಳಗ್ಗೆ 8.30ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಎಇಇ ಸುಕುಮಾರ್‌ರಾಜ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿಕ್ಷಕ ಮಹೇಶ್ ನಿಧನ

ಭೇರ್ಯ, ಮೇ 4– ಹೊಸ ಅಗ್ರಹಾರ ಗ್ರಾಮದ ವಿಕಲಚೇತನ ಶಿಕ್ಷಕ ಮಹೇಶ್



(54) ಸ್ವಗೃಹದಲ್ಲಿ ಹೃದಯಾಘಾತದಿಂದ ನಿಧನರಾದರು. ಇವರಿಗೆ ವಿಕಲಚೇತನ ಪತ್ನಿ ಹಾಗೂ ಇಬ್ಬರು ಪುತ್ರರಿದ್ದಾರೆ.

ಇವರು ಮೈಸೂರು ಜಿಲ್ಲೆಯ ವಿವಿಧ ಸರ್ಕಾರಿ ಗಿರಿಜನ ಆಶ್ರಮ ಶಾಲೆಯಲ್ಲಿ ಶಿಕ್ಷಕರಾಗಿ 18 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದು, ಪ್ರಸ್ತುತ ಭೀಮನಹಳ್ಳಿ ಗಿರಿಜನ ಆಶ್ರಮ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಜಿಲ್ಲಾ, ತಾಲೂಕಿನ ಅಧಿಕಾರಿಗಳು ಹಾಗೂ ಎಲ್ಲಾ ಶಿಕ್ಷಕರು, ತಾಲೂಕಿನ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿ ನಾರಾಯಣಸ್ವಾಮಿ ಹಾಗೂ ಗಿರಿಜನ ವಿಸ್ತರಣಾ ಅಧಿಕಾರಿಗಳು ಅಂತಿಮ ದರ್ಶನ ಪಡೆದು ಸಾಂತ್ವನ ಹೇಳಿದರು.

ಪಿ.ಎನ್.ಶಿವರುದ್ರಪ್ಪ

ಪಿರಿಯಾಪಟ್ಟಣ, ಮೇ 4– ಪಟ್ಟಣದ ಸಂತೆಪೇಟೆ ನಿವಾಸಿ ಗಣೇಶ ಫ್ಲೋರ್ ಮಿಲ್ ಮಾಲೀಕ ಪಿ.ಎನ್. ಶಿವರುದ್ರಪ್ಪ (60) ಬುಧವಾರ ಸಂಜೆ ನಿಧನರಾದರು.



ಮೃತರು ಪತ್ನಿ, ಪುತ್ರ ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಪಿರಿಯಾಪಟ್ಟಣದ ವೀರಶೈವ ರುದ್ರಭೂಮಿಯಲ್ಲಿ ಗುರುವಾರ ಮಧ್ಯಾಹ್ನ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಧರ್ಮಗಳ ನಡುವೆ ವಿಷಬೀಜ ಬಿತ್ತುತ್ತಿರುವ ಆರ್‌ಎಸ್‌ಎಸ್

ಅಂಬೇಡ್ಕರ್ ಜಯಂತಿಯಲ್ಲಿ ಶಾಸಕ ಪ್ರಿಯಾಂಕ್ ಖರ್ಗೆ ಗಂಭೀರ ಆರೋಪ



ಭೇರ್ಯ, ಮೇ 4– ಬಡವರ ಮಕ್ಕಳಿಗೆ ಕೇಸರಿ ಶಾಲು ಹಾಕಿಸಿ ಜೈ ಶ್ರೀರಾಮ್ ಎಂದು ಘೋಷಣೆ ಕೂಗಿಸಿ ಧರ್ಮಗಳ ನಡುವೆ ಆರ್‌ಎಸ್‌ಎಸ್‌ನವರು ವಿಷ ಬೀಜ ಬಿತ್ತುತ್ತಿದ್ದಾರೆ ಎಂದು ಶಾಸಕ ಪ್ರಿಯಾಂಕ್ ಖರ್ಗೆ ಗಂಭೀರ ಆರೋಪ ಮಾಡಿದ್ದಾರೆ.

ಭೇರ್ಯ ಗ್ರಾಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಯುವಕ ಸಂಘದಿಂದ ಹಮ್ಮಿಕೊಂಡಿದ್ದ ಡಾ.ಬಿ.ಆರ್.ಅಂಬೇಡ್ಕರ್ ಜಯಂತ್ಯುತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕೇಸರಿ ಶಾಲನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಈಶ್ವರಪ್ಪ, ಆರ್.ಅಶೋಕ್, ಅಶ್ವತ್ಥ ನಾರಾಯಣ್, ಎಸ್.ಟಿ.ಸೋಮಶೇಖರ್ ಅವರ ಮಕ್ಕಳಿಗೆ ಏಕೆ ಹಾಕಿಸಲ್ಲ ಎಂದು ಪ್ರಶ್ನಿಸಿದರಲ್ಲದೆ ನಿಮ್ಮ ರಾಜಕೀಯ ತಂತ್ರಕ್ಕೆ ಬಡವರ ಮಕ್ಕಳೇ ಬೇಕಾ ಎಂದು ಪ್ರಶ್ನಿಸಿದರು.

ರಾಜ್ಯದಲ್ಲಿ ಬೆಲೆ ಏರಿಕೆ ಬಗ್ಗೆ ಚರ್ಚಿಸಿ ಎಂದರೆ ಕಾಶ್ಮೀರಿ ಫೈಲ್ ಸಿನಿಮಾ ನೋಡಿ, ನಿರುದ್ಯೋಗ ಸಮಸ್ಯೆ ಬಗ್ಗೆ ಕೇಳಿದರೆ ಹಲಾಲ್ ಕಟ್, ಜಟ್ಕಾ ಕಟ್ ಎನ್ನುತ್ತಾರೆ. ರೈತರ ಸಮಸ್ಯೆ ಹೇಳಿದರೆ ಭಗವದ್ಗೀತೆ ಓದಿ, ನೆರೆ ಪರಿಹಾರದ ಸಮಸ್ಯೆ ಪ್ರಶ್ನಿಸಿದರೆ ಹಿಜಾಬ್, ಅಜಾನ್ ಎಂದೆಲ್ಲಾ ಸಮಸ್ಯೆ ಹುಟ್ಟುಹಾಕಿ ಜಾತಿ ಜಾತಿಗಳ ನಡುವೆ ಸಂಘರ್ಷ, ಗಲಭೆ ಹುಟ್ಟುಹಾಕುವ ಕಾರ್ಯ ರಾಜ್ಯ ಸರ್ಕಾರ ಮಾಡುತ್ತಿದೆ ಎಂದರು.

ಎಲ್ಲರೂ ಒಂದೇ ಎಂದು ಪ್ರಬುದ್ಧ ಸಮಾಜ ನಿರ್ಮಾಣ ಮಾಡಿದ ನಾಯಕ ಡಾ.ಬಿ.ಆರ್.ಅಂಬೇಡ್ಕರ್. ಯುವಕರು ವಾಟ್ಸಪ್, ಫೇಸ್‌ಬುಕ್ ಬಿಟ್ಟು ಪುಸ್ತಕ ಓದಿ ಇತಿಹಾಸ ತಿಳಿದುಕೊಳ್ಳಿ. ಭಗವದ್ಗೀತೆ, ಕುರಾನ್, ಬೈಬಲ್‌ನಿಂದ ದೇಶ ಬೆಳೆದಿಲ್ಲ. ಡಾ.ಬಿ.ಆರ್.ಅಂಬೇಡ್ಕರ್ ಬರೆದ ಸಂವಿಧಾನದಿಂದ ದೇಶ ಅಭಿವೃದ್ಧಿ ಹೊಂದಿದೆ ಎಂದರು.

ಹುಣಸೂರು ತಾಲೂಕು ಜೆಡಿಎಸ್ ಉಪಾಧ್ಯಕ್ಷ, ಅಂಬೇಡ್ಕರ್ ವಾದಿ ದೇವರಾಜ್ ಒಡೆಯರ್, ವಿಧಾನ ಪರಿಷತ್ ಸದಸ್ಯ ಡಾ. ತಿಮ್ಮಯ್ಯ, ಜಿಪಂ ಮಾಜಿ ಸದಸ್ಯ ಡಿ.ರವಿ ಶಂಕರ್ ಹಾಗೂ ಜಿಪಂ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಅಚ್ಚುತಾನಂದ ಮಾತನಾಡಿದರು. ಇದಕ್ಕೂ ಮುನ್ನ ಅಲಂಕೃತ ತೆರೆದ ವಾಹನದಲ್ಲಿ ಅಂಬೇಡ್ಕರ್ ಭಾವಚಿತ್ರವನ್ನು ಹೂಗಳಿಂದ ಅಲಂಕರಿಸಿ, ಪೂರ್ಣ ಕುಂಭ ಕಳಶದೊಂದಿಗೆ ಗ್ರಾಮದ ರಸ್ತೆಯಲ್ಲಿ ಮೆರವಣಿಗೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷೆ ತಾಯಮ್ಮ, ಶಾಸಕ ಸಾ.ರಾ. ಮಹೇಶ್ ಪುತ್ರ ಸಾ.ರಾ. ಜಯಂತ್, ಕೆಪಿಸಿಸಿ ಕಾರ್ಯದರ್ಶಿ ನರೇಂದ್ರ ಜಿಪಂ ಮಾಜಿ ಸದಸ್ಯ ಎಂ.ಟಿ.ಕುಮಾರ್, ತಾಲೂಕು ಶರಣು ಸಾಹಿತ್ಯ ಪರಿಷತ್ ಅಧ್ಯಕ್ಷ ಸಿ.ಪಿ. ರಮೇಶ್, ತಾಪಂ ಮಾಜಿ ಸದಸ್ಯ ತಮ್ಮಣ್ಣ, ವಕೀಲರಾದ ಕಾಂತರಾಜ್, ಮಂಜಯ್ಯ, ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಕ್ಷಕ ಸಂಪತ್, ಗ್ರಾಪಂ ಉಪಾಧ್ಯಕ್ಷ ಶಿವಕುಮಾರ್, ಸದಸ್ಯರಾದ ಬಿ.ಎಲ್.ರಾಜಶೇಖರ, ಬಿ.ಬಿ.ಶಿವಣ್ಣ, ಮಂಜಪ್ಪ ಶಾಂತಮ್ಮ, ಮಾಜಿ ಸದಸ್ಯ ಸೋಮು, ಸಹಕಾರ ಸಂಘದ ಅಧ್ಯಕ್ಷ ಬಿ.ಎಂ.ಪ್ರಕಾಶ್, ಪ್ರೊ.ಎನ್.ಆರ್. ಶಿವರಾಂ, ಸಾಲಿಗ್ರಾಮ ಠಾಣೆ ಇನ್ಸ್‌ಪೆಕ್ಟರ್ ಶ್ರೀಕಾಂತ್, ಪಶು ವೈದ್ಯಾಧಿಕಾರಿ ಡಾ.ಹರೀಶ್, ನಾಡಗೌಡ ಕುಮಾರಸ್ವಾಮಿ, ನಿವೃತ್ತ ಶಿಕ್ಷಕ ಹೆಚ್.ಎಸ್.ಸ್ವಾಮಿ, ಶಿಕ್ಷಕ ಸಣ್ಣಮೊಗಯ್ಯ, ಈರಯ್ಯ, ಡಾ.ಬಿ.ಆರ್.ಅಂಬೇಡ್ಕರ್ ಯುವಕ ಸಂಘದ ಪದಾಧಿಕಾರಿಗಳು, ಯಜಮಾನರು, ದಲಿತ ಮುಖಂಡರು ಸೇರಿದಂತೆ ಇನ್ನಿತರರಿದ್ದರು.

ಸಿಎಸ್‌ಕೆ ವಿರುದ್ಧ ಆರ್‌ಸಿಬಿಗೆ ಗೆಲುವು

ಪುಣೆ, ಮೇ 4– ಹರ್ಷಲ್ ಪಟೇಲ್, ಮ್ಯಾಕ್ಸ್‌ವೆಲ್ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ರಾಯಲ್ ಚಾಲೆಂಜರ್ಸ್ ಬೆಂಗಳೂರು 13ರನ್‌ಗಳ ಗೆಲುವು ದಾಖಲಿಸಿದೆ. ಈ ಮೂಲಕ ಸತತ 3 ಸೋಲುಗಳ ಬಳಿಕ ಜಯದ ಹಾದಿಗೆ ಮರಳಿದೆ. ಅಲ್ಲದೆ ಆಡಿರುವ 11 ಪಂದ್ಯಗಳಲ್ಲಿ 6ನೇ ಗೆಲುವಿನೊಂದಿಗೆ 12 ಒಟ್ಟು ಅಂಕ ಗಳಿಸಿದ್ದು, ಅಂಕಪಟ್ಟಿಯಲ್ಲಿ ನಾಲ್ಕನೇ ಸ್ಥಾನಕ್ಕೇರಿದೆ.



ಅತ್ತ ಆಡಿದ 10 ಪಂದ್ಯಗಳಲ್ಲಿ 7ರಲ್ಲಿ ಸೋಲು ಕಂಡಿರುವ ಸಿಎಸ್‌ಕೆ ಪ್ಲೇ–ಆಫ್‌ನ ಹಾದಿ ಕಠಿಣವೆನಿಸಿದೆ.

ಇಲ್ಲಿನ ಮಹಾರಾಷ್ಟ್ರ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಟೂರ್ನಿಯ 49ನೇ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ರಾಯಲ್ ಚಾಲೆಂಜರ್ಸ್ ಬೆಂಗಳೂರಿಗೆ ನಾಯಕ ಫಫ್ ಡುಪ್ಲೆಸಿಸ್ 38 ಹಾಗೂ ವಿರಾಟ್ ಕೊಹ್ಲಿ 30ರನ್ ಮೊದಲ ವಿಕೆಟ್‌ಗೆ 62ರನ್‌ಗಳ ಉತ್ತಮ ಆರಂಭ ನೀಡಿದರಾದರೂ, ತಂಡದ ಮೊತ್ತ 79ರನ್ ಆಗುವಷ್ಟರಲ್ಲಿಯೇ ಪ್ರಮುಖ 3ವಿಕೆಟ್ ಕಳೆದುಕೊಂಡು ತಂಡ ಸಂಕಷ್ಟಕ್ಕೆ ಸಿಲುಕಿತ್ತು. ಈ ವೇಳೆ ಯುವ ಆಟಗಾರ ಮಹಿಪಾಲ್ ಲೊಮ್ರರ್ ತಂಡಕ್ಕೆ ಆಸರೆಯಾದರು. ಇವರು 27 ಎಸೆತಗಳಲ್ಲಿ 3 ಬೌಂಡರಿ ಹಾಗೂ 2 ಸಿಕ್ಸರ್‌ನಿಂದ 42ರನ್ ಗಳಿಸಿ ತಂಡದ ಮೊತ್ತ 150ರ ಗಡಿ ದಾಟಲು ನೆರವಾದರು. ಇವರಿಗೆ ರಜತ್ ಪಾಟಿದಾರ್ 21ರನ್ ಉತ್ತಮ ಸಾಥ್ ನೀಡಿದರು. ಕೊನೆಯ ಓವರ್‌ನಲ್ಲಿ ಜವಾಬ್ದಾರಿಯುತ ಬ್ಯಾಟಿಂಗ್ ಮಾಡಿದ ದಿನೇಶ್‌ಕಾರ್ತಿಕ್ ಅಜೇಯ 27ರನ್ ಗಳಿಸಿದರು. ಅಂತಿಮವಾಗಿ ಆರ್‌ಸಿಬಿ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 173ರನ್‌ಗಳ ಸವಾಲಿನ ಮೊತ್ತ ದಾಖಲಿಸಿತು.

ಬೌಲಿಂಗ್‌ನಲ್ಲಿ ಚೆನ್ನೈ ಪರವಾಗಿ ಮಹೀಶ್ ತೀಕ್ಷಣ 3, ಮೊಯಿನ್ ಅಲಿ 2, ಪ್ರಿಟೋರಿಯಸ್ ಒಂದು ವಿಕೆಟ್ ಪಡೆದರು. 174ರನ್‌ಗಳ ಸವಾಲಿನ ಮೊತ್ತ ಬೆನ್ನತ್ತಿದ್ದ ಚೆನ್ನೈ ಸೂಪರ್ ಕಿಂಗ್ಸ್ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 160ರನ್ ಗಳಿಸಲಷ್ಟೇ ಶಕ್ತವಾಯಿತು. ತಂಡದ ಪರವಾಗಿ ಋತುರಾಜ್ ಗಾಯಕ್ವಾಡ್ 28, ಡೆವೊನ್ ಕಾನ್ವೇ 56, ಅಂಬಟಿ ರಾಯಡು 10, ಮೊಯಿನ್ ಅಲಿ 34, ಪ್ರಿಟೋರಿಯಸ್ 13ರನ್ ಗಳಿಸಿದರು. ಬೌಲಿಂಗ್‌ನಲ್ಲಿ ಆರ್‌ಸಿಬಿ ಪರ ಹರ್ಷಲ್ ಪಟೇಲ್ 3, ಗ್ಲೆನ್ ಮ್ಯಾಕ್ಸ್‌ವೆಲ್ 2, ಹಸರಂಗ, ಶಬಾಜ್ ಅಹಮದ್, ಜೋಸ್‌ಹ್ಯಾಜಲ್‌ವುಡ್ ತಲಾ ಒಂದೊಂದು ವಿಕೆಟ್ ಪಡೆದರು. ಉತ್ತಮ ಬೌಲಿಂಗ್ ಮಾಡಿದ ಹರ್ಷಲ್‌ಪಟೇಲ್ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಕಡಕೊಳ ಬಳಿ ಚೆಸ್ಕಾಂನಿಂದ ಮತ್ತೊಂದು ಚಾರ್ಜಿಂಗ್ ಕೇಂದ್ರ ಸ್ಥಾಪನೆ

● ಮೈಸೂರಲ್ಲಿ ಸ್ಥಾಪನೆಯಾಗುತ್ತಿರುವ ಎರಡನೇ ಚಾರ್ಜಿಂಗ್ ಘಟಕವಿದು ● ಮೇ 7ರಂದು ಇಂಧನ ಸಚಿವ ಸುನೀಲ್‌ಕುಮಾರ್‌ರಿಂದ ಚಾಲನೆ ● ಹಿನಕಲ್ ಬಳಿಯ ಸೆಸ್ಕ್ ಆವರಣದಲ್ಲಿ ಈಗಾಗಲೇ ಚಾರ್ಜಿಂಗ್ ಘಟಕ ಸ್ಥಾಪನೆ ● ಕುವೆಂಪುನಗರ, ಜ್ಯೋತಿನಗರ ಸೆಸ್ಕ್ ಕಚೇರಿ ಅಂಗಳದಲ್ಲೂ ಸ್ಥಾಪನೆಯಾಗಲಿದೆ ಶೀಘ್ರ ಚಾರ್ಜಿಂಗ್ ಕೇಂದ್ರ

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಮೇ 4– ಇಂಧನ ಬೆಲೆ ದಿನದಿಂದ ದಿನಕ್ಕೆ ಗಗನಕ್ಕೇರುತ್ತಿರುವುದರಿಂದ ವಿದ್ಯುತ್ ಬ್ಯಾಟರಿ ಚಾಲಿತ ವಾಹನ ಬಳಕೆದಾರರ ಸಂಖ್ಯೆ ಹೆಚ್ಚಾಗುತ್ತಿದೆ. ಇಂತಹ ವಾಹನ ಮಾಲೀಕರಿಗೆ ಅನುಕೂಲ ಕಲ್ಪಿಸುವ ಸಲುವಾಗಿ ಬೇಡಿಕೆಗೆ ಅನುಗುಣವಾಗಿ ಚೆಸ್ಕಾಂ ಇವಿ ವಾಹನಗಳ ಚಾರ್ಜಿಂಗ್ ಕೇಂದ್ರವನ್ನು ಮೈಸೂರು–ನಂಜನಗೂಡು ಮುಖ್ಯ ರಸ್ತೆ ಕಡಕೊಳದ ಕೆಇಬಿಇಎ ಚೆಸ್ಕಾಂನಿಂದ ಆವರಣದಲ್ಲಿ ಸ್ಥಾಪಿಸುತ್ತಿದೆ. ಇದು ಎರಡನೇ ಚಾರ್ಜಿಂಗ್ ಕೇಂದ್ರವಾಗಿದೆ.

ಮೇ 7ರಂದು ಬೆಳಗ್ಗೆ 10 ಗಂಟೆಗೆ ಇಂಧನ ಸಚಿವ ವಿ.ಸುನೀಲ್ ಕುಮಾರ್ ಇದನ್ನು ಉದ್ಘಾಟಿಸಲಿದ್ದಾರೆ. ಕುವೆಂಪುನಗರ ಹಾಗೂ ಜ್ಯೋತಿನಗರದಲ್ಲಿನ ಚೆಸ್ಕಾಂ ಕಚೇರಿ ಆವರಣದಲ್ಲಿ ಮತ್ತೆರಡು ಚಾರ್ಜಿಂಗ್ ಕೇಂದ್ರ ಸ್ಥಾಪಿಸಲಾಗುತ್ತಿದ್ದು, ತಿಂಗಳೊಳಗೆ ಸಾರ್ವಜನಿಕರ ಸೇವೆಗೆ ಸಮರ್ಪಿಸಲಾಗುತ್ತದೆ. ಇದರಿಂದ ವಿದ್ಯುತ್ ಬ್ಯಾಟರಿ ಚಾಲಿತ ವಾಹನಗಳ ಬಳಕೆದಾರರಿಗೆ ತಮ್ಮ ವಾಹನಗಳ ಬ್ಯಾಟರಿ ಚಾರ್ಜ್ ಮಾಡಿಕೊಳ್ಳಲು ಅನುಕೂಲವಾಗಲಿದೆ.

ಇತ್ತೀಚಿನ ದಿನಗಳಲ್ಲಿ ಪರಿಸರ ಮಾಲಿನ್ಯ ತಡೆಗೆ ಜನರೇ ಸ್ವಯಂ ಮುಂದಾಗುತ್ತಿದ್ದಾರೆ. ಅಲ್ಲದೆ ದಿನೇ ದಿನೇ ಇಂಧನ ಬೆಲೆ ಹೆಚ್ಚಾಗುತ್ತಿರುವುದರಿಂದ ಕಂಗೆಟ್ಟಿರುವ ಜನರು ಈಗ 'ಬ್ಯಾಟರಿ ಚಾಲಿತ ವಾಹನ'ಗಳತ್ತ ಮುಖ ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಮೈಸೂರು ವಿಭಾಗದಲ್ಲಿ 155 ಸ್ಥಳಗಳಲ್ಲಿ ಚಾರ್ಜಿಂಗ್ ಕೇಂದ್ರವನ್ನು 'ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ' (ಸೆಸ್ಕ್) ಸ್ಥಾಪಿಸಲು ಸಿದ್ಧತೆ ಮಾಡಿಕೊಂಡಿದೆ.



ಮೈಸೂರು–ನಂಜನಗೂಡು ಮುಖ್ಯ ರಸ್ತೆಂಯ ಕಡಕೊಳ ಬಳಿಯಿರುವ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಇಂಜಿನಿಯರ್‌ಗಳ ಸಂಘ (ಕೆಇಬಿಇಎ) ಆವರಣದಲ್ಲಿ ನಿರ್ಮಿಸಲಾಗುತ್ತಿರುವ ಬ್ಯಾಟರಿ ಚಾಲಿತ ವಾಹನಗಳ ಚಾರ್ಜಿಂಗ್ ಕೇಂದ್ರದ ಕಾಮಗಾರಿ ಭರದಿಂದ ಸಾಗುತ್ತಿದೆ.

ಅದರ ಮೊದಲ ಭಾಗವಾಗಿ ಕಳೆದ ವರ್ಷ ಮೈಸೂರು–ಹುಣಸೂರು ಮುಖ್ಯರಸ್ತೆಗೆ ಹೊಂದಿಕೊಂಡಂತೆ ಹಿನಕಲ್ ಬಳಿಯಿರುವ 'ಸೆಸ್ಕ್' ಕಚೇರಿ ಆವರಣದಲ್ಲಿ ಮೊದಲ ಚಾರ್ಜಿಂಗ್ ಕೇಂದ್ರ ಸ್ಥಾಪಿಸಲಾಗಿತ್ತು. ಕೇವಲ 4 ಚಕ್ರದ ವಾಹನಗಳಿಗೆ ಇಲ್ಲಿ ಚಾರ್ಜಿಂಗ್ ಸೌಲಭ್ಯ ಕಲ್ಪಿಸಲಾಗಿತ್ತು. ಆದರೆ ಕಡಕೊಳ ಬಳಿ ಸ್ಥಾಪಿಸಿ ರುವ ಚಾರ್ಜಿಂಗ್ ಕೇಂದ್ರದಲ್ಲಿ ದ್ವಿಚಕ್ರ, ತ್ರಿಚಕ್ರ ಹಾಗೂ 4 ಚಕ್ರದ ವಾಹನಗಳನ್ನು ಚಾರ್ಜ್ ಮಾಡಲು ಅವಕಾಶ ಕಲ್ಪಿಸಲಾಗಿದೆ. ಇಂಧನ ಇಲಾಖೆ ವತಿಯಿಂದಲೇ ಈ ಘಟಕ ನಿರ್ಮಿಸಲಾಗಿದೆ. ಕರ್ನಾಟಕ ಎಲೆಕ್ಟ್ರಿಸಿಟಿ ರೆಗ್ಯುಲೇಟರಿ ಕಮಿಷನ್ (ಕೆಇಆರ್‌ಸಿ) ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್‌ಗೆ ದರ ನಿಗದಿ ಮಾಡಲಿದೆ.

2 ವಿಧದ ಚಾರ್ಜ್: ಈ ಚಾರ್ಜಿಂಗ್ ಕೇಂದ್ರದಲ್ಲಿ ಎಸಿ ಹಾಗೂ ಡಿಸಿ ವಿಧಾನದಲ್ಲಿ ಚಾರ್ಜಿಂಗ್ ಮಾಡಲಾಗುತ್ತದೆ. ಎಸಿ ವಿಭಾಗದಲ್ಲಿ ಚಾರ್ಜ್ ಮಾಡುವಾಗ ಹೆಚ್ಚು ಸಮಯ ಹಿಡಿಯಲಿದೆ. ಈಗ ತಯಾರಾಗುತ್ತಿರುವ ವಾಹನಗಳಿಗೆ ಡಿಸಿ ವಿಧಾನದ ಚಾರ್ಜಿಂಗ್ ವ್ಯವಸ್ಥೆ ಅಳವಡಿಸಲಾಗುತ್ತಿದೆ. ಈ ವಿಧಾನದಲ್ಲಿ ನೇರವಾಗಿ ಬ್ಯಾಟರಿಯನ್ನೇ ಚಾರ್ಜ್ ಮಾಡಲಾಗುತ್ತದೆ. ಹೆಚ್ಚಿನ ಪ್ರಮಾಣದ ವಿದ್ಯುತ್ ಹರಿಯುವ ಈ ವ್ಯವಸ್ಥೆಯಲ್ಲಿ 60ರಿಂದ 80 ನಿಮಿಷದೊಳಗೆ 1 ಕಾರು ಪೂರ್ಣ ಚಾರ್ಜ್ ಮಾಡಬಹುದಾಗಿದೆ. ಎಸಿ ವಿಧಾನದಲ್ಲಿ 2 ಗಂಟೆಗಿಂತ ಹೆಚ್ಚು ಸಮಯ ಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಚಾರ್ಜಿಂಗ್ ಕೇಂದ್ರದಲ್ಲಿ ಎಸಿ ಹಾಗೂ ಡಿಸಿ ವಿಧಾನದ ಪ್ಲಗ್ ಅಳವಡಿಸಲಾಗಿರುತ್ತದೆ.

ಸರ್ಕಾರದ ಪ್ರೋತ್ಸಾಹ: ಮುಂಬರುವ ದಿನಗಳಲ್ಲಿ ಪರಿಸರ ಮಾಲಿನ್ಯಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಬ್ಯಾಟರಿ ಚಾಲಿತ ವಾಹನಗಳ ಬಳಕೆಗೆ ಹೆಚ್ಚು ಪ್ರೋತ್ಸಾಹ ನೀಡುತ್ತಿವೆ. ಇದಕ್ಕಾಗಿ ಸಬ್ಸಿಡಿಯನ್ನು ನೀಡುತ್ತಿರುವುದರಿಂದ ಇನ್ನು ಮುಂದೆ ಬ್ಯಾಟರಿ ಚಾಲಿತ ವಾಹನಗಳ ಸಂಖ್ಯೆ ಸಹಜವಾಗಿ ಹೆಚ್ಚಾಗಲಿದೆ. ಅದಕ್ಕನುಸಾರ ರಾಜ್ಯದ ವಿವಿಧೆಡೆ ಒಂದು ಸಾವಿರ ಚಾರ್ಜಿಂಗ್ ಕೇಂದ್ರ ಸ್ಥಾಪಿಸಲು ರಾಜ್ಯ ಸರ್ಕಾರ ಉದ್ದೇಶಿಸಿದೆ. ಅದರ ಭಾಗವಾಗಿ 'ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ'ವು ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಸೇರಿದಂತೆ ವಿವಿಧೆಡೆ ಒಟ್ಟು 155 ಚಾರ್ಜಿಂಗ್ ಪಾಯಿಂಟ್ ಸ್ಥಾಪಿಸಲು ಕ್ರಮ ಕೈಗೊಂಡಿದೆ.

ಅದರಲ್ಲೂ ಮೈಸೂರು–ಬೆಂಗಳೂರು ದಶಪಥ ರಸ್ತೆಯಲ್ಲಿ ಮದ್ದೂರಿನಿಂದ ಮೈಸೂರುವರೆಗೆ 8–10 ಸ್ಥಳಗಳಲ್ಲಿ ಚಾರ್ಜಿಂಗ್ ಕೇಂದ್ರ ಸ್ಥಾಪಿಸಲು ಉದ್ದೇಶಿಸಲಾಗಿದೆ. ಇದರಿಂದ ರಾಜ್ಯ ಹಾಗೂ ಅಂತರ ರಾಜ್ಯದಿಂದ ಮೈಸೂರು ಹಾಗೂ ಸುತ್ತಮುತ್ತಲಿನ ಪ್ರವಾಸಿ ತಾಣಗಳಿಗೆ ಬ್ಯಾಟರಿ ಚಾಲಿತ ವಾಹನದಲ್ಲಿ ಬರುವ ಪ್ರವಾಸಿಗರಿಗೆ ವಾಹನಗಳ ಬ್ಯಾಟರಿ ಚಾರ್ಜ್ ಮಾಡಿಕೊಳ್ಳುವ ಭದ್ರತೆಯನ್ನು ಸೆಸ್ಕ್ ನೀಡಲಿದೆ.



ಮೈಸೂರು ಚಾಮರಾಜ ಕ್ಷೇತ್ರದ ಮಾಜಿ ಶಾಸಕ ವಾಸು ಅವರ ಪುತ್ರ ರಿತೇಶ್‌ಗೌಡ ಹಾಗೂ ಮೀನಾಕ್ಷಿ ಮುತ್ತಯ್ಯ ಅವರ ವಿವಾಹ ಆರತಕ್ಷತೆ ಬೆಂಗಳೂರು ಚಾಮರ ವಜ್ರದಲ್ಲಿ ಮಂಗಳವಾರ ನೆರವೇರಿತು. ಈ ವೇಳೆ ವಿಧಾನಸಭೆ ವಿಪಕ್ಷ ನಾಯಕ ಸಿದ್ದರಾಮಯ್ಯ ಸೇರಿದಂತೆ ಅನೇಕ ಗಣ್ಯರು ನವ ವಧು–ವರರಿಗೆ ಶುಭ ಕೋರಿದರು.

ನಾಳೆ ಅಂಬೇಡ್ಕರ್ ಜನ್ಮ ದಿನಾಚರಣೆ

ಮೈಸೂರು,ಮೇ 4–ಮೈಸೂರು ವಿವಿಯ ಮಾಹಿತಿ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರದ (ಸಿಸ್ಟ್) ವತಿಯಿಂದ ಮೇ 6ರಂದು ಬೆಳಗ್ಗೆ 11 ಗಂಟೆಗೆ ಡಾ. ಬಿ.ಆರ್. ಅಂಬೇಡ್ಕರ್ ಅವರ 131ನೇ ಜನ್ಮದಿನ ಆಚರಿಸಲಾಗುತ್ತಿದೆ. ಮೈಸೂರು ವಿವಿ ಸಿಸ್ಟ್‌ನಲ್ಲಿ ನಡೆಯಲಿರುವ ಕಾರ್ಯಕ್ರಮವನ್ನು ಮೈಸೂರು ವಿವಿ ಕುಲಸಚಿವ ಪ್ರೊ.ಆರ್.ಶಿವಪ್ಪ ಉದ್ಘಾಟಿಸಲಿದ್ದು, ಸಿಸ್ಟ್ ನಿರ್ದೇಶಕ ಪ್ರೊ.ಡಿ.ನಾಗರಾಜು ಅಧ್ಯಕ್ಷತೆ ವಹಿಸಲಿದ್ದಾರೆ. ಮೈಸೂರು ವಿವಿ ಕಾನೂನು ವಿಭಾಗದ ಅಧ್ಯಕ್ಷ ಪ್ರೊ. ರಮೇಶ್ ವಿಶೇಷ ಉಪನ್ಯಾಸ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಜಿ.ಟಿ.ದಿನೇಶ್‌ಕುಮಾರ್ ಮತ್ತೆ ಮುಡಾ ಆಯುಕ್ತರಾಗಿ ಅಧಿಕಾರಕ್ಕೆ

ಮೈಸೂರು, ಮೇ 4(ಆರ್‌ಕೆ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ಆಯುಕ್ತರಾಗಿ, ಹಿರಿಯ ಕೆಎಎಸ್ ಅಧಿಕಾರಿ ಜಿ.ಟಿ.ದಿನೇಶ್‌ಕುಮಾರ್ ಬುಧವಾರ ಮತ್ತೆ ಅಧಿಕಾರ ವಹಿಸಿಕೊಂಡರು.

ಎರಡು ವರ್ಷಗಳ ಅವಧಿ ಪೂರೈಸಿದ ಹಿನ್ನೆಲೆಯಲ್ಲಿ ನ್ಯಾಯಾಲಯದ ಆದೇಶ ಹಾಗೂ ಸರ್ಕಾರದ ನಿರ್ದೇಶನದ ಮೇರೆಗೆ ಡಾ.ಡಿ.ಬಿ.ನಟೇಶ್ ಅವರು ದಿನೇಶ್ ಕುಮಾರ್ ಅವರಿಗೆ ಅಧಿಕಾರ ಹಸ್ತಾಂತರಿಸಿ, ಹೂ ಗುಚ್ಛ ನೀಡಿ ಶುಭ ಕೋರಿದರು. ಈ ವೇಳೆ ಮುಡಾ ಕಾರ್ಯದರ್ಶಿ ವೆಂಕಟರಾಜು, ನಗರ ಯೋಜಕ ಸದಸ್ಯ ಜಯಸಿಂಹ, ಸೂಪರಿಂಟೆಂಡಿಂಗ್ ಇಂಜಿನಿಯರ್ ಶಂಕರ್ ಇದ್ದರು.

ನಂತರ ನಿರ್ಗಮಿತ ಆಯುಕ್ತ ಡಾ.ನಟೇಶ್ ಅವರನ್ನು ಪ್ರಾಧಿಕಾರದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ ಅಭಿನಂದಿಸಿ ಆತ್ಮೀಯವಾಗಿ ಬೀಳ್ಕೊಟ್ಟರು. ಈ ಹಿಂದೆ ಡಾ.ನಟೇಶ್ ವರ್ಗವಾಗಿದ್ದ ಚೆಸ್ಕಾಂ ಪ್ರಧಾನ ವ್ಯವಸ್ಥಾಪಕ ಸ್ಥಾನಕ್ಕೆ ಸರ್ಕಾರ ಬೇರೆಯವರನ್ನು ನೇಮಿಸಿರುವುದರಿಂದ ತಾವು ಬೆಂಗಳೂರಿನ ಕೇಂದ್ರ ಕಚೇರಿ(DPR)ಯಲ್ಲಿ ವರದಿ ಮಾಡಿಕೊಳ್ಳುವುದಾಗಿ ಡಾ. ಡಿ.ಬಿ.ನಟೇಶ್ ತಿಳಿಸಿದರು.

ಡಾ.ನಟೇಶ್ ಅವರನ್ನು ಈ ಹಿಂದೆ ಚೆಸ್ಕಾಂ ಜನರಲ್ ಮ್ಯಾನೇಜರ್ ಆಗಿ ವರ್ಗಾವಣೆ ಮಾಡಲಾಗಿತ್ತು. ದಿನೇಶ್ ಕುಮಾರ್ ಕಳೆದ ಜನವರಿ–ಫೆಬ್ರವರಿಯಲ್ಲಿ 15 ದಿನಗಳ ಕಾಲ ಮುಡಾ ಆಯುಕ್ತರಾಗಿ ಸೇವೆ ಸಲ್ಲಿಸಿದ್ದರು. ಅವಧಿಗೂ ಮುನ್ನ ವರ್ಗಾವಣೆ ಮಾಡಿದ್ದನ್ನು ಪ್ರಶ್ನಿಸಿ ಡಾ.ನಟೇಶ್ ಕೆಎಟಿ ಮೊರೆ ಹೋಗಿದ್ದರು. ಅವರ ಅರ್ಜಿಯ ವಿಚಾರಣೆ ನಡೆಸಿದ ಕೆಎಟಿ ವರ್ಗಾವಣೆ ಆದೇಶಕ್ಕೆ ತಡೆಯಾಜ್ಞೆ ನೀಡಿತ್ತಲ್ಲದೆ, 2022ರ ಮೇ 4ರವರೆಗೆ ಮುಡಾ ಆಯುಕ್ತರಾಗಿ ಮುಂದುವರಿಸುವಂತೆ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು. ಅದರನ್ವಯ ಡಾ.ಡಿ.ಬಿ.ನಟೇಶ್ ಆಯುಕ್ತರಾಗಿ ಫೆಬ್ರವರಿಯಿಂದ ಕರ್ತವ್ಯ ಮುಂದುವರಿಸಿದ್ದರು. ಅವಧಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ಡಾ.ನಟೇಶ್ ಸರ್ಕಾರದ ಆದೇಶದನ್ವಯ ಬುಧವಾರ ದಿನೇಶ್‌ಕುಮಾರ್‌ಗೆ ಅಧಿಕಾರ ವಹಿಸಿಕೊಟ್ಟು ನಿರ್ಗಮಿಸಿದರು. ಈ ಸಂದರ್ಭ ಸುದ್ದಿಗಾರರೊಂದಿಗೆ ಮಾತನಾಡಿದ ಮುಡಾ ನೂತನ ಆಯುಕ್ತ ದಿನೇಶ್ ಕುಮಾರ್, ಈವರೆಗೆ ಸಿದ್ಧಪಡಿಸಿರುವ ಯೋಜನೆಗಳ ಪೈಕಿ ಪ್ರಾಧಿಕಾರದ ಹಣಕಾಸು ಪರಿಸ್ಥಿತಿಗನುಸಾರ ಆದ್ಯತೆ ಮೇರೆಗೆ ಅನುಷ್ಠಾನಗೊಳಿಸಲಾಗುವುದು ಎಂದರು.



ಮುಡಾ ಆಯುಕ್ತರಾಗಿ ಜಿ.ಟಿ.ದಿನೇಶ್‌ಕುಮಾರ್ ಬುಧವಾರ ಪುನಃ ಅಧಿಕಾರ ವಹಿಸಿಕೊಂಡರು. ನಿರ್ಗಮಿತ ಆಯುಕ್ತ ಡಾ. ಡಿ.ಬಿ.ನಟೇಶ್ ಹಾಗೂ ನಗರ ಯೋಜಕ ಸದಸ್ಯ ಜಯಸಿಂಹ ಅವರನ್ನು ಚಿತ್ರದಲ್ಲಿ ಕಾಣಬಹುದು.

2023ರ ಆಯವ್ಯಯದಲ್ಲಿ ಪ್ರಸ್ತಾಪಿಸಿರುವ ಹೊಸ ಯೋಜನೆಗಳನ್ನು ಜಾರಿಗೆ ತರುವ ನಿಟ್ಟಿನಲ್ಲಿ ಸದಸ್ಯರು, ಅಧಿಕಾರಿಗಳ ಸಹಕಾರದಿಂದ ಪ್ರಯತ್ನಿಸುತ್ತೇನೆ. ಉಪ ಸಮಿತಿ ವರದಿ ಆಧರಿಸಿ, ಸಿಎ ನಿವೇಶನಗಳ ಹಂಚಿಕೆ ಪ್ರಕ್ರಿಯೆ ಆರಂಭಿಸುವ ಜೊತೆಗೆ ಸರ್ಕಾರದ ಅನುಮೋದನೆ ಬಂದ ನಂತರ ಗುಂಪು ಮನೆ ವಸತಿ ಯೋಜನೆಯನ್ನು ಕೈಗೆತ್ತಿಕೊಳ್ಳುವುದಾಗಿ ದಿನೇಶ್‌ಕುಮಾರ್ ತಿಳಿಸಿದರು.

ತಂಬಾಕು ಬೆಳೆ ಪರವಾನಗಿ ನವೀಕರಣ ಶುಲ್ಕ ಕಡಿಮೆ ಮಾಡಿ ಆದೇಶ; ಸಂಸದ ಪ್ರತಾಪ್‌ಸಿಂಹ



ಮೈಸೂರು,ಮೇ 4(ಆರ್‌ಕೆಬಿ)–ಮೈಸೂರು ಭಾಗದ ಪ್ರಮುಖ ವಾಣಿಜ್ಯ ಬೆಳೆಯಾದ ತಂಬಾಕಿಗೆ ಪ್ರತಿ ಬ್ಯಾರನ್‌ಗೆ ನಿಗದಿತ ಕೋಟಾದ ಶೇ.25ಕ್ಕಿಂತ ಕಡಿಮೆ ಮಾರಾಟ ಮಾಡಿದ ರೈತರಿಗೆ 2,500 ರೂ. ಮತ್ತು ಶೇ.50ಕ್ಕಿಂತ ಕಡಿಮೆ ಮಾರಾಟ ಮಾಡಿದ ರೈತರಿಗೆ 1,500 ರೂ. ದಂಡ ಶುಲ್ಕವನ್ನು ಕಡಿಮೆ ಮಾಡಿ ಆದೇಶ ಹೊರಡಿಸಲಾಗಿದ್ದು, ರೈತರು ಆದಷ್ಟು ಬೇಗ ತಂಬಾಕು ಮಂಡಳಿಯಲ್ಲಿ ಪರವಾನಗಿಯನ್ನು ನವೀಕರಿಸಿಕೊಳ್ಳುವಂತೆ ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ ಮನವಿ ಮಾಡಿದ್ದಾರೆ.

ತಂಬಾಕು ಮೈಸೂರು ಭಾಗದ ಪ್ರಮುಖ ವಾಣಿಜ್ಯ ಬೆಳೆಯಾಗಿದ್ದು, ರೈತರು ತಮ್ಮ ಜೀವನೋಪಾಯಕ್ಕೆ ತಂಬಾಕು ಬೆಳೆಯನ್ನೇ ಅವಲಂಬಿಸಿದ್ದಾರೆ. ರೈತರು ಎಲ್ಲಾ ರೀತಿಯ ಹವಾಮಾನ ವೈಪರೀತ್ಯಗಳನ್ನು ಎದುರಿಸಿ ತಂಬಾಕು ಬೆಳೆ ಬೆಳೆಯುತ್ತಿದ್ದಾರೆ. ತಂಬಾಕು ಮಳೆಯಾಶ್ರಿತ ಬೆಳೆಯಾಗಿರುವ ಕಾರಣ ಹವಾಮಾನಕ್ಕೆ ಅನುಗುಣವಾಗಿ ಬೆಳೆಯ ಇಳುವರಿಯಲ್ಲಿ ವ್ಯತ್ಯಾಸವಾಗುತ್ತದೆ ಮತ್ತು ನಿಖರವಾಗಿ ಅಂದಾಜಿಸಲು ಸಾಧ್ಯವಾಗುವುದಿಲ್ಲ.

ತಂಬಾಕು ಮಂಡಳಿಯಲ್ಲಿ ನಿಗದಿತ ಪ್ರಮಾಣದ ಅರ್ಧಕ್ಕಿಂತಲೂ ಕಡಿಮೆ ಮಾರಾಟ ಮಾಡಿದ ರೈತರ ಪರವಾನಗಿಯನ್ನು ನವೀಕರಿಸಲು 2022–23ನೇ ಬೆಳೆ ಸಾಲಿನಲ್ಲಿ ಹೆಚ್ಚಿನ ದಂಡವನ್ನು ವಸೂಲಿ ಮಾಡುತ್ತಿದ್ದರು. ಕಳೆದ ವರ್ಷ ಹವಾಮಾನದ ವೈಪರೀತ್ಯದಿಂದ ಇಳುವರಿಯಲ್ಲಿ ವ್ಯತ್ಯಾಸದಿಂದ 68 M.Kg ತಂಬಾಕು ಬೆಳೆಯಲು ಸಾಧ್ಯವಾಯಿತು. 2022–23 ನೇ ಬೆಳೆ ಸಾಲಿಗೆ ಅಧಿಕೃತ ಕೋಟಾವನ್ನು 100 Mkg ನಿಗದಿಪಡಿಸಿ ಹೆಚ್ಚಿನ ಬೆಳೆ ಬೆಳೆಯಲು ಉತ್ತೇಜನ ನೀಡುತ್ತಿದ್ದಾರೆ ಎಂದು ಪ್ರತಾಪ್ ಸಿಂಹ ಹೇಳಿದ್ದಾರೆ.

ಈ ನಿಟ್ಟಿನಲ್ಲಿ ತಂಬಾಕು ಮಂಡಳಿ ಅಧ್ಯಕ್ಷ ಹಾಗೂ ತಂಬಾಕು ಮಂಡಳಿ ಇಡಿ ಬಿ.ವಿ.ಆರ್.ಸುಬ್ರಹ್ಮಣ್ಯಂ ಅವರನ್ನು ಭೇಟಿಯಾಗಿದ್ದ ಸಂಸದ ಪ್ರತಾಪ್‌ಸಿಂಹ ತಂಬಾಕು ಬೆಳೆಗಾರರಿಗೆ ಆಗುತ್ತಿರುವ ತೊಂದರೆಯ ಬಗ್ಗೆ ಮನನ ಮಾಡಿದರು. ಈಗ ವಿಧಿಸುತ್ತಿರುವ ದಂಡ ಅಂದರೆ, ನಿಗದಿಪಡಿಸಿದ ಪ್ರಮಾಣದಲ್ಲಿ ಶೇ.25ಕ್ಕಿಂತ ಕಡಿಮೆ ಮಾರಾಟ ಮಾಡಿದ ರೈತರಿಗೆ 5,000 ರೂ. ಮತ್ತು ಶೇ.50ಕ್ಕಿಂತ ಕಡಿಮೆ ಮಾರಾಟ ಮಾಡಿದ ರೈತರಿಗೆ 3,000 ರೂ. ದಂಡವನ್ನು ಇಳಿಸಬೇಕೆಂದು ಮನವಿ ಮಾಡಿದ್ದರು. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿ ಪ್ರತಿ ಬ್ಯಾರನ್‌ಗೆ ನಿಗದಿತ ಕೋಟಾದ ಶೇ.25ಕ್ಕಿಂತ ಕಡಿಮೆ ಮಾರಾಟ ಮಾಡಿದ ರೈತರಿಗೆ 2,500 ರೂ. ಮತ್ತು ಶೇ.50ಕ್ಕಿಂತ ಕಡಿಮೆ ಮಾರಾಟ ಮಾಡಿದ ರೈತರಿಗೆ 1,500 ರೂ.ಗೆ ದಂಡದ ಶುಲ್ಕವನ್ನು ಕಡಿಮೆ ಮಾಡಿ ಆದೇಶ ಹೊರಡಿಸಲಾಗಿದೆ. ರೈತರು ಆದಷ್ಟು ಬೇಗ ತಂಬಾಕು ಮಂಡಳಿಯಲ್ಲಿ ಪರವಾನಗಿಯನ್ನು ನವೀಕರಿಸಿಕೊಳ್ಳುವಂತೆ ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ.

ಉಚಿತ ಥೈರಾಯ್ಡ್ ತಪಾಸಣಾ ಶಿಬಿರ

ಮೈಸೂರು, ಮೇ 4– ಮೈಸೂರಿನ ದಟ್ಟಗಳ್ಳಿಯಲ್ಲಿರುವ ನಯನಕುಮಾರ್ಸ್ ಆಸ್ಪತ್ರೆ ವತಿಯಿಂದ ಮೇ 7ರಂದು ಬೆಳಗ್ಗೆ 9ರಿಂದ 1.30ರವರೆಗೆ ಆಸ್ಪತ್ರೆ ಆವರಣದಲ್ಲಿ ಉಚಿತ ಥೈರಾಯ್ಡ್ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ. ರಕ್ತದಲ್ಲಿ ಕೊಬ್ಬಿನ ಅಂಶ ಹೆಚ್ಚಾಗುವಿಕೆ, ತೂಕ ಹೆಚ್ಚಾಗುವಿಕೆ, ಋತುಚಕ್ರದಲ್ಲಿ ಬದಲಾವಣೆ, ಸುಸ್ತು, ಎದೆಬಡಿತ, ಮಾನಸಿಕ ಖಿನ್ನತೆ, ಮಲಬದ್ಧತೆ, ಧ್ವನಿ ಬದಲಾವಣೆ, ಮುಖ ಊದುವಿಕೆ, ಮಾಂಸಖಂಡಗಳಲ್ಲಿ ದುರ್ಬಲತೆ ಇತ್ಯಾದಿ ತೊಂದರೆಗಳಿದ್ದಲ್ಲಿ ಖ್ಯಾತ ತಜ್ಞ ವೈದ್ಯರೊಂದಿಗೆ ಉಚಿತ ಸಮಾಲೋಚನೆ ಸಲಹೆ ಲಭ್ಯವಿರುತ್ತದೆ. ಸಾರ್ವಜನಿಕರು ಇದರ ಸದುಪಯೋಗವನ್ನು ಮಾಡಿಕೊಳ್ಳಬೇಕೆಂದು ವಿನಂತಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂ.9513310100/ 8762850960 ಸಂಪರ್ಕಿಸಬಹುದು.

ಮೃಗಾಲಯದಲ್ಲಿ ಸ್ಲಾತ್ ಕರಡಿ ಮನೆ ನಿರ್ಮಾಣಕ್ಕೆ ಶಂಕುಸ್ಥಾಪನೆ

ಮೈಸೂರು, ಮೇ 4– ಮೈಸೂರಿನ ಚಾಮರಾಜೇಂದ್ರ ಮೃಗಾಲಯದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ನೋಟ್ ಮುದ್ರಣ ಪ್ರೈವೇಟ್ ಲಿಮಿಟೆಡ್ ವತಿಯಿಂದ ಅವರ ಸಿಎಸ್‌ಆರ್ ನಿಧಿಯಡಿ ನಿರ್ಮಿಸಲು ಉದ್ದೇಶಿಸಿರುವ ಸ್ಲಾತ್ ಕರಡಿ ಮನೆಗೆ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ ಅವರ ನೇತೃತ್ವದಲ್ಲಿ ಶಂಕುಸ್ಥಾಪನೆ ನಡೆಯಿತು.



ನಂತರ ಮಾತನಾಡಿದ ಅವರು, ಮೈಸೂರು ಮೃಗಾಲಯಕ್ಕೆ ಸಿಎಸ್‌ಆರ್ ನಿಧಿಯಿಂದ ಸಾಕಷ್ಟು ಕಂಪನಿಗಳು ಸಹಾಯ ಮಾಡುತ್ತಿರುವುದು ಸಂತೋಷದ ವಿಚಾರ. ಮುಂದಿನ ದಿನಗಳಲ್ಲಿ ಸಮಾಜದ ಪ್ರತಿಷ್ಠಿತ ಕಂಪನಿಗಳು ತಮ್ಮ ಸಿಎಸ್‌ಆರ್ ನಿಧಿಯಲ್ಲಿ ಮೃಗಾಲಯಕ್ಕೆ ಸಹಾಯ ಮಾಡಿದರೆ, ಎಲ್ಲಾ ಮೃಗಾಲಯಗಳೂ ಜಗತ್ತಿನಾದ್ಯಂತ ಹೆಚ್ಚಿನ ಹೆಸರು ಮಾಡುತ್ತದೆ ಎಂದು ತಿಳಿಸಿದರು.

ಭಾರತೀಯ ರಿಸರ್ವ್ ಬ್ಯಾಂಕ್ ನೋಟ್ ಮುದ್ರಣ ಪ್ರೈವೇಟ್ ಲಿಮಿಟೆಡ್ ಜನರಲ್ ಮ್ಯಾನೇಜರ್ ಡಾ.ಎನ್.ಕೃಷ್ಣಸ್ವಾಮಿ ಮಾತನಾಡಿ, ಮೃಗಾಲಯಕ್ಕೆ ಈಗಾಗಲೇ ತಮ್ಮ ಕಂಪನಿ ಸಿಎಸ್‌ಆರ್ ನಿಧಿಯಿಂದ ಒರಾಂಗುಟನ್ ಮನೆ ನಿರ್ಮಿಸಿ ಕೊಟ್ಟಿದ್ದೇವೆ, ಈಗ ಸ್ಲಾತ್ ಕರಡಿ ಮನೆಯನ್ನು ಕೊಡುತ್ತಿರುವುದಕ್ಕೆ ನಮಗೆ ಸಂತೋಷವಾಗುತ್ತಿದೆ ಮುಂದಿನ ದಿನಗಳಲ್ಲಿ ಮೃಗಾಲಯಕ್ಕೆ ಅಗತ್ಯವಿರುವ ರಿಂಗ್ ಟೈಲ್ಡ್ ಲೆಮುರ್ ಮನೆ ನಿರ್ಮಿಸಿ ಕೊಡುವುದಾಗಿ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಎನ್.ಜಿ.ಮುರುಳಿ, ಎನ್.ಎ.ರೆಡ್ಡಿ, ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಅಜಿತ್ ಕುಲಕರ್ಣಿ, ಮೃಗಾಲಯ ಪ್ರಾಧಿಕಾರದ ಸದಸ್ಯರಾದ ಗೋಕುಲ್ ಗೋವರ್ಧನ್, ಜ್ಯೋತಿ ರೇಚಣ್ಣ, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತ್‌ಕುಮಾರ್, ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ನಂದೀಶ್ ಅಂಚೆ ಮತ್ತಿತರರು ಉಪಸ್ಥಿತರಿದ್ದರು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮೈಸೂರು
ಮೈಸೂರು–ನಂಜನಗೂಡು ರಸ್ತೆ, ಬಂಡಿಪಾಳ್ಯ, ಮೈಸೂರು–570 025
ಇ–ಮೇಲ್: apmcmysore@rediffmail.com apmcmys@gmail.com
ದೂ: 2482725, 2482389, ಫ್ಯಾಕ್ಸ್:(0821)2482389

ಸಂ.ಕೃಉಮಾಸ(ಮೈ)/92/2022–23 ದಿನಾಂಕ: 29.04.2022

ಪ್ರಕಟಣೆ

2022–23ನೇ ಸಾಲಿಗೆ ಈ ಸಮಿತಿಯ ವ್ಯಾಪ್ತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣ ಮತ್ತು ಉಪ ಮಾರುಕಟ್ಟೆ ಪ್ರಾಂಗಣಗಳಲ್ಲಿ ಸಮಿತಿಯ ಚರ ಮತ್ತು ಸ್ಥಿರ ಆಸ್ತಿಯನ್ನು ಸಂರಕ್ಷಣೆ ಮಾಡಲು ಭದ್ರತಾ ಸೇವೆ ಒದಗಿಸಲು ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಕಾರ್ಮಿಕ ಇಲಾಖಾ ಕನಿಷ್ಠ ವೇತನಕ್ಕನುಗುಣವಾಗಿ ಅರ್ಹ ಮಾನವ ಸಂಪನ್ಮೂಲ ಒದಗಿಸುವ ಸಂಸ್ಥೆ/ವ್ಯಕ್ತಿಗಳಿಂದ ಹಾಗೂ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದ 'ಎ' ಮತ್ತು 'ಬಿ' ಬ್ಲಾಕ್, ಬಾಳೆಕಾಯಿ ಮಾರುಕಟ್ಟೆ ಸಗಟು ಹೂವಿನ ಮಾರುಕಟ್ಟೆಗಳಲ್ಲಿ, ಸಮಿತಿಯ ಸಗಟು ಹಣ್ಣುಗಳ ಮಾರುಕಟ್ಟೆ ಉಪ ಪ್ರಾಂಗಣದಲ್ಲಿ ಮತ್ತು ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಸಗಟು ತರಕಾರಿ ಮಾರುಕಟ್ಟೆಯಲ್ಲಿ ಬೀಳುವ ಕಸಕಡ್ಡಿ, ತ್ಯಾಜ್ಯ ವಸ್ತುಗಳನ್ನು ಸ್ವಚ್ಛಗೊಳಿಸುವ ಹಾಗೂ ಸೂಕ್ತ ಸ್ಥಳಕ್ಕೆ ಸ್ಥಳಾಂತರಿಸುವ ಸಂಬಂಧ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://www.eproc.karnataka.gov.in** ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಕರೆದಿರುವ ಟೆಂಡರ್‌ನ ವಿವರ ಈ ಕೆಳಕಂಡಂತಿರುತ್ತದೆ.

ಕ್ರ.ಸಂ.	ಪ್ರಕಟಣೆ ಸಂ.	ಉದ್ದೇಶ
1	ಸಂ.ಕೃಉಮಾಸ(ಮೈ)/ಭದ್ರತೆ/91/2022–23 ದಿನಾಂಕ: 29.04.2022	2022–23ನೇ ಸಾಲಿಗೆ ಸಮಿತಿಯ ಪ್ರಾಂಗಣ ಹಾಗೂ ಸಗಟು ಹಣ್ಣುಗಳ ಮಾರುಕಟ್ಟೆ ಉಪ ಪ್ರಾಂಗಣಗಳ ಚರ ಮತ್ತು ಸ್ಥಿರಾಸ್ತಿಗಳ ಸಂರಕ್ಷಣೆ ಮತ್ತು ಇತರೆ ಸೇವೆಗಳಿಗೆ.
2	ಸಂ.ಕೃಉಮಾಸ(ಮೈ)/ಸತಮಾ/88 /2022–23 ದಿನಾಂಕ: 29.04.2022	2022–23ನೇ ಸಾಲಿಗೆ ಸಗಟು ತರಕಾರಿ ಮಾರುಕಟ್ಟೆ ಪ್ರದೇಶದ ಸ್ವಚ್ಛತಾ ಕೆಲಸ.
3	ಸಂ.ಕೃಉಮಾಸ(ಮೈ)/ಸ್ವಚ್ಛತೆ/ 89/2022–23 ದಿನಾಂಕ: 29.04.2022	2022–23ನೇ ಸಾಲಿಗೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದ 'ಎ' ಮತ್ತು 'ಬಿ' ಬ್ಲಾಕ್, ಸಗಟು ಹೂವಿನ ಮಾರುಕಟ್ಟೆ ಬಾಳೆಕಾಯಿ ಮಾರುಕಟ್ಟೆ ಹಾಗೂ ನೌಕರರ ವಸತಿ ಗೃಹ ಸಮುಚ್ಚಯದ ಆವರಣವನ್ನೊಳಗೊಂಡಂತೆ ಸ್ವಚ್ಛತಾ ಕೆಲಸ.
4	ಸಂ.ಕೃಉಮಾಸ(ಮೈ)/90/ 2022–23 ದಿನಾಂಕ: 29.04.2022	2022–23ನೇ ಸಾಲಿಗೆ ಸಗಟು ಹಣ್ಣುಗಳ ಮಾರುಕಟ್ಟೆ ಉಪ ಪ್ರಾಂಗಣದ ಸ್ವಚ್ಛತಾ ಕೆಲಸ.

ಮೇಲಿನ ಎಲ್ಲಾ ಟೆಂಡರ್‌ಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ವೇಳಾ ಪಟ್ಟಿ

1) ಪೂರ್ವಭಾವಿ ಸಭೆ ದಿನಾಂಕ: ದಿ:10.05.2022ರ ಬೆಳಿಗ್ಗೆ 11.00 ಗಂಟೆಗೆ. **2)** ಟೆಂಡರ್ ಸಲ್ಲಿಸುವ ಕೊನೆಯ ದಿ:17.05.2022ರ ಅಪರಾಹ್ನ 4.00 ಘಂಟೆವರೆಗೆ. **3)** ತಾಂತ್ರಿಕ ಟೆಂಡರ್ ತೆರೆಯುವ ದಿ:19.05.2022ರ ಅಪರಾಹ್ನ 4.00 ಘಂಟೆಗೆ. **4)** ಆರ್ಥಿಕ ಟೆಂಡರ್ ತೆರೆಯುವ ದಿ:21.05.2022ರ ಅಪರಾಹ್ನ 4.00 ಘಂಟೆಗೆ. **5)** ಟೆಂಡರ್ ತೆರೆಯುವ ಸ್ಥಳ: ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮೈಸೂರು.

ಹೆಚ್ಚಿನ ಮಾಹಿತಿಗಾಗಿ ಕಛೇರಿಯನ್ನು ಸಂಪರ್ಕಿಸುವುದು: ದೂರವಾಣಿ ಸಂ. 0821–2482725

ಸಹಿ/– (ಕುಮಾರಸ್ವಾಮಿ,ಆರ್ ಎಂ.)
ಕಾರ್ಯದರ್ಶಿ, ಕೃ. ಉ. ಮಾ. ಸ., ಮೈಸೂರು

ಸಹಿ/– (ಅನಿಲಕುಮಾರಿ ಎಂ.)
ಆಡಳಿತಾಧಿಕಾರಿ,ಕೃ. ಉ. ಮಾ. ಸ., ಮೈಸೂರು.

DIPR/DDMYS/MCA/60/2022-23